ಮಂಗಳವಾರ, ಅಕ್ಟೋಬರ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 277 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಜಾಗತಿಕ ನಾಯಕರ 'ಭಂಡಾರ' ಬಯಲು

ರೈತ ನಾಯಕರಿಗೆ 'ಸುಪ್ರೀಂ' ನೋಟಿಸ್ 6

'ಅಕ್ಷರ ಗುರು'ಗಳ ಸುತ್ತ ಅಂಧಕಾರ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,299 ▲	17,691 ▲	₹ 47,950 (ಬೆಂಗಳೂರು)	₹62,000 (ಬೆಂಗಳೂರು)	74.31 ▼

ಲಖಿಂಪುರ–ಖೇರಿ ಹಿಂಸಾಚಾರ: ಪ್ರತಿಭಟನಕಾರರು–ಸರ್ಕಾರದ ನಡುವೆ ಒಪ್ಪಂದ

ಮೃತರ ಪರಿವಾರಕ್ಕೆ ₹45 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಲಖಿಂಪುರ–ಖೇರಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರು ಮತ್ತು ಸರ್ಕಾರದ ನಡುವೆ ಸೋಮವಾರ ಒಪ್ಪಂದ ಏರ್ಪಟ್ಟಿದೆ. ನಾಲ್ವರು ರೈತರು ಸೇರಿ ಎಂಟು ಮಂದಿಯ ಸಾವಿಗೆ ಕಾರಣವಾದ ಪ್ರಕರಣದ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಸರ್ಕಾರ ಆದೇಶಿಸಿದೆ.

ಮೃತರ ಕುಟುಂಬಕ್ಕೆ ತಲಾ ₹45 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹10 ಲಕ್ಷ ಪರಿಹಾರ ನೀಡಲು ಒಪ್ಪಿದೆ. ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ, ನಾಲ್ವರು ರೈತರ ಮೇಲೆ ಎಸ್‌ಯುವಿ ಹರಿಸಿದ ಆರೋಪ ಹೊತ್ತಿರುವ ಆಶಿಶ್ ಮಿಶ್ರಾ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ.

ಮೃತ ರೈತರ ಅಂತ್ಯ ಸಂಸ್ಕಾರಕ್ಕೆ ರೈತ ನಾಯಕರು ಒಪ್ಪಿದ್ದಾರೆ, ಜತೆಗೆ ಅವರು ಪ್ರತಿಭಟನೆಯನ್ನೂ ಕೊನೆಗೊಳಿಸಲಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ಅವರು ಲಖಿಂಪುರ–ಖೇರಿಯಲ್ಲಿ ಸೋಮವಾರ ಪ್ರಕಟಿಸಿದರು.

6ನೇ ಪುಟ ನೋಡಿ

ಲಖಿಂಪುರ–ಖೇರಿ ಘಟನೆಯನ್ನು ಖಂಡಿಸಿ ಜಾರ್ಖಂಡ್‌ನ ರಾಂಚಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಪ್ರತಿಕೃತಿ ದಹಿಸಿದರು –ಪಿಟಿಐ ಚಿತ್ರ

ಕಾಯ್ದೆಗಳೇ ಇಲ್ಲ, ಪ್ರತಿಭಟನೆ ಏಕೆ: 'ಸುಪ್ರೀಂ' ಪ್ರಶ್ನೆ

ನವದೆಹಲಿ (ಪಿಟಿಐ): ಕಾಯ್ದೆಯೊಂದರ ಸಿಂಧುತ್ವವನ್ನು ಸಾಂವಿಧಾನಿಕ ನ್ಯಾಯಾಲಯದಲ್ಲಿ ಪ್ರಶ್ನಿಸಿದ ಬಳಿಕ ಅದೇ ಕಾಯ್ದೆಯ ವಿರುದ್ಧ ಜನರು ಅಥವಾ ಸಂಘಟನೆಗಳು ಪ್ರತಿಭಟನೆ ನಡೆಸಬಹುದೇ ಎಂಬುದನ್ನು ಪರಿಶೀಲನೆಗೆ ಒಳಪಡಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಜಂತರ್ ಮಂತರ್‌ನಲ್ಲಿ ಕೃಷಿ ಕಾಯ್ದೆಗಳ ವಿರುದ್ಧ 'ಸತ್ಯಾಗ್ರಹ'ಕ್ಕೆ ಅವಕಾಶ ಕೊಡಬೇಕು ಎಂದು ಕೋರಿ ರೈತ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ವಿಚಾರಣೆ ನಡೆಸಿತು. ಕಾಯ್ದೆಗಳಿಗೆ ಈಗಾಗಲೇ ತಡೆ ನೀಡಲಾಗಿದೆ. ಹಾಗಿದ್ದೂ ಪ್ರತಿಭಟನೆ ನಡೆಸುತ್ತಿರುವುದು ಏಕೆ ಎಂದು ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಿ.ಟಿ. ರವಿಕುಮಾರ್ ಅವರ ಪೀಠವು ಪ್ರಶ್ನಿಸಿತು.

'ನೀವು ಪ್ರತಿಭಟನೆ ಮುಂದುವರಿಸಲು ಬಯಸಿದ್ದೀರಿ. ಯಾವುದರ ವಿರುದ್ಧ ಪ್ರತಿಭಟನೆ? ಕಾಯ್ದೆ ಈಗ ಜಾರಿಯಲ್ಲಿ ಇಲ್ಲ. ಈ ನ್ಯಾಯಾಲಯವೇ ಕಾಯ್ದೆಗಳಿಗೆ ತಡೆ ಕೊಟ್ಟಿದೆ. ಕಾಯ್ದೆಗಳನ್ನು ಜಾರಿಗೆ ತರುವುದಿಲ್ಲ ಎಂದು ಸರ್ಕಾರ ಭರವಸೆ ಕೊಟ್ಟಿದೆ. ಮತ್ತೆ ಪ್ರತಿಭಟನೆ ಯಾವುದಕ್ಕಾಗಿ' ಎಂದು ಕೋರ್ಟ್ ಪ್ರಶ್ನಿಸಿದೆ.

ಇನ್ನಷ್ಟು ಸುದ್ದಿಗಳು 6

ಪ್ರಿಯಾಂಕಾ ಸೇರಿ ಹಲವರ ಬಂಧನ

ಲಖಿಂಪುರ–ಖೇರಿ ಘಟನೆಯು ರಾಜಕೀಯ ಸಂಚಲನಕ್ಕೆ ಕಾರಣವಾಗಿದೆ. ವಿವಿಧ ಪಕ್ಷಗಳ ನಾಯಕರು ಸ್ಥಳದತ್ತ ಧಾವಿಸಲು ಯತ್ನಿಸಿದರೂ ಸಾಧ್ಯವಾಗಿಲ್ಲ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ಬಿಎಸ್‌ಪಿ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಮಿಶ್ರಾ ಮತ್ತು ಇತರರು ಲಖಿಂಪುರ–ಖೇರಿಗೆ ಹೋಗಲು ಪ್ರಯತ್ನಿಸಿದ್ದಾರೆ. ಅವರನ್ನು ತಡೆಯಲಾಗಿದೆ ಅಥವಾ ಬಂಧಿಸಲಾಗಿದೆ. ಕೆಲವರನ್ನು ಗೃಹ ಬಂಧನದಲ್ಲಿ ಇರಿಸಲಾಗಿದೆ.

ಪ್ರಿಯಾಂಕಾ ಮತ್ತು ಕಾಂಗ್ರೆಸ್ ಸಂಸದ ದೀಪೇಂದರ್ ಹೂಡಾ ಅವರನ್ನು ಸೀತಾಪುರ ಸಮೀಪದ ಹರ್‌ಗಾಂವ್ ಎಂಬಲ್ಲಿ ಭಾನುವಾರ ರಾತ್ರಿಯೇ ಬಂಧಿಸಲಾಗಿದೆ. ಅವರನ್ನು ಪಿಎಸಿ ಅತಿಥಿಗೃಹದಲ್ಲಿ ಇರಿಸಲಾಗಿದೆ.

6ನೇ ಪುಟ ನೋಡಿ

ಉಸ್ತುವಾರಿ ಪಟ್ಟಿಗೆ ವಿಜಯೇಂದ್ರ

ಹೆಸರು ಸೇರಿಸದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದ ಬೆಂಬಲಿಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾನಗಲ್ ಮತ್ತು ಸಿಂದಗಿ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಬಿಜೆಪಿ ಉಸ್ತುವಾರಿಗಳ ಪಟ್ಟಿಯಲ್ಲಿ ಪಕ್ಷದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೆಸರು ಸೇರಿಸದ ಬಗ್ಗೆ ಅವರ ಬೆಂಬಲಿಗರು ಸಾಮಾಜಿಕ ಜಾಲತಾಣದಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇದರ ಬೆನ್ನಲ್ಲೇ ಹಾನಗಲ್ ಕ್ಷೇತ್ರದ ಉಸ್ತುವಾರಿ ಪಟ್ಟಿಗೆ ವಿಜಯೇಂದ್ರ ಹೆಸರನ್ನು ಸೋಮವಾರ ಸಂಜೆ ಸೇರಿಸಲಾಗಿದೆ.

ವಿಜಯೇಂದ್ರ ಹೆಸರನ್ನು ಉಸ್ತುವಾರಿ ಪಟ್ಟಿಗೆ ಸೇರಿಸದ ಕಾರಣ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಿರುದ್ಧ ವಿಜಯೇಂದ್ರ ಅಭಿಮಾನಿಗಳು ಕಿಡಿ ಕಾರಿದ್ದರು.

ಅಭಿಮಾನಿಗಳ ಆಕ್ರೋಶಕ್ಕೆ

ವಿಜಯೇಂದ್ರ

ಪ್ರತಿಕ್ರಿಯಿಸಿದ್ದ ವಿಜಯೇಂದ್ರ, 'ಉಸ್ತುವಾರಿ ಪಟ್ಟಿಯಲ್ಲಿ ನನ್ನ ಹೆಸರಿಲ್ಲ ಎನ್ನುವ ಕಾರಣಕ್ಕೆ ಕೆಲವು ಅಭಿಮಾನಿಗಳು, ಕಾರ್ಯಕರ್ತರು ಹಿರಿಯ ನಾಯಕರ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದು ಸರಿಯಲ್ಲ, ಇದನ್ನು ಖಂಡಿಸುತ್ತೇನೆ' ಎಂದಿದ್ದರು.

'ಎರಡೂ ಕ್ಷೇತ್ರಗಳಲ್ಲಿ ಪ್ರಚಾರ ಮಾಡುವುದೂ ಸೇರಿದಂತೆ ಪಕ್ಷ ನೀಡುವ ಜವಾಬ್ದಾರಿ ನಿರ್ವಹಿಸಲು ಬದ್ಧನಾಗಿದ್ದೇನೆ. ಪಕ್ಷದ ಗೆಲುವೇ ನಮಗೆ ಮುಖ್ಯ. ಭಿನ್ನಾಭಿಪ್ರಾಯದ ಧ್ವನಿಗಳಿಂದ ಕಾರ್ಯಕರ್ತರಲ್ಲಿ ಗೊಂದಲ ಮೂಡುತ್ತದೆ. ಇದರಿಂದ ವಿರೋಧ ಪಕ್ಷಗಳಿಗೆ ಪರೋಕ್ಷ ನೆರವು ನೀಡಿದಂತಾಗುತ್ತದೆ' ಎಂದು ಅವರು ಹೇಳಿದ್ದರು.

'ಪಕ್ಷದ ತೀರ್ಮಾನದಂತೆ ನಮ್ಮ ಎಲ್ಲ ನಾಯಕರ ಮಾರ್ಗದರ್ಶನದಲ್ಲಿ, ಬಿಜೆಪಿ ಅಭ್ಯರ್ಥಿಗಳ ಗೆಲುವಿಗಾಗಿ ನಾವು ಕಾರ್ಯ ನಿರ್ವಹಿಸೋಣ. ಪಕ್ಷಕ್ಕೆ ಮುಜುಗರ ತರುವ ಯಾವುದೇ ವಿಷಯಕ್ಕೂ ನನ್ನ ಸಹಮತ ಇಲ್ಲ' ಎಂದಿದ್ದರು.

ಆಕ್ರೋಶದ ನುಡಿಗಳು: 'ಸ್ವಂತ ಕ್ಷೇತ್ರದಲ್ಲಿ ಗೆಲ್ಲಲು ಕಷ್ಟಪಡುವರೆಲ್ಲರೂ ಉಸ್ತುವಾರಿಗಳು. ಯಡಿಯೂರಪ್ಪ ಮತ್ತು ನಿಮಗೆ ಬೆಲೆ ಕೊಡದ ಪಕ್ಷ ನಮಗೆ ಬೇಡ. ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಕಾದಿದೆ...' ಎಂದು ಮೋಹನ್ ಮೋನಿ ಎಂಬುವರು ಟ್ವೀಟ್ ಮಾಡಿದ್ದಾರೆ.

'ವಿಜಯೇಂದ್ರ ಬೆಳವಣಿಗೆಯನ್ನು ಸಹಿಸದ ಬಿ.ಎಲ್.ಸಂತೋಷ್ ಕುತಂತ್ರ ನಡೆಸಿ ಉಸ್ತುವಾರಿ ತಪ್ಪಿಸಿದ್ದಾರೆ. ಸಂತೋಷ್ ಹೇಳಿದಂತೆ ಕೇಳುವ ನಳಿನ್ ಕುಮಾರ್ ಕಟೀಲ್ ಅವರು ವಿಜಯೇಂದ್ರ ಉಸ್ತುವಾರಿ ತಪ್ಪಲು ಪಿತೂರಿ ನಡೆಸಿದ್ದಾರೆ' ಎಂದು ಟ್ವೀಟ್ ಮೂಲಕ ಇನ್ನು ಕೆಲವರು ಹರಿಹಾಯ್ದಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಭೆ ನಿರ್ಣಯ

'ಸಮಗ್ರ ಕನ್ನಡ ಭಾಷಾ ಮಸೂದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ರಚನೆ, ಭಾಷಾ ಬಳಕೆ, ಶಿಕ್ಷಣ ಮತ್ತು ಸಂಶೋಧನೆ, ಉದ್ಯೋಗ, ನ್ಯಾಯಾಲಯ, ಮಾಹಿತಿ ತಂತ್ರಜ್ಞಾನ, ಸಾರ್ವಜನಿಕವಾಗಿ ಎಲ್ಲ ಹಂತಗಳಲ್ಲೂ ಕನ್ನಡ ಬಳಕೆಗಾಗಿ ಪ್ರತ್ಯೇಕ ಮಾರ್ಗಸೂಚಿ ರೂಪಿಸಲು ಸಮಗ್ರ ಕನ್ನಡ ಭಾಷಾ (ಪ್ರಸಾರ ಮತ್ತು ವ್ಯಾಪಕ ಬಳಕೆ) ಮಸೂದೆ ಮಂಡಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸರ್ಕಾರವನ್ನು ಒತ್ತಾಯಿಸಿದೆ.

ವಿಧಾನಮಂಡಲದ ಮುಂದಿನ ಅಧಿವೇಶನದಲ್ಲಿ ಈ ಮಸೂದೆ ಮಂಡಿಸಬೇಕು. ಈ ಮೂಲಕ ಕನ್ನಡ ಭಾಷೆ ಬಳಕೆಗೆ ಅಧಿಕೃತ ಮಾನ್ಯತೆ ತಂದುಕೊಡಬೇಕು ಎಂದೂ ಹೇಳಿದೆ. ಪ್ರಾಧಿಕಾರ ಕರೆದಿದ್ದ ಸಭೆಯಲ್ಲಿ ಕನ್ನಡ ಪರ ಚಿಂತಕರು, ಕಾನೂನು ಸಲಹೆಗಾರರು, ಸಾಹಿತಿಗಳು, ಹೋರಾಟಗಾರರು ಈ ನಿರ್ಣಯ ತೆಗೆದುಕೊಂಡಿದ್ದಾರೆ.

ಮಸೂದೆಯನ್ನು ರೂಪಿಸುವ ಸಂಬಂಧ ಕನ್ನಡ ಪರ ಚಿಂತಕರು, ಕಾನೂನು ಪಂಡಿತರು, ಸಾಹಿತಿಗಳು, ಹೋರಾಟಗಾರರು, ಕನ್ನಡ ಮತ್ತು ಸಂಸ್ಕೃತಿ ಚಿಂತಕರು, ವಾಣಿಜ್ಯ ಮತ್ತು ಕೈಗಾರಿಕಾ ತಜ್ಞರು, ಭಾಷಾ ವಿಜ್ಞಾನಿಗಳನ್ನು ಒಳಗೊಂಡ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಕನ್ನಡದ ಅಭಿವೃದ್ಧಿ ಮತ್ತು ಬಳಕೆಗೆ ಕಾಲ ಕಾಲಕ್ಕೆ ಆದೇಶಗಳನ್ನು ಹೊರಡಿಸುತ್ತಾ ಬಂದಿದ್ದರೂ, ಸಮನ್ವಯದ ಕೊರತೆಯಿಂದ ಕನ್ನಡ ಪರ ಕಾಳಜಿಯ ಆದೇಶಗಳು ಅನುಷ್ಠಾನಗೊಂಡಿಲ್ಲ. ಬೇರೆ ರಾಜ್ಯಗಳಲ್ಲೂ ಇಂತಹದೇ ಸ್ಥಿತಿ ಉದ್ಭವಿಸಿದಾಗ ಅದಕ್ಕೆ ಪರಿಹಾರವಾಗಿ ಭಾಷಾ ಬಳಕೆಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನೂ ಒಟ್ಟುಗೂಡಿಸಿ 'ಸಮಗ್ರ ಭಾಷಾ ಬಳಕೆ ಕಾಯ್ದೆ' ರೂಪಿಸಿವೆ. ಆದ್ದರಿಂದ, ರಾಜ್ಯದಲ್ಲಿ ಮಸೂದೆಯ ಅಗತ್ಯವಿದೆ ಎಂದು ಸಭೆಯಲ್ಲಿ ಒಮ್ಮತಕ್ಕೆ ಬರಲಾಯಿತು.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಸುಬ್ರಹ್ಮಣ್ಯ, ಸಾಹಿತಿ ದೊಡ್ಡರಂಗೇಗೌಡ, ಸಾಮಾಜಿಕ ಕಾರ್ಯಕರ್ತೆ ಮಾಳವಿಕಾ ಅವಿನಾಶ್, ಸಂಸದೀಯ ವ್ಯವಹಾರಗಳ ಇಲಾಖೆ ನಿವೃತ್ತ ಕಾರ್ಯದರ್ಶಿ ದ್ವಾರಕನಾಥ ಬಾಬು, ಕನ್ನಡಪರ ಹೋರಾಟಗಾರ ರಾ.ನಂ. ಚಂದ್ರಶೇಖರ್ ಸಭೆಯಲ್ಲಿ ಇದ್ದರು.

ಫೇಸ್‌ಬುಕ್, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ ಡೌನ್

ನವದೆಹಲಿ: ಪ್ರಪಂಚದ ಅತ್ಯಂತ ಜನಪ್ರಿಯ ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಮತ್ತು ಫೇಸ್‌ಬುಕ್ ಮೆಸೆಂಜರ್‌ಗಳು ಸೋಮವಾರ ರಾತ್ರಿಯಿಂದ ಸ್ಥಗಿತಗೊಂಡಿವೆ.

ಬಳಕೆದಾರರು ಆ್ಯಪ್‌ಗಳ ಬಳಕೆಯಲ್ಲಿ ಎದುರಿಸುತ್ತಿರುವ ತೊಂದರೆ ಕುರಿತು ಟ್ವಿಟರ್‌ನಲ್ಲಿ ಚರ್ಚೆ ನಡೆಸಿದ್ದಾರೆ. ಹೀಗಾಗಿ ಫೇಸ್‌ಬುಕ್, ವಾಟ್ಸ್‌ಆ್ಯಪ್ ಎಂಬ ವಿಷಯಗಳು ಟ್ವಿಟರ್‌ನಲ್ಲಿ ಟ್ರೆಂಡ್ ಆಗಿವೆ.

ವೆಬ್‌ಸೈಟ್‌ಗಳು ಮತ್ತು ಸೇವೆಗಳ ಸ್ಥಿತಿಯ ಬಗ್ಗೆ ಮಾಹಿತಿ ಒದಗಿಸುವ ವೆಬ್‌ಸೈಟ್ 'ಡೌನ್ ಡಿಟೆಕ್ಟರ್' ಪ್ರಕಾರ ಫೇಸ್‌ಬುಕ್ ಒಡೆತನದ ಸಾಮಾಜಿಕ ಮಾಧ್ಯಮಗಳಲ್ಲಿ ಸಂಜೆ ಐದು ಗಂಟೆಯಿಂದಲೇ ಸಮಸ್ಯೆ ಎದುರಾಗಿತ್ತು. ಪತ್ರಿಕೆ ಮುದ್ರಣಕ್ಕೆ ಹೋಗುವವರೆಗೂ ಈ ಸಮಸ್ಯೆ ಬಗೆಹರಿದಿರಲಿಲ್ಲ.

ತೆರಿಗೆರಹಿತ ದೇಶಗಳಲ್ಲಿನ ಹೂಡಿಕೆ ಮಾಹಿತಿ ಬಯಲು

ಪಟ್ಟಿಯಲ್ಲಿ ಸಚಿನ್ ತೆಂಡೂಲ್ಕರ್, ಅನಿಲ್ ಅಂಬಾನಿ ಹೆಸರು

ನವದೆಹಲಿ (ಪಿಟಿಐ): 300ಕ್ಕೂ ಹೆಚ್ಚು ಭಾರತೀಯರು, ವಿವಿಧ ದೇಶಗಳ ರಾಜಕಾರಣಿಗಳು, ಉದ್ಯಮಿಗಳು, ಸಿರಿವಂತರು ತೆರಿಗೆ ರಹಿತ ದೇಶಗಳಲ್ಲಿ ಮಾಡಿದ ಹೂಡಿಕೆ ಮಾಹಿತಿ ಬಹಿರಂಗವಾಗಿದೆ.

ಸೋರಿಕೆಯಾದ ದಾಖಲೆಗಳನ್ನು ಅಂತರರಾಷ್ಟ್ರೀಯ ತನಿಖಾ ಪತ್ರಕರ್ತರ ಒಕ್ಕೂಟವು (ಐಸಿಐಜೆ) ಬಿಡುಗಡೆ ಮಾಡಿದೆ. 'ಪಂಡೋರ ಪೇಪರ್ಸ್' ಹೆಸರಿನ ಈ ದಾಖಲೆಗಳಲ್ಲಿ 30ಕ್ಕೂ ಹೆಚ್ಚು ದೇಶಗಳ ಮುಖ್ಯಸ್ಥರು ಅಥವಾ ಮಾಜಿ ಮುಖ್ಯಸ್ಥರು ಅಥವಾ ಅವರ ಕುಟುಂಬದವರು, ನಿಕಟವರ್ತಿಗಳು, ಸಚಿವರು, ಅಧಿಕಾರಿಗಳು ಮಾಡಿರುವ ಹೂಡಿಕೆಯ ಮಾಹಿತಿ ಇದೆ.

ಸಚಿನ್ ತೆಂಡೂಲ್ಕರ್, ಅನಿಲ್

ಸಚಿನ್

ಅನಿಲ್ ಅಂಬಾನಿ

ಅಂಬಾನಿ, ವಿನೋದ್ ಅದಾನಿ, ಜಾಕಿಶ್ರಾಫ್, ಕಿರಣ್ ಮಜುಂದಾರ್ ಶಾ ಅವರ ಪತಿ, ನೀರಾ ರಾಡಿಯಾ, ಸತೀಶ್ ಶರ್ಮಾ ಸೇರಿದಂತೆ ಭಾರತದ ಹಲವರು ಈ ಪಟ್ಟಿಯಲ್ಲಿದ್ದಾರೆ. ಪಾಕ್ ಪ್ರಧಾನಿ ಇಮ್ರಾನ್ ಖಾನ್ ನಿಕಟವರ್ತಿಗಳು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಆಪ್ತರು, ಕೀನ್ಯಾ ಅಧ್ಯಕ್ಷ, ಜೋರ್ಡನ್ ದೊರೆ, ಗಾಯಕಿ ಶಕೀರಾ ಸೇರಿದಂತೆ ಖ್ಯಾತನಾಮರು ಮಾಡಿದ ಹೂಡಿಕೆಗಳ ವಿವರಗಳನ್ನು ಪ್ರಕಟಿಸಲಾಗಿದೆ.

'ತಮ್ಮ ಪತಿ ವಿದೇಶದಲ್ಲಿ ಹೊಂದಿರುವ ಟ್ರಸ್ಟ್ ಕಾನೂನುಬದ್ಧವಾಗಿದ್ದು, ಸ್ವತಂತ್ರ ಟ್ರಸ್ಟಿಗಳು ನಿರ್ವಹಿಸುತ್ತಿದ್ದಾರೆ' ಎಂದು ಕಿರಣ್ ಮಜುಂದಾರ್ ಶಾ ಟ್ವೀಟ್ ಮಾಡಿದ್ದಾರೆ. 'ಹೂಡಿಕೆ ನ್ಯಾಯಸಮ್ಮತವಾಗಿದ್ದು, ತೆರಿಗೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ' ಎಂದು ತೆಂಡೂಲ್ಕರ್ ಅವರ ವಕೀಲರು ತಿಳಿಸಿದ್ದಾರೆ.

2.94 ಟೆರಾಬೈಟ್‌ನಷ್ಟು ದತ್ತಾಂಶದಲ್ಲಿ 200ಕ್ಕೂ ಹೆಚ್ಚು ದೇಶಗಳ ಶ್ರೀಮಂತರ ಒಡೆತನದಲ್ಲಿರುವ ಸಂಸ್ಥೆಗಳನ್ನು ಹೆಸರಿಸಲಾಗಿದೆ. ವಿದೇಶಗಳ 14 ಸೇವಾ ಪೂರೈಕೆದಾರರ ಗೋಪ್ಯ ದಾಖಲೆಗಳು ಇವಾಗಿವೆ.

6ನೇ ಪುಟ ನೋಡಿ

ಅತ್ಯಾಚಾರ ಯತ್ನ, ಬೆಂಕಿ ಹಚ್ಚಿ ಮಹಿಳೆ ಕೊಲೆ

ಸುರಪುರ (ಯಾದಗಿರಿ ಜಿಲ್ಲೆ): ವ್ಯಕ್ತಿಯೊಬ್ಬ ಮಧ್ಯರಾತ್ರಿ ಮಹಿಳೆಯ ಮನೆಗೆ ನುಗ್ಗಿ ಅತ್ಯಾಚಾರಕ್ಕೆ ಯತ್ನಿಸಿದ್ದು, ತಪ್ಪಿಸಿಕೊಳ್ಳಲು ಯತ್ನಿಸಿದ ಆಕೆಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ ಪ್ರಕರಣ ತಾಲ್ಲೂಕಿನ ಗ್ರಾಮವೊಂದರಲ್ಲಿ ನಡೆದಿದೆ.

5

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಬಿಲ್ಡರ್-ಖರೀದಿದಾರ ಮಾದರಿ ಒಪ್ಪಂದ' ಅಗತ್ಯ: 'ಸುಪ್ರೀಂ'

ನವದೆಹಲಿ: ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಡೆವಲಪರ್‌ಗಳಿಂದ ಉದ್ದೇಶಪೂರ್ವಕ ವಿಳಂಬ ಮತ್ತು ಫ್ಲಾಟ್ ಖರೀದಿದಾರರ ಶೋಷಣೆ ತಪ್ಪಿಸಲು ದೇಶದಾದ್ಯಂತ 'ಬಿಲ್ಡರ್-ಖರೀದಿದಾರರ ಮಾದರಿ ಒಪ್ಪಂದ' ರೂಪಿಸುವ ಕೋರಿಕೆಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರ್ಧರಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠವು, 'ಬಿಲ್ಡರ್‌ಗಳು ಒಪ್ಪಂದದಲ್ಲಿ ಷರತ್ತುಗಳನ್ನು ವಿಧಿಸಲು ಪ್ರಯತ್ನಿಸುತ್ತಿರುತ್ತಾರೆ, ಅದು ಸಾಮಾನ್ಯ ಜನರಿಗೆ ತಿಳಿದಿರುವುದಿಲ್ಲ. ಲಕ್ಷಾಂತರ ಮಂದಿ ಮನೆ ಖರೀದಿದಾರರ ಹಿತಾಸಕ್ತಿಗಳನ್ನು ರಕ್ಷಿಸಲು ಕೇಂದ್ರ ಸರ್ಕಾರವು ಏಕರೂಪವಾದ ಬಿಲ್ಡರ್-ಖರೀದಿದಾರರ ಒಪ್ಪಂದ ರೂಪಿಸುವ ಅಗತ್ಯವಿದೆ. ಇದು ಖರೀದಿದಾರರ ರಕ್ಷಣೆಯ ಪ್ರಮುಖ ವಿಷಯ' ಎಂದು ಹೇಳಿದೆ.

ಕೇಂದ್ರವು ಒಮ್ಮೆ ಮಾದರಿ ಖರೀದಿದಾರ-ಬಿಲ್ಡರ್ ಒಪ್ಪಂದವನ್ನು ರೂಪಿಸಿದರೆ, ಅದನ್ನು ಅನುಸರಿಸುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಬಹುದು. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಪ್ರತಿಕ್ರಿಯಿಸಬೇಕು ಎಂದು ಪೀಠ ಹೇಳಿದೆ.

ಬಿಜೆಪಿ ನಾಯಕ ಮತ್ತು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಮತ್ತು ಇತರರು ಸಲ್ಲಿಸಿದ ಪಿಐಎಲ್‌ಗಳ ವಿಚಾರಣೆ ನಡೆಸಿದ ಪೀಠವು, ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಹಿರಿಯ ವಕೀಲ ವಿಕಾಸ್ ಸಿಂಗ್ ಮತ್ತು ಮೇನಕಾ ಗುರುಸ್ವಾಮಿ ನೇತೃತ್ವದಲ್ಲಿ ಅರ್ಜಿದಾರರು, ರಿಯಲ್ ಎಸ್ಟೇಟ್ ಮತ್ತು ನಿಯಂತ್ರಣ ಪ್ರಾಧಿಕಾರ ಕಾಯ್ದೆ 2016ರ (ರೇರಾ) ಅಡಿಯಲ್ಲಿ ರಾಜ್ಯಗಳು ಅಳವಡಿಸಿಕೊಳ್ಳಲು ಒಂದು ಮಾದರಿ ಒಪ್ಪಂದವಿರಬೇಕು. ಕೇಂದ್ರವು ಈ ವಿಷಯದ ಬಗ್ಗೆ ಒಂದು ಏಕರೂಪಾದ ನೀತಿಯನ್ನು ರೂಪಿಸಬೇಕು ಎಂದು ವಾದಿಸಿದರು.

ಇದಕ್ಕೆ ಸಮ್ಮತಿಸಿದ ಪೀಠವು, 'ಇದು ಗ್ರಾಹಕರ ರಕ್ಷಣೆಯ ಪ್ರಮುಖ ವಿಷಯ. ಯಾವುದೇ ಷರತ್ತನ್ನು ಹಾಕುವ ಮೂಲಕ ಬಿಲ್ಡರ್‌ಗಳು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿತು.

ಜನದಟ್ಟಣೆಯ ಪ್ರದೇಶಗಳಲ್ಲಿ ಹಳೆಯ ಪುಸ್ತಕಗಳ ದರ್ಶನ

ಅಕ್ಷರ ಅಕ್ಕರೆ ಬೆಳೆಸಲು 'ಪುಸ್ತಕ ಗೂಡು'

• ಸಂಧ್ಯಾ ಹೆಗಡೆ

ಮಂಗಳೂರು: ಈ ಗ್ರಾಮದಲ್ಲಿ ಜನರು ಈಗ ಕೆಲಹೊತ್ತು ಮೊಬೈಲ್ ಫೋನ್ ಬದಿಗಿಟ್ಟು ಕೈಯಲ್ಲಿ ಪುಸ್ತಕ ಹಿಡಿಯುತ್ತಾರೆ. ಕುತೂಹಲದಿಂದ ಪುಟಗಳನ್ನು ತಿರುವಿ ಹಾಕುತ್ತಾರೆ. ತಮ್ಮ ಆಸಕ್ತಿಯ ಪುಸ್ತಕಗಳು ಸಿಕ್ಕರೆ ಮನೆಗೆ ಒಯ್ದು, ಮರುದಿನ ಅದೇ ಜಾಗದಲ್ಲಿ ತಂದಿಡುತ್ತಾರೆ.

ಗ್ರಾಮೀಣ ಜನರಲ್ಲಿ ಅಕ್ಷರ ಪ್ರೀತಿ ಬೆಳೆಸುವ ಉದ್ದೇಶದ 'ಪುಸ್ತಕ ವಿನಿಮಯ' ಕಾರ್ಯಕ್ರಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿದೆ. 'ಪುಸ್ತಕ ಗ್ರಾಮ' ಅಭಿಯಾನದ ಅಡಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ 'ಪುಸ್ತಕ ಗೂಡು' ಇಟ್ಟು ಜನರಲ್ಲಿ ಓದುವ ಅಭಿರುಚಿ ಹುಟ್ಟಿಸಲು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಕುಮಾರ್ ಈ ಯೋಜನೆ ರೂಪಿಸಿದ್ದಾರೆ. ಪೈಲೆಟ್ ಯೋಜನೆಯಾಗಿ

ಮಂಗಳೂರು ತಾಲ್ಲೂಕಿನ ಉಳಾಯಿಬೆಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗೂಡಿನ ಪುಸ್ತಕ ಓದಲು ಸೇರಿದ್ದ ಜನರು

ಜಿಲ್ಲೆಯ ಏಳು ತಾಲ್ಲೂಕುಗಳ 17 ಗ್ರಾಮಗಳಲ್ಲಿ 'ಪುಸ್ತಕ ಗೂಡು' ರಚನೆಗೊಂಡಿದೆ.

ಏನಿದು ಪುಸ್ತಕ ಗೂಡು: ಬಸ್ ನಿಲ್ದಾಣ, ಮಾರುಕಟ್ಟೆ ಸೇರಿದಂತೆ ಜನದಟ್ಟಣೆ ಇರುವ ಊರಿನ ಪ್ರಮುಖ ಸ್ಥಳಗಳಲ್ಲಿ ಪುಟ್ಟಗೂಡು ರಚಿಸಿ, ಪುಸ್ತಕಗಳನ್ನು ಇಡಲಾಗುತ್ತದೆ. ನಾಗರಿಕರು ಕುತೂಹಲ ದಿಂದ ಪುಸ್ತಕಗಳನ್ನು ಕೈಗೆತ್ತಿಕೊಂಡು, ಕಣ್ಣು ಹಾಯಿಸುತ್ತಾರೆ.

ಪ್ರಜಾವಾಣಿ ವಿಶೇಷ

'ಜಿಲ್ಲೆಯ ಎಲ್ಲ ತಾಲ್ಲೂಕುಗಳ ಗ್ರಾಮ ಪಂಚಾಯಿತಿಗಳಲ್ಲಿ ಡಿಜಿಟಲ್ ಗ್ರಂಥಾಲಯ ರೂಪಿಸಲಾಗಿದೆ. ಕಂಪ್ಯೂಟರ್, ಇಂಟರ್‌ನೆಟ್ ಸೌಲಭ್ಯಗಳೂ ಇವೆ.

ಪುಸ್ತಕಗಳ ಸಾಂಗತ್ಯವು ವ್ಯಕ್ತಿಯಲ್ಲಿ ಸಕಾರಾತ್ಮಕ ಭಾವವನ್ನು ಬೆಳೆಸುತ್ತದೆ. ಹೀಗಾಗಿ, ಜನಸಂದಣಿ ಇರುವ ಪ್ರದೇಶಗಳನ್ನೇ ಆಯ್ದು 'ಪುಸ್ತಕ ಗೂಡು' ರಚಿಸಲಾಗಿದೆ

ಡಾ. ಕುಮಾರ್
ಜಿಲ್ಲಾ ಪಂಚಾಯಿತಿ ಸಿಇಒ

ಇದರ ಮುಂದುವರಿದ ಭಾಗವಾಗಿ 'ಪುಸ್ತಕ ಗೂಡು' ಪರಿಕಲ್ಪನೆ ಜಾರಿಗೊಳಿಸಲಾಗಿದೆ' ಎಂದು ಡಾ. ಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

4ನೇ ಪುಟ ನೋಡಿ

ಎಐಸಿಸಿ ಅಧ್ಯಕ್ಷೆ ಸೋನಿಯಾ ಕರೆ: ದೆಹಲಿಗೆ ಸಿದ್ದರಾಮಯ್ಯ

ಬೆಂಗಳೂರು: ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಕರೆಯ ಮೇರೆಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಂಗಳವಾರ ಬೆಳಿಗ್ಗೆ ದೆಹಲಿಗೆ ತೆರಳಲಿದ್ದಾರೆ.

ಮಂಗಳವಾರ ಮಧ್ಯಾಹ್ನ 12.30ಕ್ಕೆ ಸೋನಿಯಾ ಅವರ ನಿವಾಸದಲ್ಲಿ ನಡೆಯಲಿರುವ ಸಭೆಯಲ್ಲಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ಹೀಗಾಗಿ, ಬೆಳಿಗ್ಗೆ 7.30ರ ವಿಮಾನದಲ್ಲಿ ಬೆಂಗಳೂರಿನಿಂದ ತೆರಳಲಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

‘ದೆಹಲಿಗೆ ಬರುವಂತೆ ಸೋನಿಯಾ ಗಾಂಧಿ ಅವರಿಂದ ದಿಢೀರ್ ಆಹ್ವಾನ ಬಂದಿದೆ. ಯಾವ ವಿಷಯ ಕುರಿತು ಚರ್ಚಿಸಲು ಎಂಬ ಬಗ್ಗೆ ಮಾಹಿತಿ ಇಲ್ಲ. ಉಪ ಚುನಾವಣೆ ನಡೆಯಲಿರುವ ಹಾನಗಲ್ ಕ್ಷೇತ್ರದ ಟಿಕೆಟ್ ಹಂಚಿಕೆ, ಕೆಪಿಸಿಸಿ ಪುನರ್ ರಚನೆ ಹಾಗೂ ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ’ ಎಂದೂ ಮೂಲಗಳು ಹೇಳಿವೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 07-ಎಕ್ಸ್‌ಇಎನ್-ಡಬ್ಲ್ಯುಎಸ್-ಯುಬಿಎಲ್-ಎಲ್‌ಎಡಬ್ಲ್ಯು-2021-22 ದಿನಾಂಕ : 30-09-2021

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿಯ ಕ್ಯಾರೇಜ್ ರಿಪೇರಿ ಕಾರ್ಯಾಗಾರದ ಬಿವಿಜೆಡ್‌ಐ ಶಾಪ್‌ನಲ್ಲಿ ಎಲ್‌ಹೆಚ್‌ಬಿ ಬೋಗಿ ಅಟೆನ್ಷನ್ ಪ್ರದೇಶದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್.	ರೂ. 37,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30-10-2021 ರಂದು 13.00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು, ಹುಬ್ಬಳ್ಳಿ

ಪಿಯುಬಿ/214/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22

S.W.Railways SWRRLY SWRRLY

ನೈಋತ್ಯ ರೈಲ್ವೆ

ಆಸಕ್ತಿಯ ಅಭಿವ್ಯಕ್ತಿ

ನೈಋತ್ಯ ರೈಲ್ವೆಗಾಗಿ ಜಾಹಿರಾತು ಏಜೆನ್ಸಿಗಳ ಎಂಪಾನೆಲ್ಮೆಂಟ್

ಭಾರತದ ರಾಷ್ಟ್ರಪತಿಗಳ ಪರವಾಗಿ ಮುದ್ರಣ ಮಾಧ್ಯಮದಲ್ಲಿ ಡಿಸ್ಪ್ಲೇ ಅಭಿಯಾನಗಳು, ನೈಋತ್ಯ ರೈಲ್ವೆಯ ಪಿಆರ್ ಕೆಲಸ ಸೇರಿದಂತೆ ರೈಲ್ವೆ ಜಾಹೀರಾತುಗಳ ನಿರ್ವಹಣೆಗಾಗಿ ಜಾಹೀರಾತು ಏಜೆನ್ಸಿಗಳ ಸಮಿತಿಯನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಐಎನ್‌ಎಸ್ ಮಾನ್ಯತೆ ಮತ್ತು ಹುಬ್ಬಳ್ಳಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಪೂರ್ಣ ಪ್ರಮಾಣದ ಕಾರ್ಯಾಲಯ ಹೊಂದಿರುವ ಜಾಹೀರಾತು ಏಜೆನ್ಸಿಗಳು ಎಂಪಾನಲ್‌ಮೆಂಟ್‌ಗೆ ಅರ್ಜಿ ಸಲ್ಲಿಸಬಹುದು.

ಎಲ್ಲಾ ಸಂಬಂಧಿತ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಮುಚ್ಚಿದ ಲಕೋಟೆಯ ಮೇಲೆ "ಜಾಹೀರಾತು ಏಜೆನ್ಸಿಗಳ ಎಂಪನೆಲ್‌ಮೆಂಟ್‌ಗಾಗಿ ಅರ್ಜಿ" ಎಂದು ಬರೆದಿರುವ ಲಕೋಟೆಯನ್ನು ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿರವರ ಕಚೇರಿ, ನೈಋತ್ಯ ರೈಲ್ವೆ, ನಾಲ್ಕನೇ ಮಹಡಿ, ರೈಲು ಸೌಧ, ಗದಗ ರಸ್ತೆ, ಹುಬ್ಬಳ್ಳಿ -580020 ಗೆ ಕಳುಹಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02.11.2021 ರಂದು 15:30 ಗಂಟೆ
ತೆರೆಯುವ ದಿನಾಂಕ: 02.11.2021 ರಂದು 16:00 ಗಂಟೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ

PUB/218/AAV/PRB/SWR/2021-22 ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಹುಬ್ಬಳ್ಳಿ

S.W.Railways sw_rly SWRRLY southwesternrailway SWRRLY

ತೆಂಗು ಅಭಿವೃದ್ಧಿ ಮಂಡಳಿ नारियल विकास बोर्ड

COCONUT DEVELOPMENT BOARD

(ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ)

(Ministry of Agriculture and Farmers Welfare, Government of India)
Kerabhavan, RO Hulimavu, B.G.Rd, B'luru-560076
E.Mail: ro-bnglr@coconutboard.gov.in, Ph:080-26593750 Fax:26594768

NO.F./ROB/12033/ /2021-22/ Date:04.10.2021

QUOTATION NOTICE

Sealed quotations in the proforma enclosed herewith are invited from the reputed printers for printing Bharathiya Tengu Patrike Kannada quarterly journal of the **Coconut Development Board for a period of three year from October - December 2021 issue to July - September 2024 issue.** The tender application form and terms conditions can be had from the CDB office, Hulimavu, Bangalore on working days or can be downloaded from website **www.coconutboard.gov.in**.

Quotation addressed to the Director, Coconut Development Board, Regional Office, Kera Bhavan, Bannerghatta Road, Hulimavu, Bangalore-560 076 shall be sent in sealed cover super scribed **"Quotation for printing periodicals of the Board"** so as to reach this office not later than 1.00 P.M on 13.10.2021. The quotation shall be accompanied by an EMD amounting to Rs.2,000/- (Rupees two thousand only) by way of Demand Draft drawn in favour of the **'Director, Coconut Development Board'** payable at Bangalore. EMD of unsuccessful quotationer (s) shall be returned soon after finalization of quotation and that of the successful quotationer shall be retained by the Board and shall be refunded after expiry of the agreement to be executed by the successful printer with the Board. **Quotations will be opened at 3.00PM on 13.10.2021** in the presence of such of the quotationers or their authorized representatives.

Sd/- **Director**

ಶಿವನಗರ ಮೇಲ್ಸೇತುವೆ ಉದ್ಘಾಟನೆ: ₹71.98 ಕೋಟಿ ವೆಚ್ಚದಲ್ಲಿ ನಿರ್ಮಾಣ

ನಾಗರಿಕ ಸೌಲಭ್ಯಕ್ಕೆ ಮೊಬೈಲ್ ಆ್ಯಪ್:ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಎಲ್ಲ 28 ವಿಧಾನಸಭಾ ಕ್ಷೇತ್ರಗಳಲ್ಲಿ ಸರ್ಕಾರದ ಸೇವೆಗಳು ಸುಗಮವಾಗಿ ಮೊಬೈಲ್‌ನಲ್ಲೇ ಲಭ್ಯವಾಗುವಂತೆ ಶೀಘ್ರ ಆ್ಯಪ್ ಅನಾವರಣಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಿವನಗರ 1 ಮತ್ತು 8ನೇ ಮುಖ್ಯ ರಸ್ತೆಯ ಕೂಡು ಸ್ಥಳದಲ್ಲಿ ನಿರ್ಮಿಸಿರುವ ‘ಇಂಟಿಗ್ರೇಟೆಡ್ ಮೇಲ್ಸೇತುವೆ’ ಉದ್ಘಾಟಿಸಿ ಮಾತನಾಡಿದ ಅವರು, ‘ಯೋಜನಾ ಬದ್ಧವಾಗಿ ಮತ್ತು ಸಮಗ್ರವಾಗಿ ಬೆಂಗಳೂರು ಅಭಿವೃದ್ಧಿ ಹೊಂದಬೇಕು. ಆದರೆ, ವಿವಿಧ ಇಲಾಖೆಗಳ ಸಮನ್ವಯದ ಕೊರತೆಯಿಂದ ಯೋಜನೆಗಳು ಸಂಯೋಜಿತ ವಿಧಾನದಲ್ಲಿ ಅನುಷ್ಠಾನಗೊಳ್ಳುತ್ತಿಲ್ಲ’ ಎಂದು ಹೇಳಿದರು.

‘ಜನರಿಗೆ ಅಂತರರಾಷ್ಟ್ರೀಯ ಮಟ್ಟದ ಸೌಲಭ್ಯಗಳನ್ನು ಕಲ್ಪಿಸಬೇಕಾದರೆ ನಗರ ಯೋಜನೆಯ ದೃಷ್ಟಿಕೋನ ಬದಲಾಗುವುದು ಅಗತ್ಯವಿದೆ. ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಕೇವಲ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಯೋಜನೆಗಳನ್ನು ರೂಪಿಸಿದರೆ ಪ್ರಯೋಜನವಾಗುವುದಿಲ್ಲ’ ಎಂದರು.

‘ಮೈಸೂರು ಸ್ಯಾಂಡಲ್ ಸಾಬೂನು ಕಾರ್ಖಾನೆಯಿಂದ ಮೈಸೂರು ರಸ್ತೆಯವರೆಗೆ ಸಿಗ್ನಲ್ ರಹಿತ ರಸ್ತೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲಾಗುವುದು. ಬಸವೇಶ್ವರ ಮೇಲ್ಸೇತುವೆ ಮಾರ್ಗದಲ್ಲಿ ಒಂದೇ ಪಥವಿದೆ. ಇದನ್ನು ದ್ವಿಪಥವನ್ನಾಗಿ ಬದಲಾಯಿಸಲಾಗುವುದು. ಈ ಬಗ್ಗೆ ಒಂದು ವಾರದಲ್ಲಿ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ವಿವರಿಸಿದರು.

ಶಾಸಕ ಎಸ್. ಸುರೇಶ್ ಕುಮಾರ್ ಮಾತನಾಡಿ, ’ಮೊದಲು ಇದೇ ಸ್ಥಳದಲ್ಲಿ ಕೆಳಸೇತುವೆ ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ, ಸ್ಥಳೀಯರ ಅಭಿಪ್ರಾಯದ ಮೇರೆಗೆ ಸರ್ಕಾರದ ಅನುಮೋದನೆ ಪಡೆದು ಇಂಟಿಗ್ರೇಟೆಡ್ ಮೇಲ್ಸೇತುವೆ ನಿರ್ಮಿಸಲಾಯಿತು. ಹೀಗಾಗಿ, ಯೋಜನೆಯಲ್ಲಿ ಬದಲಾವಣೆ ಮತ್ತು ಕೋವಿಡ್-19 ಕಾರಣಕ್ಕೆ ಮೇಲ್ಸೇತುವೆ ಕಾಮಗಾರಿ ವಿಳಂಬವಾಯಿತು’ ಎಂದು ವಿವರಿಸಿದರು.

ಸಚಿವರಾದ ವಿ. ಸೋಮಣ್ಣ, ಕೆ. ಗೋಪಾಲಯ್ಯ, ಸಂಸದ ಪಿ.ಸಿ. ಮೋಹನ್, ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ, ಕಾಂಗ್ರೆಸ್ ಮುಖಂಡರಾದ ಜಿ. ಪದ್ಮಾವತಿ, ಬಿಬಿಎಂಪಿ ಮಾಜಿ ಸದಸ್ಯೆ ಮಂಜುಳಾ ವಿಜಯಕುಮಾರ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಇದ್ದರು.

ಶಿವನಗರದಲ್ಲಿ ನಿರ್ಮಿಸಿರುವ ‘ಇಂಟಿಗ್ರೇಟೆಡ್ ಮೇಲ್ಸೇತುವೆ’ಯನ್ನು ಸೋಮವಾರ ಲೋಕಾರ್ಪಣೆ ಮಾಡುವ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗೋಪೂಜೆ ನೆರವೇರಿಸಿದರು. ಶಾಸಕ ಸುರೇಶ್ ಕುಮಾರ್, ಸಚಿವ ವಿ. ಸೋಮಣ್ಣ ಇದ್ದರು– ಪ್ರಜಾವಾಣಿ ಚಿತ್ರ

ಮೇಲ್ಸೇತುವೆ ಯೋಜನೆಯ ವಿವರ

- ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಅಡಿಯಲ್ಲಿ ಕಾಮಗಾರಿ ಒಟ್ಟಾರೆ ಉದ್ದ 654.68 ಮೀಟರ್
- 7.5 ಮೀಟರ್ ಉದ್ದದ ದ್ವಿಮುಖ ಸಂಚಾರದ 4 ಪಥಗಳು
- ಮೇಲ್ಸೇತುವೆ ಎತ್ತರ 4.5 ಮೀಟರ್
- ಕಾಮಗಾರಿಗೆ 596 ಚದರ ಮೀಟರ್ ಭೂಮಿಯನ್ನು ಕೆಪಿಟಿಸಿಎಲ್‌ನಿಂದ ಹಸ್ತಾಂತರ
- ತುಮಕೂರು ರಸ್ತೆಯಿಂದ ಮೈಸೂರು ರಸ್ತೆಗೆ ಸಂಚರಿಸುವ ವಾಹನಗಳು ಸಿಗ್ನಲ್ ರಹಿತವಾಗಿ ಸಂಚರಿಸುವ ನಿಟ್ಟಿನಲ್ಲಿ ಈ ಯೋಜನೆಯು ಉಪಯುಕ್ತ

‘ಕಾಂಗ್ರೆಸ್ ಶಾಸಕರು ನನ್ನನ್ನು ಸಂಪರ್ಕಿಸಿದ್ದಾರೆ’

ಬೆಂಗಳೂರು: ‘ಬಿಜೆಪಿಯಿಂದ ಯಾವುದೇ ಶಾಸಕರು ಕಾಂಗ್ರೆಸ್ ಪಕ್ಷ ಸೇರುವುದಿಲ್ಲ. ಆದರೆ, ಕಾಂಗ್ರೆಸ್‌ನ ಕೆಲವು ಶಾಸಕರು ನನ್ನನ್ನು ಸಂಪರ್ಕಿಸಿದ್ದಾರೆ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

‘ನಮಗೆ ನೀವು ಬೇಡ್ರಪ್ಪಾ, ಬರುವುದಾದರೆ ಬಿಜೆಪಿ ಅಧ್ಯಕ್ಷರನ್ನು ಸಂಪರ್ಕಿಸಿ’ ಎಂದು ಹೇಳಿರುವುದಾಗಿ ಅವರು ಬಿಜೆಪಿ ಕಾರ್ಯಾಲಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಬಿಜೆಪಿಯ ಕೆಲವು ಶಾಸಕರು ಕಾಂಗ್ರೆಸ್ ಸೇರಲಿದ್ದಾರೆ ಎಂದು ಕೆಲವರು ಹೇಳುತ್ತಿದ್ದಾರೆ. ಕಾಂಗ್ರೆಸ್ ಬಗ್ಗೆ ಗೊತ್ತಿರುವವರು ಆ ಪಕ್ಷಕ್ಕೆ ಹೋಗುವುದಿಲ್ಲ’ ಎಂದು ಹೇಳಿದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101

ದೂರವಾಣಿ ಸಂಖ್ಯೆ: ಕಛೇರಿ: 08156-270427 ಫ್ಯಾಕ್ಸ್: 08156-270427 ಇಮೇಲ್: eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಸ/ಸ.ಇಂ-1&2/ ಟೆಂಡರ್ ಪ್ರಕಟಣೆ ಸಂಖ್ಯೆ: 08/2021-22, ದಿನಾಂಕ : 01/10/2021

2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ, ಶಿಡ್ಲಘಟ್ಟ, ಮತ್ತು ಚಿಂತಾಮಣಿ ವಿಧಾನಸಭಾ ಕ್ಷೇತ್ರಗಳಲ್ಲಿ 2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲೂ 1, ಮತ್ತು 2 ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ, 2ನೇ ಮತ್ತು 3ನೇ (3ನೇ ದರ್ಜೆಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ನೊಂದಾಯಿತ) ದರ್ಜೆ ಅರ್ಹ ಗುತ್ತಿಗೆದಾರರಿಂದ ಕರೆಯಲಾಗಿದೆ. ಇ.ಎಂ.ಡಿ ಮೊತ್ತ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 27/10/2021 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 30/10/2021 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ 08156-270427 ಮತ್ತು ಇ-ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080-25501216 ಮತ್ತು 080-25501227 ರಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

‘ಪ್ರಜಾವಾಣಿ’ ವರದಿಯ ಬಳಿಕ ಎಚ್ಚೆತ್ತುಕೊಂಡ ಅಧಿಕಾರಿಗಳು

ಸವಾರರ ಸಮಸ್ಯೆಗೆ ಲಭಿಸಿದ ಮುಕ್ತಿ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಶ್ರೀನಿವಾಸನಗರದ 9ನೇ ತಿರುವಿನಲ್ಲಿ ರಸ್ತೆಗೆ ಅಡ್ಡಲಾಗಿರುವ ಒಳಚರಂಡಿಗೆ ಕಾಂಕ್ರೀಟ್ ರೂಪ ನೀಡುವ ವೇಳೆ ಅದನ್ನು ರಸ್ತೆಗಿಂತಲೂ ಎರಡು ಅಡಿಯಷ್ಟು ಎತ್ತರಿಸಲಾಗಿತ್ತು. ಮೂರು ತಿಂಗಳಾದರೂ ಅದಕ್ಕೆ ಸಮನಾಗಿ ಮಣ್ಣು ಹಾಕಿ ಮುಚ್ಚುವ ಕೆಲಸವಾಗಿರಲಿಲ್ಲ.

ಈ ಕುರಿತು ‘ಪ್ರಜಾವಾಣಿ’ಯ ಸೋಮವಾರದ ಸಂಚಿಕೆಯ ‘ಕುಂದುಕೊರತೆ’ ಕಾಲಂನಲ್ಲಿ ‘ವಾಹನ ಸವಾರರ ಸಂಕಟ ತಪ್ಪಿಸಿ’ ಶೀರ್ಷಿಕೆಯ ಅಡಿಯಲ್ಲಿ ಸುದ್ದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತುಕೊಂಡಿರುವ ಅಧಿಕಾರಿಗಳು ಸೋಮವಾರ ಮಧ್ಯಾಹ್ನವೇ ಒಳಚರಂಡಿಯ ಮೇಲಿನ ಸಿಮೆಂಟ್ ಚಪ್ಪಡಿಗಳಿಗೆ ಸಮನಾಗಿ ಡಾಂಬರು ಹಾಕಿ ಮುಚ್ಚುವ ಕೆಲಸ ಮಾಡಿದ್ದಾರೆ. ಹೀಗಾಗಿ ವಾಹನ ಸವಾರರು ಹಾಗೂ ಪಾದಚಾರಿಗಳು ನಿರಾಳರಾಗಿದ್ದಾರೆ. ಮುಖ್ಯ ರಸ್ತೆಯಿಂದ ಒಳ ರಸ್ತೆಗೆ ಪ್ರವೇಶಿಸುವ ವಾಹನ ಸವಾರರು ಆಯತಪ್ಪಿ ಬೀಳುವ ಅಪಾಯವೂ ತಪ್ಪಿದೆ.

‘ಈ ಅವೈಜ್ಞಾನಿಕ ಕಾಮಗಾರಿಯಿಂದ ನಾವು ರೋಸಿಹೋಗಿದ್ದೆವು. ವಾಹನಗಳಿಗೂ ಸಾಕಷ್ಟು ಹಾನಿಯಾಗಿತ್ತು. ಈ ಕುರಿತು ಅಧಿಕಾರಿಗಳು ಹಾಗೂ ಸ್ಥಳೀಯ ಶಾಸಕರಿಗೆ ಮನವಿ ಮಾಡಿದರೂ ಪ್ರಯೋಜನವಾಗಿರಲಿಲ್ಲ. ‘ಪ್ರಜಾವಾಣಿ’ಯು ಈ ಕುರಿತ ಸುದ್ದಿ ಪ್ರಕಟಿಸುವ ಮೂಲಕ ಅಧಿಕಾರಿಗಳನ್ನು ಎಚ್ಚರಿಸಿದೆ. ಇದಕ್ಕಾಗಿ ಪತ್ರಿಕೆಗೆ ನಾವು ಆಭಾರಿಯಾಗಿದ್ದೇವೆ. ಇನ್ನು ಮುಂದಾದರೂ ಈ ಮಾರ್ಗದಲ್ಲಿ ನಿಶ್ಚಿಂತೆಯಿಂದ ಸಾಗಬಹುದು’ ಎಂದು ಸ್ಥಳೀಯರು ಖುಷಿ ವ್ಯಕ್ತಪಡಿಸಿದ್ದಾರೆ.

ಒಳಚರಂಡಿಗೆ ಸಮನಾಗಿ ಡಾಂಬರು ಹಾಕಿರುವುದು

ನಿಮ್ಮ ಪ್ರದೇಶದಲ್ಲಿ ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಕಸ ರಾಶಿ ಬಿದ್ದಿದೆಯೇ ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಬಸ್‌ಗಳು ಬರುತ್ತಿಲ್ಲವೇ? ಸಮಸ್ಯೆಗಳು ತಾಂಡವವಾಡುತ್ತಿವೆಯೇ? . . .

ನಿಮ್ಮ ಅಹವಾಲುಗಳಿಗೆ ‘ಪ್ರಜಾವಾಣಿ’ ಧ್ವನಿಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಸಂಬಂಧಿಸಿದ ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.

ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

‘ಎ ಮರ್ಡರ್ಡ್ ಮದರ್’ ಸಾಕ್ಷ್ಯಚಿತ್ರ ಪ್ರಸಾರಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ರೋಚಕ ಅಪರಾಧ ಪ್ರಕರಣಗಳ ಸುತ್ತ ಹೆಣೆಯಲಾದ, ‘ಕ್ರೈಮ್ ಸ್ಟೋರೀಸ್ ಇಂಡಿಯಾ ಡಿಟೆಕ್ಟಿವ್’ ಸರಣಿಯ ಮೊದಲ ಕಂತು, ‘ಎ ಮರ್ಡರ್ಡ್ ಮದರ್’ ಸಾಕ್ಷ್ಯಚಿತ್ರ ಪ್ರಸಾರ ಮಾಡದಂತೆ ನೆಟ್ ಫ್ಲಿಕ್ಸ್‌ಗೆ ಹೈಕೋರ್ಟ್ ಆದೇಶಿಸಿದೆ.

‘ಚಿತ್ರದ ಕಥೆ ಹೊಂದಿರುವ ದೃಶ್ಯಗಳು ಪ್ರಕರಣದಲ್ಲಿನ ಆರೋಪಿಯ ಮುಕ್ತ ಮತ್ತು ನ್ಯಾಯಸಮ್ಮತ ವಿಚಾರಣೆಯ ಹಕ್ಕನ್ನು ಉಲ್ಲಂಘಿಸುತ್ತವೆ’ ಎಂದು ಆಪಾದಿಸಿ ಆರೋಪಿಗಳಲ್ಲಿ ಒಬ್ಬರಾದ ಶ್ರೀಧರ್ ರಾವ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ ಶಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

‘ಸಾಕ್ಷ್ಯಚಿತ್ರವನ್ನು ಪ್ರಸಾರ ಮಾಡಬಾರದು. ಚಿತ್ರವು ಆನ್‌ಲೈನ್‌ನಲ್ಲಿಯೂ ಲಭ್ಯವಾಗಬಾರದು’ ಎಂದು ಮಧ್ಯಂತರ ಆದೇಶ ನೀಡಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಅರ್ಜಿದಾರರ ವಾದ: ಸರಣಿಯ ಮೊದಲ ಕಂತಿನಲ್ಲಿ ಪ್ರಸಾರವಾದ ಕಥೆಯಲ್ಲಿ, ಬೆಂಗಳೂರಿನಲ್ಲಿ ತಾಯಿಯೇ ಮಗಳನ್ನು ಕೊಂದ ಕಥೆ ಇದೆ. ಮಗಳ ಗೆಳೆಯನೊಬ್ಬ ಈ ಕೊಲೆಯಲ್ಲಿ ಶಾಮೀಲಾಗಿರುವಂತೆ ತೋರಿಸಲಾಗಿದೆ. ಚಿತ್ರದಲ್ಲಿ ತನಿಖೆಯ ಕೆಲ ಅಂಶಗಳನ್ನೂ ಸೇರಿಸಲಾಗಿದ್ದು, ತಪ್ಪೊಪ್ಪಿಗೆಯ ವಿಡಿಯೊ ತುಣುಕನ್ನು ಕೂಡಾ ಚಿತ್ರದಲ್ಲಿ ಅಡಕ ಮಾಡಲಾಗಿದೆ.

ಇದು ಆರೋಪಿಯ ನ್ಯಾಯಸಮ್ಮತ ವಿಚಾರಣೆಗೆ ಅಡ್ಡಿಯಾಗುತ್ತದೆ. ಯಾವುದೇ ಸಮರ್ಥನೆ ಇಲ್ಲದ ನಿರೂಪಣೆ ಅರ್ಜಿದಾರರ ಸಾರ್ವಜನಿಕ ಜೀವನ ಮತ್ತು ಖಾಸಗಿ ಬದುಕು ಎರಡರ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ. ಆದ್ದರಿಂದ, ಸಾಕ್ಷ್ಯಚಿತ್ರದ ಮೊದಲ ಸರಣಿ ‘ಎ ಮರ್ಡರ್ಡ್ ಮದರ್’ ಕಂತು ಪ್ರಸಾರ ಮಾಡದಂತೆ ನಿರ್ದೇಶಿಸಬೇಕು ಎಂದು ಕೋರಿದ್ದರು.

SHRIRAM City MONEY WHEN YOU NEED IT MOST

ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್

ಪ್ರಧಾನ ಕಚೇರಿ: ಲೆವೆಲ್-3, ವೊಕ್‌ಹಾರ್ಡ್ ಟವರ್ಸ್, ಈಸ್ಟ್ ವಿಂಗ್ ಸಿ-2 ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬೈ 400 051; ಫೋನ್: 022 4241 0400, 022 4060 3100; ವೆಬ್‌ಸೈಟ್: http://www.shiramcity.in
ನೋಂದಾಯಿತ ಕಚೇರಿ: ಕಚೇರಿ ನಂ. 123, ಅಂಗಪ್ಪ ನೈಕೆನ್ ಸ್ಟ್ರೀಟ್, ಚೆನ್ನೈ-600 001;
ಶಾಖಾ ಕಚೇರಿ: ನಂ. 194, 1ನೇ ಮಹಡಿ, 7ನೇ ಅಡ್ಡರಸ್ತೆ, ಸಿಎಂಎಚ್ ರೋಡ್, 1ನೇ ಹಂತ, ಇಂದಿರಾನಗರ, ಬೆಂಗಳೂರು-560 038

ಅನುಬಂಧ-4-ಎ [ನಿಯಮ 8(6)ರ ನಿಯಮಗಳನ್ನು ನೋಡಿ] **ಸ್ಥಿರಾಸ್ತಿಗಳ ಮಾರಾಟ ಕುರಿತಾದ ಮಾರಾಟ ಪ್ರಕಟಣೆ**

ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟ ಕುರಿತಾದ ಇ-ಹರಾಜು ಮಾರಾಟ ಪ್ರಕಟಣೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ತಿಳಿಸುವುದು ಏನೆಂದರೆ, ಈ ಕೆಳಕೆಂಡ ಸ್ಥಿರಾಸ್ತಿಗಳು ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್ ಇವರಿಗೆ ಈಡು/ಅಡಮಾನ ನೀಡಲ್ಪಟ್ಟಿರುತ್ತವೆ ಮತ್ತು ಸದರಿ ಅಡಮಾನ ಸ್ವತ್ತುಗಳನ್ನು ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ತಮ್ಮ ಭೌತಿಕ ಸ್ವಾಧೀನತೆಗೆ ಪಡೆದುಕೊಂಡಿದ್ದು, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾಗಿರುವ ಸಾಲಗಾರರು ಮತ್ತು ಜಾಮೀನುದಾರರಿಂದ **"ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್"** ಇವರಿಗೆ ಸಂದಾಯ ಆಗಬೇಕಿರುವ ಬಾಕಿಮೊತ್ತವನ್ನು ವಸೂಲಾತಿ ಮಾಡಿಕೊಳ್ಳಲೆಂದು, **25.10.2021 ರಂದು ಬೆಳಗ್ಗೆ 11 ರಿಂದ 1 ಗಂಟೆಯೊಳಗೆ ಸ್ವಾಧೀನ ಸ್ವತ್ತುಗಳನ್ನು "ಹೇಗಿದೆಯೊ ಎಲ್ಲಿದೆಯೊ", "ಹೇಗಿದೆಯೊ ಏನಿದೆಯೊ" ಮತ್ತು "ಅಲ್ಲಿ ಏನೇನಿದೆಯೊ"** ಆಧಾರದಲ್ಲಿ ಇ-ಹರಾಜು ಮುಖಾಂತರ ಮಾರಾಟ ಮಾಡಲಾಗುತ್ತದೆ. ಸಾಲಗಾರರು ಮತ್ತು ಜಾಮೀನುದಾರರು, ಬಾಕಿಮೊತ್ತ, ಸ್ಥಿರಾಸ್ತಿಯ ಸಂಕ್ಷಿಪ್ತ ವಿವರ ಮತ್ತು ಅವುಗಳಿಗೆ ಸಂಬಂಧಿತ ಬಲ್ಲ ಋಣಭಾರಗಳು, ಸ್ವಾಧೀನತೆ ಮಾದರಿ, ಮೀಸಲು ಬೆಲೆ ಮತ್ತು ಭದ್ರತಾ ಠೇವಣಿ ಮೊತ್ತ ಹಾಗೂ ಹೆಚ್ಚಳ ಮೊತ್ತ ಕುರಿತಾದ ವಿವರಗಳು ಕೆಳಗಿನಂತಿರುತ್ತವೆ:

ಸಾಲಗಾರರು/ಸಹ-ಸಾಲಗಾರರು/ ಜಾಮೀನುದಾರರು/ಅಡಮಾನದಾರರ ಹೆಸರು	13/2 ಡಿಮಾಂಡ್ ನೋಟಿಸ್ ದಿನಾಂಕ ಮತ್ತು ಮೊತ್ತ	ಮೀಸಲು ಬೆಲೆ (ರೂ.) ಮತ್ತು ಬಿಡ್ ಹೆಚ್ಚಳ ಮೊತ್ತ	ಭದ್ರತಾ ಠೇವಣಿ ಮೊತ್ತದ ವಿವರಗಳು (ಇಎಂಡಿ) ವಿವರ	ಹರಾಜು ದಿನಾಂಕ ಮತ್ತು ಸಮಯ	ಸಂಪರ್ಕಿಸಬೇಕಾದ ವ್ಯಕ್ತಿ ಮತ್ತು ಪರಿಶೀಲನಾ ದಿನಾಂಕ
1. ಮೆ. ಮಂಜುಳಾ ಗ್ಯಾಸ್ ಡಿಸ್ಟ್ರಿಬ್ಯೂಟರ್ಸ್ (ಮಾಲಿಕರು ಶ್ರೀಮತಿ. ಮಂಜುಳಾ ಎಸ್ ಎಲ್) ಕಚೇರಿ ವಿಳಾಸ: ನಂ. 801, ರೂಮ್ ನಂ. 2, 9ನೇ ಮುಖ್ಯರಸ್ತೆ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034 2. ಶ್ರೀಮತಿ. ಮಂಜುಳಾ ಎಸ್ ಎಲ್ 3. ಶ್ರೀ. ಸದಾನಂದ 4. ಶ್ರೀಮತಿ. ಬಿ ಎಸ್ ಸಹನಾ ರೆಡ್ಡಿ 5. ಮಿಸ್. ಸಂಜನಾ ಸದಾನಂದ 6. ಎಂವಿಆರ್ ಗ್ಯಾಸ್ (ಪ್ರತಿನಿಧಿಸುವ ಮಾಲಿಕರು ಶ್ರೀ. ಸದಾನಂದ ಬಿ ವಿ) 7. ಎಂವಿಆರ್ ಕೆಮಿಕಲ್ಸ್ ಮತ್ತು ಆಯಿಲ್ಸ್ (ಪ್ರತಿನಿಧಿಸುವ ಮಾಲಿಕರು ಶ್ರೀ ಸದಾನಂದ ಬಿ ವಿ) ಮೇಲ್ಕಂಡ 2 ರಿಂದ 7 ರವರೆಗಿನವರ ವಿಳಾಸ ನಂ. 801, 9ನೇ ಮುಖ್ಯರಸ್ತೆ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034 ಸ್ವಾಧೀನತೆ ದಿನಾಂಕ ಮತ್ತು ಸ್ವಾಧೀನತೆ ಮಾದರಿ 05.12.2019 ಮತ್ತು ಭೌತಿಕ ಸ್ವಾಧೀನತೆ ಬಲ್ಲ ಋಣಭಾರಗಳು: ತಿಳಿದಿರುವುದಿಲ್ಲ	ಲೋನ್ ಅಗ್ರೀಮೆಂಟ್ ನಂ. BANNCTF1705060001 ಅಡಿಯಲ್ಲಿನ 21.09.2019 ರಂತೆಗಿನ ರೂ. 3,72,40,348/- (ರೂಪಾಯಿ ಮೂರು ಕೋಟಿ ಎಪ್ಪತ್ತೆರಡು ಲಕ್ಷ ನಲವತ್ತು ಸಾವಿರದ ಮೂರು ನೂರ ನಲವತ್ತೆಂಟು ಮಾತ್ರ) ಜೊತೆಗೆ ಮುಂದಿನ ಬಡ್ಡಿ ಹಾಗೂ ಇತರೆ ಖರ್ಚು, ವೆಚ್ಚ ಹಾಗೂ ಶುಲ್ಕಗಳು. ದಿನಾಂಕ: 25.09.2019	ರೂ. 4,05,000,00/- (ರೂಪಾಯಿ ನಾಲ್ಕು ಕೋಟಿ ಐದು ಲಕ್ಷ ಮಾತ್ರ) ಬಿಡ್ ಹೆಚ್ಚಳ ಮೊತ್ತ: ರೂ. 1,00,000/- ಮತ್ತು ಇದರ ಗುಣಾಂಕಗಳಲ್ಲಿ. **ಭದ್ರತಾ ಠೇವಣಿ ಮೊತ್ತ (ಇಎಂಡಿ) (ರೂ.)** ರೂ. 40,50,000/- (ರೂಪಾಯಿ ನಲವತ್ತು ಲಕ್ಷ ಐವತ್ತು ಸಾವಿರ ಮಾತ್ರ) **ಇಎಂಡಿ ಪಾವತಿಸುವ ಕೊನೆಯ ದಿನಾಂಕ** 22 ಅಕ್ಟೋಬರ್ 2021 ಸಮಯ ಬೆಳಗ್ಗೆ 10.00 ರಿಂದ ಸಂಜೆ 05.00 ಗಂಟೆಯೊಳಗೆ.	ಇಲ್ಲಿ ಕೆಳಗೆ ನೀಡಲಾಗಿರುವ ಖಾತೆ ವಿವರಗಳಿಗೆ ಆರ್‌ಟಿಜಿಎಸ್/ ಎನ್‌ಇಎಫ್‌ಟಿ ಮುಖಾಂತರ ಇಎಂಡಿ ಮೊತ್ತವನ್ನು ಪಾವತಿಸ ತಕ್ಕದ್ದು: **ಬ್ಯಾಂಕ್ ಹೆಸರು** - ಎಕ್ಸಿಸ್ ಬ್ಯಾಂಕ್ ಲಿಮಿಟೆಡ್ **ಶಾಖೆ**- ಡಾ. ರಾಧಾಕೃಷ್ಣನ್ ಸಲಾಯ್, ಮೈಲಾಪೂರ್, ಚೆನ್ನೈ-600004 **ಬ್ಯಾಂಕ್ ಅಕೌಂಟ್** ನಂ.-ಕರೆಂಟ್ ಅಕೌಂಟ್ ನಂ. 006010200067449 ಐಎಫ್‌ಎಸ್ ಕೋಡ್- **ಯುಟಿಐಬಿ0000006**	25ನೇ ಅಕ್ಟೋಬರ್ 2021 ಸಮಯ: ಬೆಳಗ್ಗೆ 11.00 ರಿಂದ ಅಪರಾಹ್ನ 01.00 ಗಂಟೆ.	**ಅನೂಪ್ ಶೆಟ್ಟಿ 9845399396** **ಗಂಗಾಧರ್ ಅರ್ಸಿದ್ 9845003677** ಸ್ವತ್ತು ಪರಿಶೀಲನಾ ದಿನಾಂಕ: 11.10.2021 ಸಮಯ: ಬೆಳಗ್ಗೆ 11.00 ರಿಂದ ಸಂಜೆ 04.00 ಗಂಟೆವರೆಗೆ.

ಸ್ವತ್ತುಗಳ ವಿವರ

ಐಟಂ ನಂ. 1:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ವಿಳಾಸದ ಸರ್ವೆ ನಂ. 19/2 ರಲ್ಲಿರುವ 2.12 ಗುಂಟೆ ಮತ್ತು ಸರ್ವೆ ನಂ. 152/2 ರಲ್ಲಿರುವ 2.12 ಗುಂಟೆ ಒಟ್ಟಾರೆ 5.08 ಗುಂಟಾ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.71 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 152/2 ರಲ್ಲಿರುವ ನಂ.72 ಹೊಂದಿರುವ ತೋಟಗಾರಿಕೆ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸರ್ವೆ ನಂ. 19/2 ಮತ್ತು 152/2 ರಲ್ಲಿರುವ ನಂ.78 ಹೊಂದಿರುವ ತೋಟಗಾರಿಕೆ ಜಮೀನು, ದಕ್ಷಿಣಕ್ಕೆ: ರಸ್ತೆ.

ಐಟಂ ನಂ. 2:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ವಿಳಾಸದ ಸರ್ವೆ ನಂ. 152/2 ರಲ್ಲಿರುವ, 5 1/2 ಗುಂಟೆ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.72 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಪ್ರಾಪರ್ಟಿ ಸರ್ವೆ ನಂ. 152/2 ರಲ್ಲಿರುವ ಸರ್ವೆ ನಂ.72 ಹೊಂದಿರುವ ತೋಟಗಾರಿಕೆ ಜಮೀನು, ಪಶ್ಚಿಮಕ್ಕೆ: ಪ್ರಾಪರ್ಟಿ ಸರ್ವೆ ನಂ. 19/2 ಮತ್ತು ಸರ್ವೆ ನಂ. 152/2 ರಲ್ಲಿರುವ ನಂ.71 ಹೊಂದಿರುವ ತೋಟಗಾರಿಕೆ ಜಮೀನು, ಉತ್ತರಕ್ಕೆ: ಸರ್ವೆ ನಂ. 15/2 ರಲ್ಲಿರುವ ನಂ.77 ಹೊಂದಿರುವ ತೋಟಗಾರಿಕೆ ಜಮೀನು, ದಕ್ಷಿಣಕ್ಕೆ: ರಸ್ತೆ.

ಐಟಂ ನಂ. 3:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ವಿಳಾಸದ ಸರ್ವೆ ನಂ. 152/2 ರಲ್ಲಿರುವ, 6 ಗುಂಟೆ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.73 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಪ್ರಾಪರ್ಟಿ ಸರ್ವೆ ನಂ. 152/2 ರಲ್ಲಿರುವ ಸರ್ವೆ ನಂ.74 ಹೊಂದಿರುವ ತೋಟಗಾರಿಕೆ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 152/2 ರಲ್ಲಿರುವ ನಂ.72 ಹೊಂದಿರುವ ತೋಟಗಾರಿಕೆ ಜಮೀನು, ಉತ್ತರಕ್ಕೆ: ಪ್ರಾಪರ್ಟಿ ಸರ್ವೆ ನಂ. 152/2 ರಲ್ಲಿರುವ ನಂ.76 ಹೊಂದಿರುವ ತೋಟಗಾರಿಕೆ ಜಮೀನು, ದಕ್ಷಿಣಕ್ಕೆ: ರಸ್ತೆ.

ಐಟಂ ನಂ. 4:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ವಿಳಾಸದ ಸರ್ವೆ ನಂ. 152/2 ರಲ್ಲಿರುವ, 6 ಗುಂಟೆ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.74 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ಅದೇ ಸರ್ವೆ ನಂಬರ್‌ನಲ್ಲಿರುವ ಉಳಿಕೆ ಸ್ವತ್ತು, ಉತ್ತರಕ್ಕೆ: ಅದೇ ಸರ್ವೆ ನಂಬರ್‌ನಲ್ಲಿರುವ ಉಳಿಕೆ ಸ್ವತ್ತು, ದಕ್ಷಿಣಕ್ಕೆ: ವಾಘವಡೆ ಗ್ರಾಮದ ರಸ್ತೆ.

ಐಟಂ ನಂ. 5:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ವಿಳಾಸದ ಸರ್ವೆ ನಂ. 152/2 ರಲ್ಲಿರುವ, 6 ಗುಂಟೆ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.75 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ಅದೇ ಸರ್ವೆ ನಂಬರ್‌ನಲ್ಲಿರುವ ಉಳಿಕೆ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಅದೇ ಸರ್ವೆ ನಂಬರ್‌ನಲ್ಲಿರುವ ಉಳಿಕೆ ಸ್ವತ್ತು.

ಐಟಂ ನಂ. 6:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ವಿಳಾಸದ ಸರ್ವೆ ನಂ. 15/2 ರಲ್ಲಿರುವ, 6 ಗುಂಟೆ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.76 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಪ್ರಾಪರ್ಟಿ ಸರ್ವೆ ನಂ. 152/2 ರಲ್ಲಿರುವ ಸರ್ವೆ ನಂ.75 ಹೊಂದಿರುವ ತೋಟಗಾರಿಕೆ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 152/2 ರಲ್ಲಿರುವ ನಂ.72 ಹೊಂದಿರುವ ತೋಟಗಾರಿಕೆ ಜಮೀನು, ಉತ್ತರಕ್ಕೆ: ರಸ್ತೆ, ಮತ್ತು ದಕ್ಷಿಣಕ್ಕೆ: ಪ್ರಾಪರ್ಟಿ ಸರ್ವೆ ನಂ. 152/2 ರಲ್ಲಿರುವ ನಂ.73 ಹೊಂದಿರುವ ತೋಟಗಾರಿಕೆ ಜಮೀನು.

ಐಟಂ ನಂ. 7:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ವಿಳಾಸದ ಸರ್ವೆ ನಂ. 152/2 ರಲ್ಲಿರುವ, 5 1/2 ಗುಂಟೆ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.77 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಪ್ರಾಪರ್ಟಿ ಸರ್ವೆ ನಂ. 152/2 ರಲ್ಲಿರುವ ಸರ್ವೆ ನಂ.76 ಹೊಂದಿರುವ ತೋಟಗಾರಿಕೆ ಜಮೀನು, ಪಶ್ಚಿಮಕ್ಕೆ: ಪ್ರಾಪರ್ಟಿ ಸರ್ವೆ ನಂ. 19/2 ಮತ್ತು ಸರ್ವೆ ನಂ. 152/2 ರಲ್ಲಿರುವ ನಂ.78 ಹೊಂದಿರುವ ತೋಟಗಾರಿಕೆ ಜಮೀನು, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಪ್ರಾಪರ್ಟಿ ಸರ್ವೆ ನಂ. 15/2 ರಲ್ಲಿರುವ ನಂ.72 ಹೊಂದಿರುವ ತೋಟಗಾರಿಕೆ ಜಮೀನು.

ಐಟಂ ನಂ. 8:- ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ವಿಳಾಸದ ಸರ್ವೆ ನಂ. 19/2 ರಲ್ಲಿನ 4 ಗುಂಟೆ, ಸರ್ವೆ ನಂ. 152/2 ರಲ್ಲಿರುವ 1 1/2 ಗುಂಟೆ, ಒಟ್ಟಾರೆ 5 ½ ಗುಂಟಾ ವಿಸ್ತೀರ್ಣವುಳ್ಳ, ಪ್ರಾಪರ್ಟಿ ನಂ.78 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಪ್ರಾಪರ್ಟಿ ಸರ್ವೆ ನಂ. 152/2 ರಲ್ಲಿರುವ ಸರ್ವೆ ನಂ.77 ರಲ್ಲಿನ ತೋಟಗಾರಿಕೆ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಪ್ರಾಪರ್ಟಿ ಸರ್ವೆ ನಂ. 19/2 ಮತ್ತು ಸರ್ವೆ ನಂ. 152/2 ರಲ್ಲಿರುವ ನಂ.71 ಹೊಂದಿರುವ ತೋಟಗಾರಿಕೆ ಜಮೀನು.

ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್‌ನ **http://shriramcity.in/e-auction-Residential.php** ವೆಬ್‌ಸೈಟ್ ಲಿಂಕ್ ಪರಿಶೀಲಿಸಿರಿ.

ಸ್ಥಳ: ಬೆಂಗಳೂರು
ದಿನಾಂಕ: 05.10.2021

ಸಹಿ/- ಅಧಿಕೃತ ಅಧಿಕಾರಿ
ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್

TATA **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**

ನೊಂದಾಯಿತ ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಜಿನೆಸ್ ಪಾರ್ಕ್, ಗಣಪತರಾವ್ ಕದಂ ಮಾರ್ಗ, ಲೋವರ್ ಪರೇಲ್, ಮುಂಬೈ-400013.
ಶಾಖಾ ಕಚೇರಿ : ಮ.ನಂ. 82/1, 1 & 2ನೇ ಮಹಡಿ, ಕೃಷ್ಣಾ ಟವರ್ಸ್, ರಿಚ್ಮಂಡ್ ರಸ್ತೆ, ಬೆಂಗಳೂರು-560025

ಸ್ವಾಧೀನತಾ ಪ್ರಕಟಣೆ (ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ರ ನಿಯಮ 8(1) ರೊಂದಿಗೆ ಅನುಬಂಧ 4 ಓದಿಕೊಂಡಂತೆ ಪ್ರದತ್ತವಾದ ನಿಯಮಗಳನ್ವಯ)

ಅದಾಗ್ಯೂ, ಈ ಕೆಳಗೆ ಸಹಿ ಹಾಕಿರುವ **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**‌ನ ಅಧಿಕೃತ ಅಧಿಕಾರಿಯು ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 (ಇಲ್ಲಿ ಇನ್ನುಮುಂದೆ "ಸದರಿ ಕಾಯ್ದೆ" ಎನ್ನಲಾಗುವ) ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8 ಮತ್ತು 9 ಗಳೊಂದಿಗೆ ಸದರಿ ಕಾಯ್ದೆಯ ಸೆಕ್ಷನ್ 13(2) ಅನ್ನು ಓದಿಕೊಂಡಂತೆ ಪ್ರದತ್ತವಾದ ನಿಯಮಗಳನ್ನು ಚಲಾಯಿಸುವ ಮೂಲಕ, ಕೆಳಕಂಡ ಸಾಲಗಾರರಿಗೆ ಡಿಮಾಂಡ್ ನೋಟಿಸ್ ಹೊರಡಿಸಿದ್ದು, ಸದರಿ **ಡಿಮಾಂಡ್ ನೋಟಿಸ್** ದಿನಾಂಕದಿಂದ 60 ದಿನಗಳೊಳಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ಬಾಕಿಮೊತ್ತವನ್ನು ಮರುಪಾವತಿಸಬೇಕೆಂದು ಕರೆ ನೀಡಿರುತ್ತಾರೆ.

ಅದಾಗ್ಯೂ, ಸಾಲಗಾರರು ಬಾಕಿಮೊತ್ತ ಮರುಪಾವತಿಸಲು ವಿಫಲರಾಗಿದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಕೆಳಕಂಡ ಸಾಲಗಾರರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ಸಹಿ ಹಾಕಿರುವವರು ಸದರಿ ಕಾಯ್ದೆಯ ಸೆಕ್ಷನ್ 13(4) ಅನ್ನು ಸದರಿ ನಿಯಮಗಳ ನಿಯಮ 9 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳನ್ನು ಚಲಾಯಿಸುವ ಮೇರೆಗೆ, ಈ ಕೆಳಗೆ ವಿವರಿಸಲಾಗಿರುವ ಅಡಮಾನ ಸ್ವತ್ತುಗಳನ್ನು ತಮ್ಮ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ.

ಈ ಕೆಳಗೆ ನಮೂದಿಸಲಾದ ಸಾಲಗಾರರಿಗೆ ಮತ್ತು ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಸದರಿ ಭದ್ರತಾ ಸ್ವತ್ತುಗಳೊಂದಿಗೆ ಯಾವುದೇ ವ್ಯವಹಾರ ಮಾಡತಕ್ಕದ್ದಲ್ಲ, ಅದಾಗ್ಯೂ ವ್ಯವಹರಿಸಿದಲ್ಲಿ ಅಂತಹ ವಹಿವಾಟು **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**‌ಗೆ ಸಂದಾಯವಾಗಬೇಕಿರುವ, ಇಲ್ಲಿ ಕೆಳಗೆ ಉಲ್ಲೇಖಿಸಲಾಗಿರುವ ಬಾಕಿಮೊತ್ತ ಹಾಗೂ ಡಿಮಾಂಡ್ ನೋಟಿಸ್ ದಿನಾಂಕದಿಂದ ಅನ್ವಯಿಕ ಬಡ್ಡಿ, ಜುಲ್ಮಾನೆ ಬಡ್ಡಿ, ಖರ್ಚು, ವೆಚ್ಚ ಮತ್ತು ಇನ್ನಿತರ ಶುಲ್ಕ ಇತ್ಯಾದಿಗಳ ನಿಬಂಧನೆಗೆ ಒಳಪಡುತ್ತದೆ.

ಲೋನ್ ಅಕೌಂಟ್ ನಂ.	ಬಾಧ್ಯಸ್ಥರ/ಉತ್ತರಾಧಿಕಾರಿಗಳ/ಕಾನೂನು ಪ್ರತಿನಿಧಿಗಳ ಹೆಸರು	ಡಿಮಾಂಡ್ ನೋಟಿಸ್‌ನಲ್ಲಿರುವ ಮೊತ್ತ ಮತ್ತು ನೋಟಿಸ್ ದಿನಾಂಕ	ಸಾಂಕೇತಿಕ ಸ್ವಾಧೀನತೆ ದಿನಾಂಕ	ಭದ್ರತಾ ಸ್ವತ್ತುಗಳ/ಸ್ಥಿರಾಸ್ತಿಗಳ ವಿವರ
7891363	1) ಶ್ರೀ. ಲಕ್ಷ್ಮಿಸಾಗರ ಬಿ ಆರ್ ಬಿನ್ ರಾಮಾಂಜಿನಪ್ಪ, ನಂ. 44, ಬೈರಸಂದ್ರ, ಅರಳುಮಲ್ಲಿಗೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ-561 203. 2) ಶ್ರೀಮತಿ. ಶಿವಪ್ರಸಾದ್ ಬಿ ಆರ್ ಬಿನ್ ಶ್ರೀ. ರಾಮಾಂಜಿನಪ್ಪ ಬಿ, ನಂ. 44, ಬೈರಸಂದ್ರ, ಅರಳುಮಲ್ಲಿಗೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ-561 203. 3) ಶ್ರೀ. ರಾಮಾಂಜಿನಪ್ಪ ಬಿ ಬಿನ್ ಲೇಟ್ ಬೈರಪ್ಪ, ನಂ. 44, ಬೈರಸಂದ್ರ, ಅರಳುಮಲ್ಲಿಗೆ, ದೊಡ್ಡ ಬಳ್ಳಾಪುರ, ಬೆಂಗಳೂರು ಗ್ರಾಮಾಂತರ-561 203.	Rs. 37,12,214/- & 29-06-2021	28.09.2021	ಬೈರಸಂದ್ರ ಗ್ರಾಮ, ಮಧುರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದ ಖಾತಾ ನಂ. 18 ರಲ್ಲಿ ಸ್ಥಿತಗೊಂಡಿರುವ ಪೂರ್ವ-ಪಶ್ಚಿಮ 38 ಅಡಿ ಮತ್ತು ಉತ್ತರ-ದಕ್ಷಿಣ 70 (ಒಟ್ಟು 2660 ಚದರ ಅಡಿ) ವಿಸ್ತೀರ್ಣವುಳ್ಳ ವಸತಿಯೋಗ್ಯ ಮನೆ, ಖಾತಾ ನಂ. 22 ಹೊಂದಿರುವ ಮತ್ತು ಪೂರ್ವ-ಪಶ್ಚಿಮ 45 ಅಡಿ ಹಾಗೂ ಉತ್ತರ-ದಕ್ಷಿಣ 38 ಅಡಿ (ಒಟ್ಟು 1770 ಚದರ ಅಡಿ) ವಿಸ್ತೀರ್ಣ ವುಳ್ಳ ಖಾಲಿ ನಿವೇಶನ, ಖಾತಾ ನಂ. 23 ಹೊಂದಿರುವ ಮತ್ತು ಪೂರ್ವ-ಪಶ್ಚಿಮ 45 ಅಡಿ ಹಾಗೂ ಉತ್ತರ-ದಕ್ಷಿಣ 38 ಅಡಿ (ಒಟ್ಟು 1770 ಚದರ ಅಡಿ) ವಿಸ್ತೀರ್ಣವುಳ್ಳ ಖಾಲಿ ನಿವೇಶನ, ಇವುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ.
7889489	1) ಶ್ರೀ. ಮಾರುತಿ ಜಿ ಬಿನ್ ಗಂಗರಾಜು, ದೊಡ್ಡಬೆಲೆ ರೈಲ್ವೆ ನಿಲ್ದಾಣ, ದೊಡ್ಡಬೆಲೆ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ, ಬೆಂಗಳೂರು ಗ್ರಾಮಾಂತರ-562 123. 2) ಶ್ರೀ. ಗಂಗರಾಜು ಜಿ ಬಿನ್ ಗಂಗಚೌಡಯ್ಯ, ದೊಡ್ಡಬೆಲೆ ರೈಲ್ವೆ ನಿಲ್ದಾಣ, ದೊಡ್ಡಬೆಲೆ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ, ಬೆಂಗಳೂರು ಗ್ರಾಮಾಂತರ-562 123. 3) ಶ್ರೀಮತಿ. ಇಂದಿರಮ್ಮ, ದೊಡ್ಡಬೆಲೆ ರೈಲ್ವೆ ನಿಲ್ದಾಣ, ದೊಡ್ಡಬೆಲೆ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ, ಬೆಂಗಳೂರು ಗ್ರಾಮಾಂತರ-562 123.	Rs. 22,13,138/- & 29-06-2021	28.09.2021	ಪ್ರಾಪರ್ಟಿ ನಂ.1: ಗೂಳಾಪುರ ಗ್ರಾಮ, ದೊಡ್ಡಬೆಲೆ ರೈಲ್ವೆ ನಿಲ್ದಾಣ ದಾಖಲೆ, ದೊಡ್ಡಬೆಲೆ ಗ್ರಾಮ ಪಂಚಾಯತ್, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಖಾತಾ ನಂ. 193/47 ಹೊಂದಿರುವ, ಪೂರ್ವ-ಪಶ್ಚಿಮ 40 ಅಡಿ ಮತ್ತು ಉತ್ತರ-ದಕ್ಷಿಣ 30 ಅಡಿ (ಒಟ್ಟು 1200 ಚದರ ಅಡಿ) ವಿಸ್ತೀರ್ಣವುಳ್ಳ ವಸತಿಯೋಗ್ಯ ಮನೆ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 18, ಉತ್ತರಕ್ಕೆ: ಸೈಟ್ ನಂ. 46, ದಕ್ಷಿಣಕ್ಕೆ: ಸೈಟ್ ನಂ. 48. ಪ್ರಾಪರ್ಟಿ ನಂ. 2: ಗೂಳಾಪುರ ಗ್ರಾಮ, ದೊಡ್ಡಬೆಲೆ ರೈಲ್ವೆ ನಿಲ್ದಾಣ ದಾಖಲೆ, ದೊಡ್ಡಬೆಲೆ ಗ್ರಾಮ ಪಂಚಾಯತ್, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಖಾತಾ ನಂ. 193/48 ಹೊಂದಿರುವ, ಪೂರ್ವ-ಪಶ್ಚಿಮ 45 ಅಡಿ ಮತ್ತು ಉತ್ತರ-ದಕ್ಷಿಣ 30 ಅಡಿ (ಒಟ್ಟು 1350 ಚದರ ಅಡಿ) ವಿಸ್ತೀರ್ಣವುಳ್ಳ ವಸತಿಯೋಗ್ಯ ಮನೆ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 19, ಉತ್ತರಕ್ಕೆ: ಸೈಟ್ ನಂ. 47, ದಕ್ಷಿಣಕ್ಕೆ: ಸೈಟ್ ನಂ. 49.
6304140	1)ಶ್ರೀ. ಪ್ರಕಾಶ್ ಟಿ ಎಸ್ ಬಿನ್ ಶಿವಕುಮಾರ್, ಪಿ ಕಲ್ಲಹಳ್ಳಿ ಮುಜರೆ, ನೆಮ್ಮದಿ ಗ್ರಾಮ, ಆನೆಕೆರೆ ಬಾಣಸಂದ್ರ, ತುರುವೆಕೆರೆ, ತುಮಕೂರು-572221 2) ರಾಧಾ ಜಿ ಕೆ ಕೋಂ. ಕೃಷ್ಣಮೂರ್ತಿ ಪಿ, 13 ವಾರ್ಡ್, ಸುಬ್ರಮನ್ಯ ಶಾಲೆ ಹತ್ತಿರ, ಗಾಂಧಿನಗರ, ತುರುವೆಕೆರೆ, ತುಮಕೂರು-572227. 3) ಶ್ರೀ. ರವಿಕುಮಾರ್ ಬಿನ್ ಶಿವಕುಮಾರ್, ನೆಮ್ಮದಿ ಗ್ರಾಮ, ಆನೆಕೆರೆ ಅಂಚೆ, ಕಸಬಾ ಹೋಬಳಿ, ತುರುವೆಕೆರೆ, ತುಮಕೂರು-572227. 4) ಶ್ರೀ. ಮೂರ್ತಿ ಸಿ ಎಸ್ ಬಿನ್ ಶಿವಕುಮಾರ್, ನಂ.4, 4ನೇ ಮಹಡಿ, 6ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಮಾಸಿಯನ್ ಅಪಾರ್ಟ್‌ಮೆಂಟ್, ಬೆಂಗಳೂರು-560003. 5) ದೀಪಾ ಜೈನಾಪುರ್ ಬಿ ಬಿನ್ ಭಗವಂತ ಜೈನಾಪುರ್, 6ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಮಲ್ಲೇಶ್ವರ ಮ್ಯಾನ್ಷನ್, ಬಿಬಿಎಂಪಿ ಜಿಮ್, ಮಲ್ಲೇಶ್ವರಂ, ಬೆಂಗಳೂರು-560003.	Rs.2608312/- & 29-06-2021	28.09.2021	ಗಾಂಧಿನಗರ, ತುರುವೆಕೆರೆ ಪಟ್ಟಣ, ತುಮಕೂರು ಜಿಲ್ಲೆ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಪ್ರಾಪರ್ಟಿ ನಂ. 1040/1041 (ಹಳೆಯ ಖಾತಾ ನಂ. 884) ಮೂರನೇ ಡಿವಿಜನ್, 13ನೇ ವಾರ್ಡ್, ಪೂರ್ವ-ಪಶ್ಚಿಮ 60 ಅಡಿ ಮತ್ತು ಉತ್ತರ-ದಕ್ಷಿಣ 30 ಅಡಿ (ಒಟ್ಟು 1800 ಚದರ ಅಡಿ) ವಿಸ್ತೀರ್ಣವುಳ್ಳ ವಸತಿಯೋಗ್ಯ ಮನೆ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಾಮಕೃಷ್ಣ ದಿಕ್ಷಿತ್‌ರವರ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಾರಾಯಣ ಶಾಸ್ತ್ರಿರವರ ಸ್ವತ್ತು.
6318381	1) ಶ್ರೀ. ರಾಮಮೂರ್ತಿ ವಿ ಬಿನ್ ವೀರೇಗೌಡ, ನರಸಿಂಹನ ಅಗ್ರಹಾರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ-561204. 2) ಶ್ರೀಮತಿ. ಚಂದ್ರಮ್ಮ ಬಿನ್ ಅಶ್ವಥಯ್ಯ, ನರಸಿಂಹನ ಅಗ್ರಹಾರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ-561204. 3) ಶ್ರೀ. ಮನು ಎನ್ ಆರ್ ಬಿನ್ ರಾಮಮೂರ್ತಿ ವಿ, ನಂ.2, ಮಪ್ಪಡಿಘಟ್ಟ, ನರಸಿಂಹನ ಅಗ್ರಹಾರ, ಕದನೂರ್, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ-561204. 4) ಶ್ರೀ. ಕುಮಾರಸ್ವಾಮಿ ಎನ್ ಎಚ್ ಬಿನ್ ಹನುಮಂತರಾಜು, ನಂ.41, ನರಸಿಂಹನ ಅಗ್ರಹಾರ, ಕದನೂರ್, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ-561204.	Rs. 4547119/- & 22-06-2021	28.09.2021	ನರಸಿಂಹನ ಅಗ್ರಹಾರ ಗ್ರಾಮ, ಕದನೂರು ಗ್ರಾಮ ಪಂಚಾಯತ್, ಮಧುರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಖಾತಾ ನಂ. 67/33/1 ಹೊಂದಿರುವ ಮತ್ತು ಪೂರ್ವ-ಪಶ್ಚಿಮ 44 ಅಡಿ ಹಾಗೂ ಉತ್ತರ-ದಕ್ಷಿಣ 126 ಅಡಿ (ಒಟ್ಟು 5544 ಚದರ ಅಡಿ) ವಿಸ್ತೀರ್ಣವುಳ್ಳ ವಸತಿಯೋಗ್ಯ ಮನೆ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಸ್ವಂತದ ಸ್ವತ್ತು, ಪಶ್ಚಿಮಕ್ಕೆ: ಶಿವಶಂಕರರವರ ಸ್ವತ್ತು, ಉತ್ತರಕ್ಕೆ: ಸರ್ಕಾರಿ ರಸ್ತೆ, ದಕ್ಷಿಣಕ್ಕೆ: ಸ್ವಂತದ ಸ್ವತ್ತು.

ಸ್ಥಳ: ಬೆಂಗಳೂರು
ದಿನಾಂಕ: 05/10/2021

ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್
ಸಹಿ/- ಅಧಿಕೃತ ಅಧಿಕಾರಿ

ರಾಜ್ಯದಲ್ಲೂ ಕಾನ್‌ಸ್ಟಿಟ್ಯೂಷನ್ ಕ್ಲಬ್: ವಿಶ್ವೇಶ್ವರ ಹೆಗಡೆ ಕಾಗೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿಯಲ್ಲಿರುವ ಮಾದರಿಯಲ್ಲಿ ರಾಜ್ಯದಲ್ಲೂ 'ಕಾನ್‌ಸ್ಟಿಟ್ಯೂಷನ್ ಕ್ಲಬ್' (ಶಾಸಕರ ಮತ್ತು ಮಾಜಿ ಶಾಸಕರ ಮನರಂಜನಾ ಕ್ಲಬ್) ಆರಂಭಿಸಲು ತೀರ್ಮಾನಿಸಲಾಗಿದೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಬಾಲಬ್ರೂಯಿ ಕಟ್ಟಡದ ಪಾರಂಪರಿಕ, ಐತಿಹಾಸಿಕ ವಿಶೇಷತೆಗೆ ಧಕ್ಕೆ ಬಾರದ ರೀತಿಯಲ್ಲಿ ಅಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಿ ಕ್ಲಬ್ ಆರಂಭಿಸಲು ನಿರ್ಧರಿಸಲಾಗಿದೆ' ಎಂದರು.

'ಕಳೆದ ವಿಧಾನಮಂಡಲ ಅಧಿವೇಶನ ಸಂದರ್ಭದಲ್ಲಿ ನಡೆದ ವಿಧಾನ ಮಂಡಲದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕ್ಲಬ್ ಆರಂಭಿಸಲು ತೀರ್ಮಾನಿಸಲಾಗಿದೆ. ಈ ಸಭೆಯ ನಿರ್ಣಯದಂತೆ ಕ್ಲಬ್ ಆರಂಭಿಸಲು ಅಗತ್ಯ ಕ್ರಮ ವಹಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿದೆ. ನಾನು ಒಮ್ಮೆ ದೆಹಲಿಗೆ ತೆರಳಿ ಅಲ್ಲಿನ ಕಾನ್‌ಸ್ಟಿಟ್ಯೂಷನ್ ಕ್ಲಬ್ ನೋಡಿ ಬರುತ್ತೇನೆ' ಎಂದರು.

'ಶಾಸಕರಿಗೆಂದೇ ಒಂದು ಕ್ಲಬ್ ಆರಂಭಿಸುವ ಬಗ್ಗೆ ಹಲವು ವರ್ಷಗಳಿಂದ ಚರ್ಚೆ ನಡೆಯುತ್ತಲೇ ಇತ್ತು. ಶಾಸಕರು ಒಂದೆಡೆ ಸೇರಿ ಚರ್ಚಿಸಲು ಒಂದು ಜಾಗಬೇಕು. ನನೆಗುದಿಗೆ ಬಿದ್ದಿದ್ದ ಕಾನ್‌ಸ್ಟಿಟ್ಯೂಷನ್ ಕ್ಲಬ್ ಆರಂಭಿಸಲು ನಿರ್ಧರಿಸಲಾಗಿದೆ' ಎಂದು ಸಮರ್ಥನೆ ನೀಡಿದರು.

ಒಳ್ಳೆಯ ಬೆಳವಣಿಗೆ: 'ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಕಲಾಪ ಅತ್ಯುತ್ತಮವಾಗಿ ನಡೆದಿದೆ. ಮಸೂದೆಗಳು, ಸಾರ್ವಜನಿಕ ಮಹತ್ವದ ವಿಷಯಗಳ ಕುರಿತು ವಿಸ್ತೃತ ಚರ್ಚೆ ನಡೆದಿದೆ. ವಿರೋಧ ಪಕ್ಷ ಕಾಂಗ್ರೆಸ್ ಧರಣಿ ನಡೆಸದಿರಲು ನಿರ್ಣಯ ಕೈಗೊಂಡಿರುವುದಾಗಿ ಸದನದಲ್ಲೇ ತಿಳಿಸಿದ್ದು ಒಳ್ಳೆಯ ಬೆಳವಣಿಗೆ. ಕಳೆದ ಅಧಿವೇಶನದಲ್ಲಿ ಕಲಾಪವನ್ನು ಒಂದು ಬಾರಿಯೂ ಮುಂದೂಡುವ ಸಂದರ್ಭ ಬರಲಿಲ್ಲ ಎಂಬುದು ಗಮನಾರ್ಹ' ಎಂದರು.

'ಕುಸುಮ್' ಯೋಜನೆಯ ಅಡಿ ಪಂಪ್‌ಸೆಟ್ ನೀಡಲು ಕ್ರಮ'

ಬೆಂಗಳೂರು: 'ಪ್ರಧಾನಮಂತ್ರಿ ಕುಸುಮ್' ಯೋಜನೆಯ ಅಡಿಯಲ್ಲಿ ರಾಜ್ಯದ ಫಲಾನುಭವಿ ರೈತರಿಗೆ ಶೀಘ್ರವೇ ಸೋಲಾರ್ ಗ್ರಿಡ್ ಆಧಾರಿತ ಪಂಪ್‌ಸೆಟ್‌ಗಳನ್ನು ನೀಡಲು ಸರ್ಕಾರ ನೆರವಾಗಲಿದೆ' ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ತಿಳಿಸಿದರು.

ಕರ್ನಾಟಕ ನವೀಕರಿಸಬಹುದಾದ ಇಂಧನ ಉಪಕರಣಗಳ ತಯಾರಕರ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯದ ಎಲ್ಲಾ ಸರ್ಕಾರಿ ಕಟ್ಟಡಗಳ ಮೇಲೆ ಶೀಘ್ರವೇ ಸೋಲಾರ್ ಅಳವಡಿಸಲಾಗುತ್ತದೆ. ಜೊತೆಗೆ 1000 ಇವಿ ಚಾರ್ಜಿಂಗ್ ವ್ಯವಸ್ಥೆಯನ್ನೂ ಮಾಡಲಾಗುತ್ತದೆ. ಪಾವಗಡದ ಮಾದರಿಯಲ್ಲಿ ರಾಜ್ಯದ ಇತರ ಭಾಗಗಳಲ್ಲಿಯೂ ಸೋಲಾರ್ ಪಾರ್ಕ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

ಕರ್ನಾಟಕ ನವೀಕರಿಸಬಹುದಾದ ಇಂಧನ ಉಪಕರಣಗಳ ತಯಾರಕರ ಸಂಘದ ಅಧ್ಯಕ್ಷ ರಮೇಶ್ ಶಿವಣ್ಣ, ಕೆಆರ್‌ಇಡಿಎಲ್ ವ್ಯವಸ್ಥಾಪಕ ನಿರ್ದೇಶಕ ರುದ್ರಪ್ಪಯ್ಯ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಇದ್ದರು.

'ಜೆಡಿಎಸ್‌ನಿಂದ ಮಾನಸಿಕ, ದೈಹಿಕವಾಗಿ ದೂರ'

ಚಿಕ್ಕಬಳ್ಳಾಪುರ: 'ಜೆಡಿಎಸ್ ಜತೆ ಮಾನಸಿಕ ಮತ್ತು ದೈಹಿಕವಾಗಿ ದೂರವಾಗಿ ಎರಡು ವರ್ಷವಾಗಿದೆ. ತಾಂತ್ರಿಕವಾಗಿ ಅಷ್ಟೇ ಆ ಪಕ್ಷದಲ್ಲಿ ಇದ್ದೇನೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಆರ್. ಮನೋಹರ್ ತಿಳಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, ಇತ್ತೀಚೆಗೆ ಜೆಡಿಎಸ್ ಪಕ್ಷದಿಂದ ನಡೆದ ಕಾರ್ಯಾಗಾರಕ್ಕೆ ನನಗೆ ಆಹ್ವಾನ ಇರಲಿಲ್ಲ. ಆ ಬಗ್ಗೆ ನನಗೆ ಮಾಹಿತಿಯೂ ಇಲ್ಲ' ಎಂದರು.





ಕೆಪಿಸಿಸಿ ಕಚೇರಿಯಿಂದ ರಾಜಭವನದವರೆಗೆ ಕಾಂಗ್ರೆಸ್ ನಾಯಕರು ಪಂಜಿನ ಮೆರವಣಿಗೆ ನಡೆಸಿದರು (ಎಡ ಚಿತ್ರ), ಮೈಸೂರು ಬ್ಯಾಂಕ್ ವೃತ್ತದಲ್ಲಿ ವಾಹನಗಳ ಸಂಚಾರ ತಡೆಯಲು ಯತ್ನಿಸಿದ್ದ ಪ್ರತಿಭಟನಕಾರರನ್ನು ಪೊಲೀಸರು ರಸ್ತೆಯ ಪಕ್ಕಕ್ಕೆ ಕೂರಿಸಿದರು

ಪಂಜಿನ ಮೆರವಣಿಗೆ: ಕಾಂಗ್ರೆಸ್ ನಾಯಕರ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶದಲ್ಲಿ ನಡೆದ ಘಟನೆ ಮತ್ತು ಮೃತ ರೈತರ ಕುಟುಂಬದವರಿಗೆ ಸಾಂತ್ವನ ಹೇಳಲು ಹೋದ ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ಬಂಧನ ಖಂಡಿಸಿ ಕೆಪಿಸಿಸಿ ಕಚೇರಿಯಿಂದ ರಾಜಭವನದವರೆಗೆ ಪಂಜಿನ ಮೆರವಣಿಗೆ ನಡೆಸಲು ಮುಂದಾದ ಕಾಂಗ್ರೆಸ್ ನಾಯಕರನ್ನು ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದ ಬಳಿ ತಡೆದ ಪೊಲೀಸರು ವಶಕ್ಕೆ ಪಡೆದರು.

ಮೆರವಣಿಗೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹ್ಮದ್, ಆರ್. ಧ್ರುವನಾರಾಯಣ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ರಕ್ಷಾ ರಾಮಯ್ಯ ಇದ್ದರು. ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಬಿಜೆಪಿ ವಿರುದ್ಧ ಭಿತ್ತಿಪತ್ರ ಪ್ರದರ್ಶಿಸಿ, ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಕಾಂಗ್ರೆಸ್ ನಾಯಕರ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ರಾಜೀನಾಮೆ ನೀಡಲಿ: 'ಉತ್ತರ ಪ್ರದೇಶದಲ್ಲಿ ನಡೆದ ಘಟನೆಗೆ ನೈತಿಕ ಹೊಣೆ ಹೊತ್ತು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಮತ್ತು ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬೆಳಗ್ಗೆ ಮಾತನಾಡಿದ ಅವರು, 'ದೇಶದಲ್ಲಿ ನೀಚ ರಾವಣ ಸರ್ಕಾರ ಅಧಿಕಾರ ನಡೆಸುತ್ತಿದೆ. ಹೀಗಾಗಿ, ಅನ್ನದಾತರು ಹಾಗೂ ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಇದು ಕೇವಲ ನಾಲ್ವರು ರೈತರ ಕೊಲೆ ಅಲ್ಲ. ರೈತ ಸಮುದಾಯದ ಕೊಲೆ. ಪ್ರಜಾತಂತ್ರ ವ್ಯವಸ್ಥೆಯ ಕೊಲೆ. ಬಲಿಯಾದ ರೈತರ ಕುಟುಂಬವನ್ನು ಭೇಟಿ ಮಾಡಲು ಮುಂದಾದ ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ಅವರನ್ನು ಉತ್ತರ ಪ್ರದೇಶ ಪೊಲೀಸರು ಬಂಧಿಸಿರುವುದು ಖಂಡನೀಯ. ಪುರುಷ ಪೊಲೀಸ್ ಅಧಿಕಾರಿಗಳು ಪ್ರಿಯಾಂಕಾ ಗಾಂಧಿ ಅವರ ಮೈ ಮೇಲೆ ಕೈ ಹಾಕಿ ಎಳೆದಾಡಿದ್ದಾರೆ. ಮಹಿಳೆಯರಿಗೆ ಮಾಡಿದ ಅಪಮಾನವಿದು' ಎಂದರು.

'ಕೃಷಿ ಕರಾಳ ಕಾಯ್ದೆಗಳನ್ನು ವಿರೋಧಿಸಿ 10 ತಿಂಗಳಿಂದ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಕರೆದು ಮಾತನಾಡಿಸುವ ಕನಿಷ್ಠ ಸೌಜನ್ಯವೂ ಕೇಂದ್ರ ಸರ್ಕಾರಕ್ಕೆ ಇಲ್ಲ. ಅನ್ನದಾತನ ಬೆಂಬಲಕ್ಕೆ ಪಕ್ಷ ನಿಲ್ಲಲಿದೆ. ಕೇಂದ್ರ ಸರ್ಕಾರ ಇನ್ನಾದರೂ ತನ್ನ ಸರ್ವಾಧಿಕಾರಿ ಮನಸ್ಥಿತಿಯಿಂದ ಹೊರಬರಬೇಕು' ಎಂದರು.

'ಬಿಜೆಪಿಯ ಕೊಲೆಗಡುಕ ಮನಸ್ಸಿಗೆ ಸಾಕ್ಷಿ'

'ಉತ್ತರ ಪ್ರದೇಶದಲ್ಲಿ ಸಚಿವರ ಮಗನ ಕಾರಿನಡಿಗೆ ಸಿಕ್ಕಿ ರೈತರು ಸಾವಿಗೀಡಾದ ಪ್ರಕರಣ ಬಿಜೆಪಿಯ ಕೊಲೆಗಡುಕ ಮನಸ್ಸಿಗೆ ಸಾಕ್ಷಿ' ಎಂದು ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಗೂಂಡಾ ರಾಜ್ಯದಲ್ಲಿ ದಲಿತರು, ರೈತರು, ಮಹಿಳೆಯರು ಮತ್ತು ಬಡವರ ಮಾನ- ಪ್ರಾಣ ಯಾವುದೂ ಸುರಕ್ಷಿತ ಅಲ್ಲ. ಸಂವಿಧಾನವೇ ಕುಸಿದುಬಿದ್ದಿರುವ ಸ್ಥಿತಿಯಲ್ಲಿ ರಾಷ್ಟ್ರಪತಿ ಮಧ್ಯಪ್ರವೇಶಿಸಿ ಅಲ್ಲಿನ ಬಿಜೆಪಿ ಸರ್ಕಾರವನ್ನು ವಜಾಗೊಳಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಪ್ರತಿರೋಧ- ಭಿನ್ನಾಭಿಪ್ರಾಯ ಸಹಿಸದ ಬಿಜೆಪಿ ಸರ್ಕಾರ, ತನ್ನ ತಾಲಿಬಾನ್ ಮನಸ್ಥಿತಿಯನ್ನು ಬೆತ್ತಲು ಮಾಡಿಕೊಳ್ಳುತ್ತಿದೆ. ರೈತರ ಹತ್ಯೆ ನಡೆದ ಸ್ಥಳಕ್ಕೆ ಭೇಟಿ ನೀಡಲು ಹೊರಟ ಪ್ರಿಯಾಂಕಾ ಗಾಂಧಿ ಅವರನ್ನು ಬಂಧಿಸಿರುವುದು ಖಂಡನೀಯ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ಬೆಂಗಳೂರು: ಉತ್ತರ ಪ್ರದೇಶದ ಲಖಿಂಪುರ್– ಖೇರಿ ಜಿಲ್ಲೆಯಲ್ಲಿ ಸಚಿವರ ಬೆಂಗಾವಲು ವಾಹನ ಹರಿದು ಪ್ರತಿಭಟನನಿರತ ರೈತರು ಮೃತಪಟ್ಟಿರುವ ಘಟನೆಯನ್ನು ಖಂಡಿಸಿ ನಗರದ ಹಲವು ಸಂಘಟನೆಗಳ ಪದಾಧಿಕಾರಿಗಳು ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಆಲ್ ಇಂಡಿಯಾ ಕೃಷಿಕ್ ಖೇತ್ ಮಜ್ದೂರ್ ಸಂಘ(ಎಐಕೆಕೆಎಂಎಸ್), ರೈತ ಕೃಷಿ ಕಾರ್ಮಿಕರ ಸಂಘಟನೆ, ಎಐಎಸ್‌ಎ ಹಾಗೂ ಕರ್ನಾಟಕ ಜನಶಕ್ತಿ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಕೇಂದ್ರ ಸರ್ಕಾರ, ಕ್ರೂರ ಸರ್ಕಾರ', 'ರೈತರನ್ನು ಕೊಲೆ ಮಾಡಿರುವ ಮಿಶ್ರಾನನ್ನು ಬಂಧಿಸಿ', 'ರೈತರ ಮೇಲಿನ ದೌರ್ಜನ್ಯ ನಿಲ್ಲಲಿ', 'ಅನ್ನ ಹಾಕುವ ರೈತರನ್ನೇ ಕೊಲ್ಲುವ ಮನಸ್ಥಿತಿಗೆ ಧಿಕ್ಕಾರ' ಸೇರಿದಂತೆ ಹಲವು ಘೋಷಣಾ ಫಲಕಗಳನ್ನು ಪ್ರತಿಭಟನಕಾರರು ಪ್ರದರ್ಶಿಸಿ ಆಕ್ರೋಶ ಹೊರಹಾಕಿದರು.

'ಕೇಂದ್ರ ಸರ್ಕಾರ, ರೈತರ ಮೇಲೆ ನಿರಂತರವಾಗಿ ದೌರ್ಜನ್ಯ ಮಾಡುತ್ತ ಬರುತ್ತಿದೆ. ಹೊಸ ಕೃಷಿ ಕಾಯ್ದೆಗಳನ್ನು ತಂದು ರೈತರನ್ನು ಸಂಕಷ್ಟಕ್ಕೆ ದೂಡುತ್ತಿದೆ. ಇದರ ವಿರುದ್ಧ ಧ್ವನಿಯೆತ್ತುವ ರೈತರನ್ನು ಕೊಲೆ ಮಾಡುವ ಹಂತಕ್ಕೂ ಸರ್ಕಾರ ಬಂದು ತಲುಪಿದೆ' ಎಂದು ಪ್ರತಿಭಟನಕಾರರು ಕಿಡಿಕಾರಿದರು.

'ಉತ್ತರ ಪ್ರದೇಶದಲ್ಲಿ ನಡೆದಿರುವ ಘಟನೆಯನ್ನು ಇಡೀ ದೇಶವೇ ಖಂಡಿಸುತ್ತಿದೆ. ಕೃತ್ಯಕ್ಕೆ ಕಾರಣರಾದವರನ್ನು ಕೂಡಲೇ ಬಂಧಿಸಬೇಕು. ಅವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಂಡು, ಎಚ್ಚರಿಕೆ ಸಂದೇಶ ರವಾನಿಸಬೇಕು' ಎಂದೂ ಒತ್ತಾಯಿಸಿದರು.

ವಾಹನಗಳ ತಡೆಗೆ ಯತ್ನ: ಪ್ರತಿಭಟನಕಾರರು ಮೈಸೂರು ಬ್ಯಾಂಕ್ ವೃತ್ತದಲ್ಲಿ ವಾಹನಗಳ ಸಂಚಾರ ತಡೆಯಲು ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು 'ವಾಹನವನ್ನು ಅಡ್ಡಗಟ್ಟಿ ಸಾರ್ವಜನಿಕರಿಗೆ ತೊಂದರೆ ಕೊಡಬೇಡಿ' ಎಂದರು. ಪರಸ್ಪರ ಮಾತಿನ ಚಕಮಕಿಯೂ ನಡೆಯಿತು.

ರಸ್ತೆಯಲ್ಲಿ ಕುಳಿತಿದ್ದ ಕೆಲವರನ್ನು ಪೊಲೀಸರು, ಪಕ್ಕಕ್ಕೆ ಸರಿಸಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಸುದ್ದಿ 2 ನಿಮಿಷ

ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯ-ನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅಕ್ಟೋಬರ್ 5 ಮತ್ತು 6ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: 5ರಂದು ದೊಡ್ಡಬೆಲೆ ರಸ್ತೆ, ತಿಪ್ಪೇನಹಳ್ಳಿ ರಸ್ತೆ, ಸಿ.ಎನ್.ಪಾಳ್ಯ, ಕೆಂಗೇರಿ ಮುಖ್ಯರಸ್ತೆ, ಅಪೂರ್ವ ಬಡಾವಣೆ, ಉಲ್ಲಾಳ ನಗರ, ದೊಡ್ಡಬಸ್ತಿ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಮೂಡಲಪಾಳ್ಯ, ನಾಗರಬಾವಿ, ಮಲ್ಲತ್ತಹಳ್ಳಿ, ಕೆಂಗುಂಟೆ, ಸಂಜೀವಿನಿ ನಗರ, ಗೋವಿಂದರಾಜ ನಗರ, ಕಾಮಾಕ್ಷಿಪಾಳ್ಯ, ವಿನಾಯಕ ನಗರ, ಪಾಪರೆಡ್ಡಿ ಪಾಳ್ಯ, ವೃಷಭಾವತಿ ನಗರ, ಲಕ್ಷ್ಮಣ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಉಲ್ಲಾಳ ಮುಖ್ಯರಸ್ತೆ, ಎನ್‌ಜಿಇಎಫ್ ಬಡಾವಣೆ. ಇದೇ 6ರಂದು ಗುಂಜೂರು ಪಾಳ್ಯ, ಪಣತ್ತೂರು ದಿಣ್ಣೆ, ವಸಂತ ಬಡಾವಣೆ, ಕಾಡುಬೀಸನಹಳ್ಳಿ, ಹೇಮಂತ ನಗರ, ಅಯ್ಯಪ್ಪ ಬಡಾವಣೆ, ಆನಂದ ನಗರ, ಕಾವೇರಿ ಬಡಾವಣೆ, ವಿನಾಯಕ ಬಡಾವಣೆ, ಹಳೆಯ ವಿಮಾನ ನಿಲ್ದಾಣ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

'ಬಿಜೆಪಿಯವರಿಗೆ ಕ್ಷೇತ್ರ ಹಾಳು ಮಾಡಿದ ಕೀರ್ತಿ'

ಬೆಂಗಳೂರು: 'ಬಿಜೆಪಿ ಶಾಸಕರು 15 ವರ್ಷಗಳಿಂದ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೂ ಯಾವುದೇ ಅಭಿವೃದ್ಧಿ ಕೆಲಸ ಮಾಡದ ಕಾರಣ, ಬದಲಾವಣೆಯ ಪರ್ವ ಶುರುವಾಗಿದೆ. ಕ್ಷೇತ್ರವನ್ನು ಹಾಳು ಮಾಡಿದ ಕೀರ್ತಿಗೆ ಬಿಜೆಪಿಗರು ಪಾತ್ರರಾಗಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ದೂರಿದರು.

ಲಯನ್ಸ್ ಕ್ಲಬ್, ಗಂಧದ ನಾಡು ಜನಪರ ವೇದಿಕೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹೆನ್ನಾಗರ ಗ್ರಾಮ ಪಂಚಾಯಿತಿಯ ಕಾಚನಾಯಕನಹಳ್ಳಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

'ಬಿಜೆಪಿ ಕಾರ್ಯಕ್ರಮಗಳಲ್ಲಿ ಕಾಂಗ್ರೆಸ್ ನಾಯಕರಿಗೆ ಜೈಕಾರ ಹಾಕುವ ಮೂಲಕ ಮುಂದಿನ ಬದಲಾವಣೆಯನ್ನು ಕ್ಷೇತ್ರದ ಮತದಾರರು ಬಯಸುತ್ತಿದ್ದಾರೆ' ಎಂದರು.

ಶಿಬಿರದಲ್ಲಿ 980ಕ್ಕೂ ಹೆಚ್ಚು ಮಂದಿಗೆ ಉಚಿತವಾಗಿ ಚಿಕಿತ್ಸೆ ಹಾಗೂ ಔಷಧ ವಿತರಿಸಲಾಯಿತು. 164 ಜನರಿಗೆ ಕಣ್ಣಿನ ಉಚಿತ ಪರೀಕ್ಷೆ, 59 ಮಂದಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಹಾಗೂ 57 ಮಂದಿಗೆ ದಂತ ಚಿಕಿತ್ಸೆ ಮಾಡಲು ದಾಖಲಿಸಿಕೊಳ್ಳಲಾಯಿತು.

'ದಲಿತ ನಾಯಕರನ್ನು ಸೋಲಿಸಿದ್ದು ಯಾರು?'

ಪ್ರಜಾವಾಣಿ ವಾರ್ತೆ

ರಾಮನಗರ: 'ನೀವು ಎಷ್ಟು ಸಮುದಾಯಗಳಿಗೆ ಗೌರವ ಕೊಟ್ಟಿದ್ದೀರಿ? ನಿಮ್ಮ ಪಕ್ಷದ ದಲಿತ ಸಮಾಜದ ನಾಯಕರನ್ನು ಚುನಾವಣೆಯಲ್ಲಿ ಸೋಲಿಸಿದವರು ಯಾರು? ಪಟ್ಟಿ ದೊಡ್ಡದಾಗಿದೆ, ಒಮ್ಮೆ ನೋಡಿಕೊಳ್ಳಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದರು.

'ಜೆಡಿಎಸ್ ಕೇವಲ ಒಕ್ಕಲಿಗ, ಲಿಂಗಾಯತ ಸಮುದಾಯಕ್ಕೆ ಮಾತ್ರ ಆದ್ಯತೆ ನೀಡುತ್ತದೆ' ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಬಿಡದಿಯಲ್ಲಿ ಮಂಗಳವಾರ ಅವರು ಪ್ರತಿಕ್ರಿಯೆ ನೀಡಿದರು. 'ಮುಖ್ಯಮಂತ್ರಿ ಸ್ಥಾನಕ್ಕೆ ಅಡ್ಡಿ ಬರುತ್ತಾರೆಂದು ಜಿ. ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ ಸೋಲಿಗೆ ಕಾರಣ ಯಾರು? ಧರ್ಮಸಿಂಗ್ ಅವರ ಸೋಲಿಗೆ ಕಾರಣ ಯಾರು? ಕೋಲಾರದಲ್ಲಿ ಕೆ.ಎಚ್. ಮುನಿಯಪ್ಪ ಅವರನ್ನು ಸೋಲಿಸಿದವರು ಯಾರು? ಬಿಜೆಪಿಗೆ ಶಕ್ತಿಯೇ ಇಲ್ಲದ ಹಾಗೂ ಕಾರ್ಪೊರೇಟರ್ ಕೂಡ ಆಗಲು ಆಗದಂತಹ ವ್ಯಕ್ತಿಯನ್ನು ಕರೆತಂದು ಕೋಲಾರದಲ್ಲಿ ನಿಲ್ಲಿಸಿ ಪ್ರತ್ಯಕ್ಷವಾಗಿ, ಬೆಂಬಲ ನೀಡಿದವರು ಯಾರು? ರಮೇಶ್ ಕುಮಾರ್ ಯಾರ ಪರ ಕೆಲಸ ಮಾಡಿದರು. ಅಲ್ಲಿನ ಬಿಜೆಪಿ ಸಂಸದರ ಆಯ್ಕೆ ಹಿಂದೆ ಯಾರಿದ್ದಾರೆ?' ಎಂದು ಕುಮಾರಸ್ವಾಮಿ ಪ್ರಶ್ನೆ ಮಾಡಿದರು.

ಕಾಂಗ್ರೆಸ್ ಪಕ್ಷದ ದಲಿತ ನಾಯಕರ ಸೋಲಿಗೆ ಅವರೇ ಕಾರಣವಲ್ಲವೇ? ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರಿಗೆ ನಮ್ಮ ಪಕ್ಷದ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಪ್ರಚಾರ ಪ್ರಿಯ ಸರ್ಕಾರ: ರಾಜ್ಯ ಸರ್ಕಾರ ಜಾಹೀರಾತುಗಳ ಮೂಲಕ ಪ್ರಚಾರ ಹಾಗೂ ಸ್ವ ಪ್ರಶಂಸೆಯಲ್ಲಿ ಮುಳುಗಿದೆ. ಮೋದಿ, ಬೊಮ್ಮಾಯಿ ಇಬ್ಬರೂ ನವ ಭಾರತಕ್ಕಾಗಿ ನವ ಕರ್ನಾಟಕವೆಂದು ಪ್ರಚಾರ ಪಡೆಯುತ್ತಿದ್ದಾರೆ. ಬೊಮ್ಮಾಯಿ ಸಹ ಮೋದಿ ಅವರಂತೆ ಡ್ರೆಸ್ ಮಾಡಿಕೊಂಡು ಫೋಟೋ ಶೂಟ್ ಮಾಡಿಸಿಕೊಂಡು ಬಸ್ ನಿಲ್ದಾಣಗಳ ಮೇಲೆ ಜಾಹೀರಾತುಗಳಲ್ಲಿ ಪೋಸು ಕೊಡುತ್ತಿದ್ದಾರೆ. ಇವರು ಏನು ಮಾಡಲು ಹೊರಟಿದ್ದಾರೆ? ನವ ಕರ್ನಾಟಕ ಏನು ಅನ್ನೋದು ನನಗೇ ಇನ್ನೂ ಅರ್ಥವಾಗಿಲ್ಲ. ಇವರಾದರೂ ನಮಗೆ ಹೇಳಲಿ ಎಂದು ಕುಮಾರಸ್ವಾಮಿ ತರಾಟೆಗೆ ತೆಗೆದುಕೊಂಡರು.

ನಗರದಲ್ಲಿ ಇಂದು

'ಎನ್‌ಇಪಿ-ಪಠ್ಯಕ್ರಮ ಮತ್ತು ಗುಣಮಟ್ಟದಲ್ಲಿ ಬದಲಾವಣೆಗೆ ಒಂದು ಅವಕಾಶ' ಕುರಿತು ವಿಚಾರ ಸಂಕಿರಣ: ಮಾತನಾಡುವವರು–ಶಿಕ್ಷಣ ತಜ್ಞ ಗುರುರಾಜ ಕರಜಗಿ, 'ಶಾಲೆಗಳ ಪುನರಾರಂಭ' ವಿಷಯದ ಕುರಿತು ಮಾತನಾಡುವವರು–ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್, 'ಶಾಲೆಗಳ ಪುನರಾರಂಭ ಮತ್ತು ಕೋವಿಡ್ ನಂತರದ ಜಗತ್ತಿನಲ್ಲಿ ತಂತ್ರಜ್ಞಾನದ ಪಾತ್ರ' ಕುರಿತು ಸಂವಾದ, ಆಯೋಜನೆ–ಎಡ್‌ಕ್ವಾರ್ಟ್, ಸ್ಥಳ–ರಿಟ್ಜ್ ಕಾರ್ಟನ್ ಹೋಟೆಲ್, ರೆಸಿಡೆನ್ಸಿ ರಸ್ತೆ –ಸಂಜೆ 6.30.

13ನೇ ಆವೃತ್ತಿಯ 'ಮಂಥನ್-2021' ಗ್ರ್ಯಾಂಡ್ ಫಿನಾಲೆ: ಮುಖ್ಯ ಅತಿಥಿ–ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ–ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ–ಎಂ.ವಿ. ಆಡಿಟೋರಿಯಂ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ–ಸಂಜೆ 5.

ಅಮೃತ ಮಹೋತ್ಸವ ಬೀದಿ ನಾಟಕದ ಸರಣಿ–2021ಗೆ ಚಾಲನೆ ಹಾಗೂ 'ಈಸೂರು ದಂಗೆ' ನಾಟಕ ಪ್ರದರ್ಶನ: ಉದ್ಘಾಟನೆ–ಕುಲಪತಿ ಕೆ.ಆರ್. ವೇಣುಗೋಪಾಲ್, ಮುಖ್ಯ ಅತಿಥಿ–ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಪ್ರೊ. ಹಂಸಿಣಿ ನಾಗೇಂದ್ರ, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ–ಜ್ಞಾನಭಾರತಿ ಆವರಣ–ಮಧ್ಯಾಹ್ನ 1.30.

'ಮೂವತ್ತೊಂದು ದಿನ ಮೂವತ್ತೊಂದು ಉಪನ್ಯಾಸ' ಸರಣಿಯ ಅಂಗವಾಗಿ 'ಕನ್ನಡದಲ್ಲಿ ಮ್ಯಾಕ್‌ಬೆತ್' ಕುರಿತು ಉಪನ್ಯಾಸ: ಮಾತನಾಡುವವರು–ಬಸವರಾಜ ಡೋಣೂರ, ಆಯೋಜನೆ–ಕರ್ನಾಟಕ ಸಾಹಿತ್ಯ ಅಕಾಡೆಮಿ (ಆನ್‌ಲೈನ್ ಕಾರ್ಯಕ್ರಮ) –ಸಂಜೆ 5.30.

ಡಾ.ಪಿ.ಚೌಡಪ್ಪ ಅವರ 'ಅಡಿಕೆ' ಪುಸ್ತಕ ಬಿಡುಗಡೆ: ಲೋಕಾರ್ಪಣೆ ಮಾಡುವವರು–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳ–ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾ–ಸಂಜೆ 6.

ಆನಂದ್ ಸಿಂಗ್- ಕಂಪ್ಲಿ ಗಣೇಶ್ ಪ್ರಕರಣ: ರಾಜಿಯಲ್ಲಿ ಅಂತ್ಯ

ಬೆಂಗಳೂರು: ಎರಡು ವರ್ಷಗಳ ಹಿಂದೆ ರೆಸಾರ್ಟ್‌ನಲ್ಲಿ ಪರಸ್ಪರ ಹೊಡೆದಾಡಿಕೊಂಡು ಕೋರ್ಟ್‌ಮೆಟ್ಟಿಲೇರಿದ್ದ ವಿಜಯನಗರ ಕ್ಷೇತ್ರದ ಶಾಸಕ ಆನಂದ ಸಿಂಗ್ ಮತ್ತು ಕಂಪ್ಲಿ ಕ್ಷೇತ್ರದ ಶಾಸಕ ಜೆ.ಎನ್. ಗಣೇಶ್ ಮಧ್ಯದ ಪ್ರಕರಣ ಪರಸ್ಪರ ರಾಜಿ ಸಂಧಾನದಲ್ಲಿ ಅಂತ್ಯಗೊಂಡಿದೆ.

ಪ್ರಕರಣವನ್ನು ರದ್ದುಪಡಿಸುವಂತೆ ಕೋರಿ ಕಂಪ್ಲಿ ಗಣೇಶ್ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪುರಸ್ಕರಿಸಿ, ಪ್ರಕರಣ ರದ್ದುಪಡಿಸಿ ಆದೇಶಿಸಿತು.

ಸಾಹಿತ್ಯ ಅಕಾಡೆಮಿ ಹಾಗೂ ಜೈನ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಅಖಿಲ ಭಾರತೀಯ ಕಾವ್ಯೋತ್ಸವ' ಕಾರ್ಯಕ್ರಮದಲ್ಲಿ (ಎಡದಿಂದ) ಕವಿಗಳಾದ ಬಿಜೊಯ್ ಶಂಕರ್ ಬರ್ಮನ್, ಅನಿಲ್ ಚಾವ್ಡಾ, ಬದ್ರಿ ನಾರಾಯಣ್, ಬಿ.ಆರ್.ಲಕ್ಷ್ಮಣರಾವ್ ಹಾಗೂ ಎ.ಆರ್.ಗೋವಿಂದಸ್ವಾಮಿ ಭಾಗವಹಿಸಿದ್ದರು.

ರಾಷ್ಟ್ರೀಯ ಶಿಶಿಕ್ಷು ಮೇಳ-2021

'ಕೌಶಲಯುಕ್ತ ಉದ್ಯೋಗಿಗಳ ಸೃಷ್ಟಿಯ ಗುರಿ'

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಆಯುಕ್ತ ಡಾ.ಕೆ.ಹರೀಶ್‌ಕುಮಾರ್ (ಮಧ್ಯ) ಮತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಉಪನಿರ್ದೇಶಕ ಹಾಗೂ ಪ್ರಾಂಶುಪಾಲ ಕೆ.ಆರ್.ಹಾಲಪ್ಪ ಶೆಟ್ಟಿ (ಬಲದಿಂದ ಎರಡನೆಯವರು) ಚರ್ಚಿಸಿದರು. (ಎಡದಿಂದ) ಬೆಂಗಳೂರು ನಗರ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಡಿ.ಎಲ್.ಕೃಷ್ಣಮೂರ್ತಿ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಜಂಟಿ ನಿರ್ದೇಶಕ ವೈಜಗೊಂಡ ಹಾಗೂ ಇಲಾಖೆಯ ಸಮಾಲೋಚಕ ಅನ್ವರ್ ಪಾಷಾ ಇದ್ದರು

ಬೆಂಗಳೂರು: 'ಕೌಶಲಯುಕ್ತ ಉದ್ಯೋಗಿಗಳ ಸೃಷ್ಟಿಯೇ ಶಿಶಿಕ್ಷು ಮೇಳದ ಮೂಲ ಧ್ಯೇಯ. ಅಭ್ಯರ್ಥಿಗಳನ್ನು ಔದ್ಯೋಗಿಕ ವಲಯಕ್ಕೆ ಅಣಿಗೊಳಿಸುವ ಗುರಿಯೂ ಇದರ ಹಿಂದೆ ಅಡಗಿದೆ' ಎಂದು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಆಯುಕ್ತ ಡಾ.ಕೆ.ಹರೀಶ್ ಕುಮಾರ್ ತಿಳಿಸಿದರು.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ಹೊಸೂರು ರಸ್ತೆಯ ಕೈಗಾರಿಕಾ ತರಬೇತಿ ಸಂಸ್ಥೆಯ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಶಿಶಿಕ್ಷು ಮೇಳ–2021' ಉದ್ಘಾಟಿಸಿ ಮಾತನಾಡಿದರು.

'ಉದ್ಯೋಗಾಕಾಂಕ್ಷಿಗಳ ಹಾಗೂ ಪ್ರಮುಖ ಕಂಪನಿಗಳ ನಡುವೆ ಬಾಂಧವ್ಯ ಬೆಸೆಯಲೂ ಈ ಮೇಳ ಸಹಕಾರಿಯಾಗಲಿದೆ.ತರಬೇತಿಗೆಆಯ್ಕೆಯಾದಅಭ್ಯರ್ಥಿಗಳಿಗೆ ಕಂಪನಿಯು ಮಾಸಿಕ ₹10 ಸಾವಿರ ಗೌರವಧನ ನೀಡಲಿದೆ. ಸರ್ಕಾರವು ಪ್ರತಿ ಅಭ್ಯರ್ಥಿಗೆ ₹2,500 ರಂತೆ ಕಂಪನಿಗಳಿಗೆ ಹಣ ಪಾವತಿಸಲಿದೆ' ಎಂದರು.

'30ಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಉದ್ದಿಮೆಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತವೆ. ಕೋರ್ಸ್‌ಗಳಿಗೆ ಅನುಗುಣವಾಗಿ 6 ತಿಂಗಳಿಂದ 3 ವರ್ಷದವರೆಗೂ ತರಬೇತಿ ನೀಡಲಾಗುತ್ತದೆ. ತರಬೇತಿ ಅವಧಿಯಲ್ಲಿ ಉತ್ತಮ ಸಾಮರ್ಥ್ಯ ತೋರುವ ಅಭ್ಯರ್ಥಿಗಳನ್ನು ಕಂಪನಿಗಳು ಕೆಲಸಕ್ಕೆ ನೇಮಿಸಿಕೊಳ್ಳುವ ಅವಕಾಶವೂ ಇದೆ. ಇದರಿಂದ ಕಂಪನಿಗೆ ಹೆಚ್ಚು ಲಾಭವಾಗಲಿದೆ. ಹೊಸದಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಅವರಿಗೆ ಮತ್ತೆ ತರಬೇತಿ ನೀಡುವ ಪ್ರಮೇಯವೇ ಎದುರಾಗುವುದಿಲ್ಲ. ಇದರಿಂದ ತರಬೇತಿ ವೆಚ್ಚವೂ ಉಳಿಯುತ್ತದೆ. ಅನುಭವಿ ಹಾಗೂ ಕೌಶಲಯುಕ್ತ ಉದ್ಯೋಗಿಗಳು ದೊರೆತಂತಾಗುತ್ತದೆ' ಎಂದೂ ವಿವರಿಸಿದರು.

366 ಅಭ್ಯರ್ಥಿಗಳು ಆಯ್ಕೆ: ಬಿಎಚ್‌ಇಎಲ್, ಎಚ್‌ಎಎಲ್, ಟಿವಿಎಸ್, ಟಾಟಾ ಮೋಟರ್ಸ್, ಬಾಷ್ ಸೇರಿದಂತೆ ಒಟ್ಟು 65 ಕಂಪನಿಗಳು ಶಿಶಿಕ್ಷು ಮೇಳದಲ್ಲಿ ಭಾಗವಹಿಸಿದ್ದವು. ಒಟ್ಟು 1,200 ಅಭ್ಯರ್ಥಿಗಳ ಪೈಕಿ 366 ಜನ ವಿವಿಧ ಕಂಪನಿಗಳಿಗೆ ಆಯ್ಕೆಯಾದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
Attention to the General Public is drawn to the fact that Mr. S.N. Umesh Kumar Partner M/s. Annapoorneshwari Enterprises, Indian Oil Dealer (SAP Code: 203424) License No: P/SC/KA/14/3132/P1404 ,having its office at Sarjapur, Anekal Taluk, Bengaluru-562125 is a borrower and has availed loans from Mr.Rajashekar Reddy, S/O Rama Reddy aged about 51 years HNR Layout Kaikondrahalli village, Varthur Hobli, Bengaluru East TAluk, Bengaluru – 590035 . Mr. S.N. Umesh Kumar has pledged his 49% share of Partnership in M/s. Annapoorneshwari Enterprises to Mr. Rajashekar Reddy. It is hereby cautioned to General Public that any dealings with the said person/Firm to be informed that the Legal proceedings has been initiated against Mr.Umesh Partner Annapoorneshwari Enterprises for recovery of the Loans.
4.10.2021
Rajshekar Reddy
Bengaluru

PUBLIC NOTICE
This is to inform the general public that our client proposes to purchase from Mr. Abhishek Ahuja, S/o Mr. Naraindas Bodaram Ahuja, residing at No.201/202, C Block, Esteem Retreat Apartments, Geddalahalli, Sanjay Nagar, RMV 2nd Stage, Bangalore-560 094, the residential apartment bearing No. B2-121, second floor, in the building known as "SOBHA IVORY", bearing PID No.81-14-7/11, admeasuring 2938.43 sq.ft. with three covered car parking in the basement, alongwith an undivided 1.72% share (equivalent to 1372.12 sq.ft.) being portion of the property bearing Municipal No. 7/1, (Old No. 7, even earlier No. 6/1, still earlier No. 6), St. Johns Road, BBMP Ward No. 81, Bangalore.
Anyone having any claim/ objection to the aforesaid transaction or any claim in respect of the aforesaid property, may convey the same in writing alongwith documentary proof of their claim/ claims/ objections to the undersigned WITHIN FIFTEEN DAYS from today. If no objections/claims are received within the stipulated time, our client shall proceed further with the transaction and no claims will be entertained thereafter.
ADDRESS FOR COMMUNICATION:
M. ARUN PONAPPA,
ADVOCATE
2nd Floor, Kasturi Complex, No.76, Mission Road, Bangalore - 560 027.
Telefax:080 - 22243631
Email: arunponappa@gmail.com

JOB OPPORTUNITIES

Hospital & Medical Jobs

WANTED
PHARMACISTS
to work all over Karnataka (with Diploma in Pharmacy Certificate) plz send the CV to email:
raghu_sgr2@yahoo.co.in / poojyaya2005@gmail.com/
Or only WhatsApp :
9845996744 / 9341366744

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

BUSINESS

Business Offers

Finance

NRI'S INVESTMENT AndFinance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

HEALTH SPECIAL

Special Festive DISCOUNT
FIRST TIME IN INDIA
Customised in The Ear Rechargeable Hearing Aids
- Attractive Exchange offer for Existing Hearing Aid
- Mobile Connectivity & Language Translation
- Home Visit using KuduWave Boothless Audiometer
Small yet Powerful INVISIBLE HEARING AID
www.hearingc.com
HEARING HEALTH CARE CLINIC
99456 11100
Branches Across Bengaluru & Karnataka
*T&C Apply

Business to Business

Business

INVEST IN MSME to get 12 %interest per annum. contact info@innovativesliding.com

PERSONAL

Change of Name

I,SANDHYA W/O Vijayendra , R/o No 244 2nd D cross Girinagar first phase, Bangalore-85,Have Changed my name to SUVARNA,Vide affidavit dated-18-09-2020 Before P N NAGESHA Notary Bangalore.

CHANGE OF NAME
I, VYSHALI HOLIGI Residing at Flat No. A-103, Vinyaas Virtue Apartment, 1st Main Road, Sharadambanagar, Jalahalli, Bangalore-560013, have changed my name to VYSHALI YUVARAJ JADEKAR vide affidavit dated 19/07/2013, before Notary Ashok Rao Perody, Mangalore. Henceforth I shall be VYSHALI YUVARAJ JADEKAR called only.

I, MOHD BILAL SHARIFF S/o Mohammed Rouf Shariff residing at No.5/1-7, Fat No.3A, TNT Grandeur, Benson Cross Road, Benson Town, Bangalore-560046 have changed my name from MOHAMMED BILAL SHARIFF to MOHD BILAL SHARIFF vide affidavit dated 04.10.2021 sworn before notary Uday Kumar.K, Bangalore-24.

I, GANASHREE S.H W/o Ibrahim. S residing at Alahalli village, Aralu Mallige Grama Panchayath, Kasaba Hobli, Doddaballapur Taluk, Bangalore Rural district after marriage have changed my name from GANASHREE S.H to SANIYA vide affidavit dated 15.09.2020 sworn before notary M.Radhamma, Doddaballapur- 561203.

I, NEHA NIXON W/o. UMESH JAYARAMAN R/a#402, Block-2, Jains Prakriti Apartments, Kanakapura Main Road, Jayanagar 7th Block, Bengaluru- 560070 After Marriage Have Changed My Name to NEHA NIXON UMESH vide Affidavit Dated: 24.09.2021 Before Notary Mahesha,J.J. Bangalore.

GADIGEWWA M/O 15709659H- NK- ADAVAYYA BENDIGERI, R/a Bogur, Itagi, Khanapur, Belagavi, Karnataka changed name from GADIGEWWA to GADIGEVVA S BENDIGERI notary KV Mani Bangalore.

I, RAGHAVENDRA R/a#2, Tanishkas Kenchappa Layout, Varanasi Main Road, MMA Kabab Rolls and Restaurant, Bengaluru-36 have Changed Name RAGHAVENDRA MANIKRAO MANKAL vide Affidavit 01.10.2021 Before Notary Hemalatha, Bangalore-27.

I, MUSKAN MEHRIN R/a#31, B 4th Cross, Lakkasandra Extension, Laljinagar, Bengaluru-30 have Changed Name MUSKAN MEHRIN KHAN vide Affidavit 01.10.2021 Before Notary Hemalatha, Bangalore-27.

I, SEEMA SHARMA resident of No.285, 1st Stage Kuvempu Nagar, Jalahalli East, Bangalore-560014 have changed my name to SEEMA FRANCIS vide affidavit dated 04/10/2021 sworn before notary Ambika.S, Bangalore

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಐಡಿಯಲ್ ಹೋಮ್ ಲೇಔಟ್‌ನಲ್ಲಿ ನಿವಾಸಿಗಳು ಮನೆಯ ಮುಂದಿನ ರಸ್ತೆ ಸ್ವಚ್ಛಗೊಳಿಸುತ್ತಿರುವುದು (ಎಡ ಚಿತ್ರ), ಐಡಿಯಲ್ ಹೋಮ್ ಲೇಔಟ್‌ನಲ್ಲಿ ನೀರು ನುಗ್ಗಿದ ರಭಸಕ್ಕೆ ಬಿದ್ದಿರುವ ಆಟೊರಿಕ್ಷಾ ಮತ್ತು ಬೈಸಿಕಲ್– ಪ್ರಜಾವಾಣಿ ಚಿತ್ರಗಳು

ರಾಜರಾಜೇಶ್ವರಿನಗರ, ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಹೆಚ್ಚು ಅನಾಹುತ ● ಮುಳುಗಿದ ನೂರಕ್ಕೂ ಹೆಚ್ಚು ವಾಹನಗಳು

ಮಳೆ ಅಬ್ಬರಕ್ಕೆ ನಲುಗಿದ ನಾಗರಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಅಬ್ಬರಿಸಿದ ಮಳೆಗೆ ಇಡೀ ಬೆಂಗಳೂರು ತಲ್ಲಣಗೊಂಡಿದೆ. ರಸ್ತೆಗೆ ಬಿದ್ದಿದ್ದ ಮರಕ್ಕೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಸವಾರರೊಬ್ಬರು ಮೃತಪಟ್ಟಿದ್ದಾರೆ. 18 ಜಾನುವಾರುಗಳೂ ಮಳೆಗೆ ಬಲಿಯಾಗಿವೆ. 600ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಹಾನಿಯುಂಟಾಗಿದೆ.

25ಕ್ಕೂ ಹೆಚ್ಚು ಮರಗಳು ಮತ್ತು ಮರದ ಕೊಂಬೆಗಳು ರಸ್ತೆಗೆ ಉರುಳಿವೆ. ಕಾರು, ದ್ವಿಚಕ್ರ ವಾಹನ, ಆಟೋರಿಕ್ಷಾಗಳು, ಟೆಂಪೊ ಟ್ರಾವೆಲರ್‌ಗಳು ಸೇರಿ ನೂರಕ್ಕೂ ಹೆಚ್ಚು ವಾಹನಗಳು ನೀರಿನಲ್ಲಿ ಮುಳುಗಿ ಹಾಳಾಗಿವೆ.

ಬಿಬಿಎಂಪಿಯ ರಾಜರಾಜೇಶ್ವರಿ ನಗರ ಮತ್ತು ಪಶ್ಚಿಮ ವಲಯದಲ್ಲೇ ಹೆಚ್ಚಿನ ಹಾನಿಯಾಗಿದೆ. ರಾಜರಾಜೇಶ್ವರಿನಗರದ ಐಡಿಯಲ್ ಹೋಮ್ ಬಡಾವಣೆಯಲ್ಲಿ ರಾಜಕಾಲುವೆ ಉಕ್ಕಿ ಮನೆಗಳಿಗೆ ನೀರು ನುಗ್ಗಿ ಭಾರಿ ಪ್ರಮಾಣದ ಹಾನಿಯಾಗಿದೆ. ರಸ್ತೆ ಬದಿಯಲ್ಲಿರುವ ಎರಡು ಗ್ಯಾರೇಜ್‌ಗಳಿಗೂ ನೀರು ನುಗ್ಗಿದ್ದು, ಅಲ್ಲಿದ್ದ ಕಾರುಗಳೆಲ್ಲವೂ ನೀರಿನಲ್ಲಿ ಮುಳುಗಿದ್ದವು.

ಪ್ರವಾಹದಂತೆ ನುಗ್ಗಿದ ನೀರಿನ ಜೊತೆಗೆ ಕೆಸರು ಕೂಡ ಮನೆ ಮತ್ತು ರಸ್ತೆಗಳನ್ನು ಆವರಿಸಿಕೊಂಡಿತ್ತು. ರಾತ್ರಿಯಿಡೀ ಜಾಗರಣೆ ಮಾಡಿದ ನಿವಾಸಿಗಳು ನೀರು ಮತ್ತು ಕೆಸರು ಹೊರ ಹಾಕಲು ಪಡಿಪಾಟಲು ಅನುಭವಿಸಿದರು. ಮನೆಯಲ್ಲಿದ್ದ ಎಲೆಕ್ಟ್ರಾನಿಕ್ ವಸ್ತುಗಳು ನೀರಿನಲ್ಲಿ ಮುಳುಗಿ ಹಾಳಾದವು. ಈ ಬಡಾವಣೆಯ ಕೊಟ್ಟಿಗೆಯೊಂದರಲ್ಲಿ ಕಟ್ಟಿದ್ದ 18 ಜಾನುವಾರುಗಳು ಮೃತಪಟ್ಟಿವೆ.

ನೈಸ್ ರಸ್ತೆ ಸಮೀಪದ ಪ್ರಮೋದ್ ಲೇಔಟ್‌ನಲ್ಲೂ ರಾಜಕಾಲುವೆ ನೀರು ಮನೆಗಳಿಗೆ ನುಗ್ಗಿದೆ. ರಾಜಕಾಲುವೆಗೆ ಇದ್ದ ತಡೆಗೋಡೆಯನ್ನೇ ಒಡೆದುಕೊಂಡು ನೀರು ಬಡಾವಣೆಗೆ ಪ್ರವಾಹವಾಗಿ ಆವರಿಸಿಕೊಂಡಿತ್ತು. ರಾಜಕಾಲುವೆ ಪಕ್ಕದ ಬಹುತೇಕ ಮನೆಗಳ ತಳ ಮಹಡಿಗೆ ನೀರು ನುಗ್ಗಿತ್ತು. ಆ ಸಂದರ್ಭದಲ್ಲಿ ಜೋರು ಮಳೆ ಸುರಿಯುತ್ತಿದ್ದರಿಂದ ಮನೆಯಿಂದ ಹೊರ ಬರಲು ಸಾಧ್ಯವಾಗದೆ ಮಕ್ಕಳು ಮತ್ತು ವೃದ್ಧರು ಸಮಸ್ಯೆ ಎದುರಿಸಿದರು ಎಂದು ಪ್ರಮೋದ್ ಲೇಔಟ್ ಸರೋಜ ತಿಳಿಸಿದರು.

'ಮಳೆ ಬಂದಾಗಲೆಲ್ಲಾ ಪ್ರಮೋದ್ ಲೇಔಟ್‌ನ ಕೆಲ ಮನೆಗಳಿಗೆ ನೀರು ನುಗ್ಗುವುದು ಸಾಮಾನ್ಯವಾಗಿಬಿಟ್ಟಿದೆ. ತಡೆಗೋಡೆ ಇದ್ದರೂ ನೀರು ನುಗ್ಗುವುದು ತಪ್ಪಿಲ್ಲ. ವರ್ಷದಲ್ಲಿ ನಾಲ್ಕು ಬಾರಿಯಾದರೂ ಇದು ಮರುಕಳಿಸುತ್ತಿದೆ. ನೆಮ್ಮದಿಯಿಂದ ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಅಳಲು ತೋಡಿಕೊಂಡರು.

ರಾಜರಾಜೇಶ್ವರಿನಗರ, ಶಕ್ತಿಗಣಪತಿನಗರ, ಜೆ.ಸಿ.ನಗರ, ಐಡಿಯಲ್ ಹೋಮ್ ಲೇಔಟ್, ಹೊರಮಾವು, ರಾಮಮೂರ್ತಿನಗರ, ಮಹದೇವಪುರ, ಬಾಪೂಜಿನಗರ, ಹೊಸಕೆರೆಹಳ್ಳಿ, ದಾಸರಹಳ್ಳಿ, ಸಂಪಂಗಿರಾಮನಗರ, ಡಿ ಗ್ರೂಪ್ ಲೇಔಟ್, ನಾಗರಭಾವಿ, ಬಿಡಿಎ ಲೇಔಟ್, ಸುಂಕದಕಟ್ಟೆ, ಗಾಳಿ ಅಂಜನೇಯಸ್ವಾಮಿ ದೇವಸ್ಥಾನ ವಾರ್ಡ್, ಕೋರಮಂಗಲ ಆರನೇ ಹಂತ, ಶಂಕರಮಠ, ಕಮಲನಗರ, ವೃಷಭಾವತಿ ನಗರ, ಬಸವೇಶ್ವರನಗರ, ಆರ್‌ಎಂವಿ ಎಕ್ಸ್‌ಟೆನ್ಷನ್, ಜನಪ್ರಿಯ ಲೇಔಟ್, ಕೆಂಚನಹಳ್ಳಿ, ಎಚ್‌ಎಎಲ್‌ನ ಬಸವನಗರ ಸೇರಿ ಹಲವೆಡೆ ಮಳೆ ಅವಾಂತರ ಸೃಷ್ಟಿಸಿತ್ತು.

ಎಚ್‌ಎಎಲ್ ಏರ್‌ಪೋರ್ಟ್ ವಾರ್ಡಿನ ರಮೇಶನಗರದಲ್ಲಿ ಮಳೆ ನೀರಿನ ಚರಂಡಿ ಕಟ್ಟಿಕೊಂಡು ಎಚ್‌ಎಎಲ್ ಸಂಸ್ಥೆಯ ಹಳೆಯ ಕಾಂಪೌಂಡ್ ಗೋಡೆ ಕುಸಿದು ಬಿದ್ದಿದೆ. ಗೋಡೆ ಪಕ್ಕದಲ್ಲಿ ನಿಲ್ಲಿಸಿದ್ದ 3 ವಾಹನಗಳು ಜಖಂಗೊಂಡಿವೆ.

ಮನೆಗಳಲ್ಲಿ ಕೊಳಚೆ ನೀರು ತೆರವಿಗೆ ಜಾಗರಣೆ ಮಾಡಿದ್ದವರು ಸೋಮವಾರವೂ ಮನೆ ಮತ್ತು ಮನೆ ಮುಂದಿನ ರಸ್ತೆ ಸ್ವಚ್ಛಗೊಳಿಸುವ ಕೆಲಸದಲ್ಲಿ ನಿರತರಾಗಿದ್ದರು. ನೀರು ನುಗ್ಗುವುದನ್ನು ತಪ್ಪಿಸದ ಬಿಬಿಎಂಪಿ ಅಧಿಕಾರಿಗಳಿಗೆ ಹಿಡಿಶಾಪ ಹಾಕಿದರು.

ರಾಜರಾಜೇಶ್ವರಿನಗರ ಐಡಿಯಲ್ ಹೋಮ್ ಲೇಔಟ್‌ನಲ್ಲಿ ಮನೆಯೊಂದರಲ್ಲಿ ತುಂಬಿರುವ ನೀರು –ಪ್ರಜಾವಾಣಿ ಚಿತ್ರ

ಅಂಗಡಿ ಮಳಿಗೆಗೆ ನೀರು ನುಗ್ಗಿ ಅಪಾರ ಹಾನಿ

ಜೆ.ಸಿ. ನಗರ, ಸಂಪಂಗಿರಾಮನಗರ, ನಾಗರಭಾವಿಯ ಡಿ. ಗ್ರೂಪ್ ಲೇಔಟ್‌ನಲ್ಲಿ ಅಂಗಡಿ ಮಳಿಗೆಗಳಿಗೂ ನೀರು ನುಗ್ಗಿದೆ. ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ನೀರಿನಲ್ಲಿ ಮುಳುಗಿದ್ದವು. ಜೆ.ಸಿ.ನಗರದ ತೌಸಿಯಾ ಎಂಬುವವರಿಗೆ ಸೇರಿದ ಎಲೆಕ್ಟ್ರಾನಿಕ್ಸ್ ವಸ್ತುಗಳ ಮಳಿಗೆಗೆ ನೀರು ನುಗ್ಗಿ ವಸ್ತುಗಳೆಲ್ಲ ಹಾಳಾಗಿವೆ. ಡಿ. ಗ್ರೂಪ್ ಲೇಔಟ್‌ನ ಎಲೆಕ್ಟ್ರಾನಿಕ್ಸ್ ಉಪಕರಣಗಳ ಮಾರಾಟ ಮಳಿಗೆಗೆ ನೀರು ನುಗ್ಗಿದ್ದು, ವಾಷಿಂಗ್ ಮಷಿನ್‌ಗಳು, ಮೈಕ್ರೋ ಓವನ್ ಮತ್ತು ಟಿವಿಗಳು ನೀರಿನಲ್ಲಿ ಮುಳುಗಿ ಹಾಳಾಗಿವೆ. ಪಕ್ಕದಲ್ಲೇ ಇದ್ದ ಬ್ಯಾಗ್ ಮತ್ತು ಹೆಲ್ಮೆಟ್ ಅಂಗಡಿ, ಗಂಧಿಗೆ ಅಂಗಡಿಗೂ ನೀರು ನುಗ್ಗಿ ಹಾಳಾಗಿವೆ. 'ಪಿತೃಪಕ್ಷ ಇದ್ದುದರಿಂದ ₹ 1 ಲಕ್ಷ ಮೌಲ್ಯದ ವಸ್ತುಗಳನ್ನು ಅಂಗಡಿಗೆ ತಂದಿದ್ದೆ. ಇದೀಗ ರಾತ್ರೋರಾತ್ರಿ ಎಲ್ಲ ವಸ್ತುಗಳು ನಾಶವಾಗಿವೆ' ಎಂದು ಅಂಗಡಿ ಮಾಲೀಕರು ಬೇಸರ ವ್ಯಕ್ತಪಡಿಸಿದರು.

ವಾಲಿದ ಕಟ್ಟಡ; ಸ್ಥಳಾಂತರಕ್ಕೆ ಬಿಬಿಎಂಪಿ ನೋಟಿಸ್

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ಶ್ರೀಗಂಧದ ಕಾವಲ್‌ನ ಡಿ ಗ್ರೂಪ್ ಬಡಾವಣೆಯಲ್ಲಿ ರಾಜಕಾಲುವೆ ಪಕ್ಕದಲ್ಲಿ ಮೂರು ಅಂತಸ್ತಿನ ಕಟ್ಟಡವೊಂದು ವಾಲಿದ್ದು, ಕಟ್ಟಡದಲ್ಲಿ ವಾಸ ಇರುವವರ ಸ್ಥಳಾಂತರಕ್ಕೆ ಬಿಬಿಎಂಪಿ ನೋಟಿಸ್ ನೀಡಿದೆ.

ತಳ ಅಂತಸ್ತಿನಿಂದಲೇ ಬಿರುಕು ಬಿಟ್ಟಿದ್ದು, ಅಷ್ಟೇನೂ ಹಳೆಯದಲ್ಲದ ಕಟ್ಟಡ ವಾಲಿರುವುದು ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ. ರಾಜಕಾಲುವೆಯ ಮೀಸಲು ಪ್ರದೇಶದಲ್ಲಿ ಕಟ್ಟಡ ನಿರ್ಮಾಣವಾಗಿದೆ. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆಯೂ ನೋಟಿಸ್‌ನಲ್ಲಿ ಬಿಬಿಎಂಪಿ ತಿಳಿಸಿದೆ.

ತಜ್ಞರನ್ನು ನೇಮಿಸಿಕೊಂಡು ಕಟ್ಟಡದ ಸುರಕ್ಷತೆ ಮತ್ತು ಸದೃಢತೆ ಬಗ್ಗೆ ವರದಿ ಸಲ್ಲಿಸುವಂತೆ ವಲಯದ ಜಂಟಿ ಆಯುಕ್ತರು ಕಾರ್ಯಪಾಲಕ ಎಂಜಿನಿಯರ್‌ಗೆ ಸೂಚನೆ ನೀಡಿದ್ದಾರೆ.

'ಸಂತ್ರಸ್ತರಿಗೆ ₹ 10 ಸಾವಿರ ತನಕ ಪರಿಹಾರ'

'ಮಳೆ ನೀರು ಮನೆಗೆ ನುಗ್ಗಿ ಧವಸಧಾನ್ಯಗಳು, ಪರಿಕರಗಳು ಹಾನಿಯಾದರೆ ತಲಾ ₹ 10 ಸಾವಿರ ಪರಿಹಾರ ನೀಡಲು ಅವಕಾಶವಿದೆ. ಮಂಗಳವಾರದೊಳಗೆ ಸಂತ್ರಸ್ತರ ಪಟ್ಟಿ ತಯಾರಿಸುವಂತೆ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದ್ದಾರೆ. ಅದರಂತೆ ಸಂತ್ರಸ್ತರ ಪಟ್ಟಿ ತಯಾರಿಸುತ್ತಿದ್ದೇವೆ' ಎಂದು ಪಶ್ಚಿಮ ವಲಯದ ಜಂಟಿ ಆಯುಕ್ತ ಶಿವಸ್ವಾಮಿ ತಿಳಿಸಿದರು.

ಪಶ್ಚಿಮ ವಲಯದಲ್ಲಿ ಮನೆಗಳಿಗೆ ಮಳೆ ನೀರು ನುಗ್ಗಿದ ಪ್ರದೇಶಗಳಿಗೆ ಅವರು ಸೋಮವಾರ ಭೇಟಿ ನೀಡಿದರು.

'ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ 350ಕ್ಕೂ ಅಧಿಕ ಮನೆಗಳಿಗೆ ಮತ್ತು ಗೋವಿಂದರಾಜನಗರ ಕ್ಷೇತ್ರದಲ್ಲಿ 80ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ' ಎಂದು ಅವರು ತಿಳಿಸಿದರು.

ಲಗ್ಗೆರೆಯಿಂದ ಕೆಂಗೇರಿ ಕಡೆಗೆ ಹರಿಯುವ ಮುಖ್ಯ ರಾಜಕಾಲುವೆಯಲ್ಲಿ ಸರಿಯಾಗಿ ಹೂಳೆತ್ತಿಲ್ಲ. ಮಳೆಯ ಪ್ರಮಾಣವೂ ಅಧಿಕವಾಗಿತ್ತು. ಹಾಗಾಗಿ ಸಮಸ್ಯೆ ಎದುರಾಗಿದೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ರಾಜರಾಜೇಶ್ವರಿನಗರ ವಲಯದ ದೊಡ್ಡಬಿದರಕಲ್ಲು, ರಾಜರಾಜೇಶ್ವರಿನಗರ, ಕೊಟ್ಟಿಗೆಪಾಳ್ಯ, ಲಗ್ಗೆರೆ ಸುತ್ತಮುತ್ತ 200ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ ಎಂದು ರಾಜರಾಜೇಶ್ವರಿ ನಗರದ ಜಂಟಿ ಆಯುಕ್ತ ನಾಗರಾಜ್ ತಿಳಿಸಿದರು.

ಪ್ರದೇಶ	ಮಳೆಯ ಪ್ರಮಾಣ (ಮಿಲಿ ಮೀಟರ್)
ಜ್ಞಾನಭಾರತಿ	98
ನಾಗರಬಾವಿ	91
ಹಂಪಿನಗರ	90
ನಂದಿನಿ ಲೇಔಟ್	78
ಹೆಗ್ಗನಹಳ್ಳಿ	67.5
ಮಾರುತಿ ಮಂದಿರ	64.5
ವಿ.ವಿ ಪುರ	58.5
ರಾಜರಾಜೇಶ್ವರಿನಗರ	53.5
ದಯಾನಂದನಗರ	48.5

ಯಾವ ವಲಯದಲ್ಲಿ ಎಷ್ಟು ಹಾನಿ

ವಲಯ	ಹಾನಿ
ಪೂರ್ವ	7 ಮನೆಗಳು
ಪಶ್ಚಿಮ	10 ಮನೆಗಳು
ದಕ್ಷಿಣ	2 ಮರಗಳು, 3 ಮನೆಗಳು
ರಾಜರಾಜೇಶ್ವರಿನಗರ	15 ಮನೆಗಳು
ದಾಸರಹಳ್ಳಿ	5 ಮನೆಗಳು
ಮಹದೇವಪುರ	4 ಮನೆಗಳು, 10 ಅಡಿಎತ್ತರದ ಕಾಂಪೌಂಡ್ ಬಿದ್ದಿದೆ

ಮಳೆ ಹಾನಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದೇನೆ. ಮನೆಯಲ್ಲಿನ ನೀರು ಹೊರ ಹಾಕುವ ಕೆಲಸವನ್ನು ತ್ವರಿತವಾಗಿ ನಿರ್ವಹಿಸಲು ಸೂಚನೆ ನೀಡಿದ್ದೇನೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

₹20 ಸಾವಿರ ಕೋಟಿ ಎಲ್ಲಿ ಹೋಯಿತು: ಎಚ್‌ಡಿಕೆ ಪ್ರಶ್ನೆ

ರಾಮನಗರ: ಬೆಂಗಳೂರಿನ ರಸ್ತೆಗಳಲ್ಲಿ ಗುಂಡಿ ಮುಚ್ಚಲು ₹20 ಸಾವಿರ ಕೋಟಿ ಹಣ ಖರ್ಚು ಮಾಡಿದ್ದೇವೆ ಎಂದು ಸದನದಲ್ಲಿ ಮುಖ್ಯಮಂತ್ರಿ ಹೇಳಿದ್ದರು. ಆ ಹಣ ಎಲ್ಲಿ ಹೋಯಿತು? ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಬಿಡದಿಯಲ್ಲಿ ಸೋಮವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು. ಒಂದೇ ಮಳೆ ನಗರದಲ್ಲಿ ದೊಡ್ಡ ಅನಾಹುತ ಉಂಟು ಮಾಡಿದೆ. ರಸ್ತೆಗಳ ಮೇಲೆ ನೀರು ನದಿಯಂತೆ ಹರಿದಿದೆ. ನಿರ್ವಹಣೆ ಕಳಪೆಯಾಗಿದೆ. ಹಾಗಾದರೆ ರಸ್ತೆಗಳಿಗೆ ತೆಗೆದಿಟ್ಟ ಹಣ ಎಲ್ಲಿ ಹೋಯಿತು? ಅಷ್ಟು ಹಣವನ್ನು ಯಾವುದಕ್ಕೆ ಬಳಕೆ ಮಾಡಿಕೊಂಡರು ಎಂದು ಕೇಳಿದರು.

ಭಾನುವಾರವಷ್ಟೇ ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ನೂರಾರು ಕೋಟಿ ವೆಚ್ಚದ ಯೋಜನೆಗಳಿಗೆ ಮುಖ್ಯಮಂತ್ರಿ, ಸಚಿವರು ಚಾಲನೆ ನೀಡಿದ್ದರು. ಆದರೆ, ಸಂಜೆ ಮಳೆ ಬಂದು ಆ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯನ್ನು ಬೆತ್ತಲು ಮಾಡಿತು. ಮನೆಗಳಿಗೆ ನೀರು ನುಗ್ಗಿ ಜನ ಇಡೀ ರಾತ್ರಿ ಜಾಗರಣೆ ಮಾಡಿದರು. ಮಳೆ ನೀರಿನಲ್ಲಿ ಹಸು, ಕುರಿಗಳು ಕೊಚ್ಚಿಕೊಂಡು ಹೋಗಿವೆ. ಇವರು ಯಾವ ರೀತಿಯ ಅಭಿವೃದ್ಧಿಯನ್ನು ಮಾಡಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ತನಿಖೆಗೆ ಒತ್ತಾಯ : ರಾಜರಾಜೇಶ್ವರಿ ನಗರ ಕ್ಷೇತ್ರ ಪ್ರಗತಿಗೆ ಹಲವಾರು ವರ್ಷಗಳಿಂದ ಕೋಟ್ಯಂತರ ರೂಪಾಯಿ ಹಣ ಹರಿದು ಬಂದಿದೆ. ಈ ಹಣ ಎಲ್ಲಿ ಹೋಯಿತು? ನಿರಂತರವಾಗಿ ಈ ಕ್ಷೇತ್ರಕ್ಕೆ ಹರಿದ ಹಣದ ಹೊಳೆ ಎತ್ತ ಹರಿಯಿತು? ಈ ಹಣವೂ ಸೇರಿ ಗುಂಡಿಗಳಿಗೆ ಖರ್ಚಾಗಿದೆ ಎಂದು ಹೇಳಿದ್ದ ₹20 ಸಾವಿರ ಕೋಟಿ ಹಣ ಏನಾಯಿತು ಎಂಬ ಬಗ್ಗೆ ತನಿಖೆ ಆಗಲಿ ಎಂದು ಒತ್ತಾಯಿಸಿದರು.

ಸಮ್ಮಿಶ್ರ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿ ಆಗಿದ್ದಾಗ ಬೆಂಗಳೂರು ಉಸ್ತುವಾರಿ ಕಾಂಗ್ರೆಸ್ ಕೈಯಲ್ಲಿ ಇತ್ತು. ನಗರದ ಬಗ್ಗೆ ನಾನು ಒಂದು ಸಭೆ ಮಾಡಬೇಕಾದರೂ ಕಾಂಗ್ರೆಸ್ ನಾಯಕರ ಅಪ್ಪಣೆ ಬೇಕಾಗಿತ್ತು. ಆದರೆ ಅವರು ಒಪ್ಪುತ್ತಿರಲಿಲ್ಲ. ನಾನು ಮುಖ್ಯಮಂತ್ರಿ ಆಗಿದ್ದಷ್ಟು ದಿನ ಬೆಂಗಳೂರು ಅಭಿವೃದ್ಧಿ ಪರಿಶೀಲನಾ ಸಭೆ ಮಾಡುವ ಹಾಗಿರಲಿಲ್ಲ. ಇದು ಸತ್ಯ ಸಂಗತಿ ಎಂದು ವಿವರಿಸಿದರು.

ಉತ್ತರ ಪ್ರದೇಶ ಘಟನೆ ಅಕ್ಷಮ್ಯ

ಉತ್ತರ ಪ್ರದೇಶದಲ್ಲಿ ರೈತರ ಮೇಲೆ ಕೇಂದ್ರದ ಮಂತ್ರಿಯ ಪುತ್ರ ವಾಹನ ಹತ್ತಿಸಿದ್ದಾರೆ. ಇದು ಹೇಯ ಮತ್ತು ಅಕ್ಷಮ್ಯ. ನಂತರ ನಡೆದ ಪ್ರತಿಭಟನೆಯಲ್ಲಿ ಇನ್ನಷ್ಟು ರೈತರು ಸಾವನ್ನಪ್ಪಿದ್ದಾರೆ. ಇದೇನಾ ನವ ಭಾರತ? ಹಿಂದುತ್ವದ ಹೆಸರಿನಲ್ಲಿ ದೇಶವನ್ನು ಒಡೆಯಲು ಹೊರಟಿರುವ ಬಿಜೆಪಿ ನವಭಾರತ ಕಟ್ಟುತ್ತಿರುವುದು ಹೀಗೆ... ಎಂದು ಸರ್ಕಾರದ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ರಸ್ತೆಯಲ್ಲಿ ಬಿದ್ದಿದ್ದ ಮರಕ್ಕೆ ವಾಹನ ಗುದ್ದಿ ಹೋಟೆಲ್ ಉದ್ಯಮಿ ಸಾವು

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ರಸ್ತೆಯಲ್ಲಿ ಉರುಳಿಬಿದ್ದಿದ್ದ ತೆಂಗಿನ ಮರಕ್ಕೆ ದ್ವಿಚಕ್ರ ವಾಹನವೊಂದು ಗುದ್ದಿದ್ದು, ಸವಾರ ಬಿ.ಎಸ್. ನಾಗರಾಜ್ ಧನ್ಯ (65) ಎಂಬುವರು ಮೃತಪಟ್ಟಿದ್ದಾರೆ

'ಟಾಟಾ ಸಿಲ್ಕ್ ಫಾರ್ಮ್ ನಿವಾಸಿ ನಾಗರಾಜ್, ಜಯನಗರದಲ್ಲಿ 'ವಾದಿರಾಜ್ ಕಾಫಿ ಬಾರ್' ಹೋಟೆಲ್ ನಡೆಸುತ್ತಿದ್ದರು. ಸೋಮವಾರ ನಸುಕಿನ 4.30ರ ಸುಮಾರಿಗೆ ಮನೆಯಿಂದ ಹೋಟೆಲ್‌ಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನಾಗರಾಜ್ ಅವರು ಹೆಲ್ಮೆಟ್ ಧರಿಸಿರಲಿಲ್ಲ ಎಂಬುದು ಗೊತ್ತಾಗಿದೆ.'

'ಭಾನುವಾರ ರಾತ್ರಿ ಅಬ್ಬರದ ಮಳೆ ಸುರಿದಿದ್ದರಿಂದ ಹಲವೆಡೆ ಮರಗಳು ಉರುಳಿಬಿದ್ದಿದ್ದವು. ಸೌತ್ ಎಂಡ್ ಸರ್ಕಲ್ ಬಳಿ ದಕ್ಷಿಣ ವಿಭಾಗದ ಡಿಸಿಪಿ ಕಚೇರಿ ಎದುರಿನ ರಸ್ತೆಯಲ್ಲಿ ನಸುಕಿನಲ್ಲಿ ತೆಂಗಿನ ಮರ ನೆಲಕ್ಕುರುಳಿತ್ತು. ರಸ್ತೆಯ ಒಂದು ಬದಿಯಿಂದ ಇನ್ನೊಂದು ಬದಿಗೆ ಅಡ್ಡವಾಗಿ ತೆಂಗಿನ ಮರ ಬಿದ್ದಿತ್ತು' ಎಂದೂ ಪೊಲೀಸ್ ಅಧಿಕಾರಿ ತಿಳಿಸಿದರು.



ನಾಗರಾಜ್

'ವೇಗವಾಗಿ ಹೊರಟಿದ್ದ ನಾಗರಾಜ್, ರಸ್ತೆಗೆ ಅಡ್ಡವಾಗಿ ಬಿದ್ದಿದ್ದ ಮರವನ್ನು ಗಮನಿಸಿರಲಿಲ್ಲ. ದ್ವಿಚಕ್ರ ವಾಹನವನ್ನು ಮರಕ್ಕೆ ಗುದ್ದಿಸಿದ್ದರು. ವಾಹನದಿಂದ ಬಿದ್ದ ನಾಗರಾಜ್ ತಲೆಗೆ ತೀವ್ರ ಪೆಟ್ಟಾಗಿ, ರಕ್ತ ಸೋರುತ್ತಿತ್ತು. ಕೆಲವೇ ನಿಮಿಷಗಳಲ್ಲಿ ಪ್ರಜ್ಞೆಯೂ ಹೋಗಿತ್ತು. ಸ್ಥಳೀಯರು ಹಾಗೂ ಸಂಬಂಧಿಕರು ಸ್ಥಳಕ್ಕೆ ಬಂದು, ನಾಗರಾಜ್ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದರು.

ಸ್ವಯಂ ಅಪಘಾತ: 'ಬಸವನಗುಡಿ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ಅಪಘಾತ ಸಂಬಂಧ ಕುಟುಂಬದರು ದೂರು ನೀಡಿದ್ದಾರೆ. ಸ್ವಯಂ ಅಪಘಾತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ' ಎಂದು ಬಸವನಗುಡಿ ಪೊಲೀಸರು ಹೇಳಿದರು. ನಾಗರಾಜ್ ಅವರು 'ಕೃಷ್ಣ ವಾದಿರಾಜ್ ಟ್ರಸ್ಟ್'ನ ಟ್ರಸ್ಟಿ ಸಹ ಆಗಿದ್ದರು.

'ಕಾರ್ಮಿಕ ಅದಾಲತ್' ಪರಿಣಾಮ

1.54 ಲಕ್ಷ ಕಾರ್ಮಿಕರಿಗೆ ಹಣ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ನಡೆದ 'ಕಾರ್ಮಿಕ ಅದಾಲತ್'ನಲ್ಲಿ ದಾಖಲೆಯ ಸಂಖ್ಯೆಯಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿರುವ ಕಾರ್ಮಿಕ ಇಲಾಖೆ, 1.54 ಲಕ್ಷ ಕಾರ್ಮಿಕರಿಗೆ ₹ 89.05 ಕೋಟಿ ಪಾವತಿಸಿದೆ.

ಕನಿಷ್ಠ ವೇತನ, ಪಿಂಚಣಿ, ಮಾಲೀಕ-ಕಾರ್ಮಿಕ ನಡುವಿನ ವಿವಾದ, ಸೌಲಭ್ಯಗಳಿಂದ ವಂಚನೆ ಸೇರಿದಂತೆ 3.02 ಲಕ್ಷ ಪ್ರಕರಣಗಳ ಪೈಕಿ, 2.83 ಲಕ್ಷ ಪ್ರಕರಣಗಳು ಅದಾಲತ್‌ನಲ್ಲಿ ಇತ್ಯರ್ಥಗೊಂಡಿವೆ. ಆ ಮೂಲಕ, ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ನೂರಾರು ಪ್ರಕರಣಗಳು ಮುಕ್ತಿ ಕಂಡಿವೆ.

ಜಿಲ್ಲೆ, ತಾಲ್ಲೂಕು ಮಟ್ಟವಷ್ಟೇ ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಆಗಸ್ಟ್ 16ರಿಂದ ಸೆ. 15ರವರೆಗೆ ಅದಾಲತ್ ನಡೆದಿತ್ತು.

ಅರೆ ನ್ಯಾಯಿಕ ಪ್ರಕರಣ: ಕನಿಷ್ಠ ವೇತನ ಕಾಯ್ದೆ, ಉಪಧನ ಪಾವತಿ ಕಾಯ್ದೆ ಸೇರಿದಂತೆ ವಿವಿಧ ಕಾರ್ಮಿಕ ಕಾಯ್ದೆಯಡಿ (ಅರೆ ನ್ಯಾಯಿಕ ಪ್ರಕರಣ) 1,213 ದೂರುಗಳು ಸಲ್ಲಿಕೆಯಾಗಿದ್ದವು. ಈ ಎಲ್ಲ ಪ್ರಕರಣಗಳಲ್ಲಿ ಮಾಲೀಕ ಮತ್ತು ಕಾರ್ಮಿಕರ ಮಧ್ಯೆ ಸಂಧಾನ ನಡೆಸಿ 19,253 ಕಾರ್ಮಿಕರಿಗೆ ಒಟ್ಟು 4.09 ಕೋಟಿ ನೀಡಲಾಗಿದೆ.

ಇತರ ಪ್ರಕರಣ: ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡುವ ಸೌಲಭ್ಯಗಳು ಸಿಕ್ಕಿಲ್ಲವೆಂದು 3.01 ಲಕ್ಷ ಅರ್ಜಿಗಳು ಸಲ್ಲಿಕೆ ಆಗಿದ್ದವು. ಈ ಪೈಕಿ, 2.82 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿದ್ದರಿಂದ 1.35 ಲಕ್ಷ ಕಾರ್ಮಿಕರಿಗೆ ಅನುಕೂಲ ಆಗಿದೆ. ಈ ಪ್ರಕರಣಗಳಲ್ಲಿ ₹ 84.96 ಕೋಟಿಯನ್ನು ಕಾರ್ಮಿಕರಿಗೆ ನೀಡಲಾಗಿದೆ.

'ಅದಾಲತ್‌ಗೂ ಮೊದಲು ಇಲಾಖೆಯ ಅಡಿಯಲ್ಲಿರುವ ಎಲ್ಲ ಕಚೇರಿಗಳಲ್ಲಿ 1.76 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಬಾಕಿ ಇದ್ದವು. ಅದಾಲತ್‌ಗೆ ಮತ್ತೆ 1.26 ಲಕ್ಷ ಅರ್ಜಿಗಳು ಬಂದಿತ್ತು. ಈ ಎಲ್ಲ ಅರ್ಜಿಗಳನ್ನು ವಿಲೇವಾರಿಗೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಅವರು ಆಸಕ್ತಿ ವಹಿಸಿ ನಿರ್ದೇಶನ ನೀಡಿದ್ದರು' ಎಂದು ಇಲಾಖೆಯ ಆಯುಕ್ತ ಅಕ್ರಂ ಪಾಷಾ ತಿಳಿಸಿದರು.

ಸಚಿವರ ನಿರ್ದೇಶನ, ಅಧಿಕಾರಿಗಳು, ಸಿಬ್ಬಂದಿ ಯುದ್ಧೋಪಾದಿಯಲ್ಲಿ ಕೆಲಸ ಮಾಡಿದ್ದರಿಂದ ನಿರೀಕ್ಷೆಗೂ ಮೀರಿ ದೂರುಗಳನ್ನು ಇತ್ಯರ್ಥಪಡಿಸಲು ಸಾಧ್ಯವಾಗಿದೆ

ಅಕ್ರಂ ಪಾಷಾ, ಆಯುಕ್ತ, ಕಾರ್ಮಿಕ ಇಲಾಖೆ

ಅಂಕಿ–ಅಂಶ

3,02,213 ವಿವಿಧ ಯೋಜನೆಯಡಿ ಬಾಕಿ ಇದ್ದ ಅರ್ಜಿ

2,83,294 ವಿಲೇವಾರಿ ಮಾಡಿದ ಅರ್ಜಿ

1,53,996 ಲಾಭ ಪಡೆದ ಕಾರ್ಮಿಕರು

₹89,04,97,718 ಕಾರ್ಮಿಕರಿಗೆ ಪಾವತಿಸಿದ ಮೊತ್ತ

'ಮೆಟ್ರೊ ಪೂರ್ಣ ಗಣಕೀಕರಣವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಯಾಣಿಕರ ಅಗತ್ಯಗಳನ್ನು ತ್ವರಿತಗತಿಯಲ್ಲಿ ಪೂರೈಸಲು ಹಾಗೂ ಅತ್ಯುತ್ತಮ ರೀತಿಯ ಮೆಟ್ರೊ ರೈಲು ವ್ಯವಸ್ಥೆ ಲಭ್ಯವಾಗಬೇಕಾದರೆ ಎಲ್ಲ ಹಂತಗಳಲ್ಲೂ ಗಣಕೀಕರಣವಾಗಬೇಕು' ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎನ್‌. ಆರ್‌. ಶೆಟ್ಟಿ ಹೇಳಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ ಮತ್ತು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಹಾಗೂ ತರಬೇತಿ ಮತ್ತು ಕಲಿಕಾ ಅಕಾಡೆಮಿ (ಅಟಲ್) ಪ್ರಾಯೋಜಕತ್ವದಲ್ಲಿ ಆಯೋಜಿಸಿದ್ದ 'ಭಾರತದ ಮಹಾನಗರಗಳಿಗೆ ಚುರುಕಾದ ಮೆಟ್ರೊ ರೈಲು ವ್ಯವಸ್ಥೆ' ಕುರಿತಾದ ಪ್ರಾಧ್ಯಾಪಕರ ಕೌಶಲ ಅಭಿವೃದ್ಧಿ ಕುರಿತ ಐದು-ದಿನಗಳ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ಸಂಪೂರ್ಣ ಗಣಕೀಕರಣ ವ್ಯವಸ್ಥೆಯಿಂದ ಮಹಾ ನಗರಗಳಲ್ಲಿನ ಜನರಿಗೆ ಅತ್ಯುತ್ತಮ ಸೇವೆ ಹಾಗೂ ಸುರಕ್ಷತೆಯ ಪ್ರಯಾಣ ಸೌಲಭ್ಯ ಕಲ್ಪಿಸಲು ಸಾಧ್ಯವಾಗುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

ಸಿಂಗಪುರದ ಔರೆಕಾನ್ ಕನ್ಸಲ್ಟಂಟ್ಸ್‌ನ ಮುಖ್ಯ ಸ್ಟ್ರಕ್ಚರಲ್ ಎಂಜಿನಿಯರ್ ಡಾ. ಸುನಿಲ್ ಮಾತನಾಡಿ, 'ಗಣಕೀಕೃತ ಸಂಚಾರ ವ್ಯವಸ್ಥೆಯಿಂದ ಪ್ರಯಾಣಿಕರ ಅತ್ಯಮೂಲ್ಯ ಸಮಯ ವ್ಯರ್ಥವಾಗುವುದನ್ನು ನಿಯಂತ್ರಿಸಬಹುದು' ಎಂದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಚ್‌.ಸಿ. ನಾಗರಾಜ್ ಅವರು, 'ಅತ್ಯುತ್ತಮ ಕೇಂದ್ರೀಕೃತ ಸಾರಿಗೆ ನಿಯಂತ್ರಣ ವ್ಯವಸ್ಥೆಯಿಂದ ಅಪರಾಧಗಳ ಮೇಲೂ ಹದ್ದಿನಕಣ್ಣು ಇರಿಸಲು ಸಾಧ್ಯವಾಗುತ್ತದೆ' ಎಂದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಡಾ. ಡಿ.ಆರ್. ರವಿ, ರಾಜ್ಯ ಸರ್ಕಾರದ ಸಂಚಾರ ಹಾಗೂ ಸಾರಿಗೆ ಸಲಹೆಗಾರ ಪ್ರೊ. ಎಂ.ಎನ್. ಶ್ರೀಹರಿ, ರೈಲು ಮತ್ತು ಮೆಟ್ರೊ ನಿರ್ವಹಣೆ ಸಲಹೆಗಾರ ಹರೀಶ್ ಡಿಂಗ್ರಾ, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥೆ ಡಾ. ಭಾರತಿ ಗಣೇಶ್ ಇದ್ದರು.

ದೇಶದಾದ್ಯಂತ ಮಹಾನಗರಗಳ ಎಂಜಿನಿಯರಿಂಗ್ ಕಾಲೇಜುಗಳ ಪ್ರಾಧ್ಯಾಪಕರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.59 ಕೋಟಿ ▲	3.38 ಕೋಟಿ
ಸಕ್ರಿಯ ಪ್ರಕರಣ	1.82 ಕೋಟಿ ▼	2.46 ಲಕ್ಷ ▼
ಗುಣಮುಖ	21.28 ಕೋಟಿ ▲	3.31 ಕೋಟಿ
ಸಾವು	48.19 ಲಕ್ಷ ▲	4.49 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.05 ಲಕ್ಷ ▼	16,692 ▼
ಗುಣಮುಖ	3.58 ಲಕ್ಷ ▼	28,721 ▲
ಸಾವು	4,705 ▼	251 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಟರ್ಕಿ
26,933 ▼	30,439 ▲	27,351 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
98.50 ▼	13.45 ▼	6.50 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.39 ಲಕ್ಷ
ತಮಿಳುನಾಡು	35,666 ▲
ಕೇರಳ	25,526 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	65.62 ▲
ಕೇರಳ	47.29 ▲
ತಮಿಳುನಾಡು	26.69 ▲

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಮರಣ ಪ್ರಮಾಣ ದರ ಶೇ 3.27ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ಮತ್ತೆ ಹೆಚ್ಚಿದೆ. ಒಂದು ದಿನದಲ್ಲಿ 13 ಮಂದಿ ಅಸುನೀಗಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 37,832ಕ್ಕೆ ತಲುಪಿದ್ದು, ಮರಣ ಪ್ರಮಾಣ ದರ ಶೇ 3.27ಕ್ಕೆ ಏರಿಕೆಯಾಗಿದೆ.

ಹೊಸದಾಗಿ ಸೋಂಕಿಗೊಳಗಾದವರ ಸಂಖ್ಯೆ ಗಣನೀಯ ಇಳಿಕೆ ಕಂಡಿದೆ. ಹಿಂದಿನ 24 ಗಂಟೆಗಳಲ್ಲಿ 397 ಜನರಲ್ಲಿ ಕೋವಿಡ್ ದೃಢಪಟ್ಟಿದೆ. ಹೀಗಾಗಿ ಈವರೆಗಿನ ಸೋಂಕಿತರ ಸಂಖ್ಯೆ 29.78 ಲಕ್ಷಕ್ಕೆ ಹೆಚ್ಚಿದೆ. ಕೋವಿಡ್ ದೃಢ ಪ್ರಮಾಣವು ಶೇ 0.50ರಷ್ಟಿದೆ.

ಕೋವಿಡ್ ಪೀಡಿತರ ಪೈಕಿ 693 ಮಂದಿ ಗುಣಮುಖರಾಗಿದ್ದಾರೆ. ರಾಜ್ಯದಲ್ಲಿ ಈವರೆಗೆ 29.28 ಮಂದಿಗೆ ಕಾಯಿಲೆ ವಾಸಿಯಾದಂತಾಗಿದೆ. ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿಕೆ ಕಂಡಿವೆ. ಸದ್ಯ 11,992 ಜನ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ 166 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಕೋವಿಡ್‌ನಿಂದಾಗಿ ಬೆಂಗಳೂರಿನಲ್ಲಿ 5 ಮಂದಿ ಅಸುನೀಗಿದ್ದಾರೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಗಣನೀಯವಾಗಿ ಇಳಿದಿದೆ. ಸೋಮವಾರ 78,958 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,47,258 ▲ ಒಟ್ಟು ಸೋಂಕಿತರು (12,47,092 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,640 ▲	12,23,448 ▲	16,169 ▲

ದಿನದ ಏರಿಕೆ

ಹೊಸ ಪ್ರಕರಣ	166 ▼
ಗುಣಮುಖ	121 ▼
ಸಾವು	05 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳ ಹಂಚಿಕೆ

ಲೋಕಾಯುಕ್ತ ತನಿಖೆಗೆ ಆದೇಶ

ಬೆಂಗಳೂರು: 'ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಕೆಲ ಮಳಿಗೆಗಳನ್ನು ಟೆಂಡರ್ ಪ್ರಕ್ರಿಯೆ ನಡೆಸದೆ ಹಂಚಿಕೆ ಮಾಡಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸಿ ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಶ್ರೀನಗರದ ರಾಘವೇಂದ್ರ ಬ್ಲಾಕ್ ನಿವಾಸಿ ಎಂ. ಶರಣು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'2017ರ ಡಿಸೆಂಬರ್ 6ರ ನ್ಯಾಯಾಲಯದ ಆದೇಶದ ಅನುಸಾರ ದೂರಿನ ಆರೋಪಗಳ ಬಗ್ಗೆ ತನಿಖೆ ನಡೆಸಿ 3 ತಿಂಗಳಲ್ಲಿ ವರದಿ ಸಲ್ಲಿಸಿ' ಎಂದು ನ್ಯಾಯಪೀಠ ಲೋಕಾಯುಕ್ತಕ್ಕೆ ನಿರ್ದೇಶಿಸಿದೆ.

'ಲೋಕಾಯುಕ್ತ ತನಿಖೆಗೆ ಪೂರ್ಣ ಸಹಕಾರ ನೀಡಬೇಕು ಮತ್ತು ತನಿಖೆಗೆ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಲೋಕಾಯುಕ್ತಕ್ಕೆ ಒದಗಿಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ತಾಕೀತು ಮಾಡಿರುವ ನ್ಯಾಯಪೀಠ, ವಿಚಾರಣೆಯನ್ನು 2022ರ ಜನವರಿಗೆ ಮುಂದೂಡಿದೆ.

ವಿಚಾರಣೆ ವೇಳೆ ಬಿಬಿಎಂಪಿಯ ನಿರ್ಲಕ್ಷ್ಯ ಧೋರಣೆಯನ್ನು ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, 'ಮುಂದಿನ ವಿಚಾರಣೆ ವೇಳೆ ಆಯುಕ್ತರ ವಿರುದ್ಧ ದೋಷಾರೋಪ ನಿಗದಿಪಡಿಸಲಾಗುವುದು' ಎಂದು ಎಚ್ಚರಿಸಿತು.

ಇದಕ್ಕೆ ಸಮಜಾಯಿಷಿ ನೀಡಿದ ಬಿಬಿಎಂಪಿ ಪರ ವಕೀಲ ಕೆ.ಎನ್. ಪುಟ್ಟೇಗೌಡ, 'ಹಾಲಿ ಆಯುಕ್ತರು 2021ರ ಏಪ್ರಿಲ್ 1ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಮಳಿಗೆಗಳ ಹಂಚಿಕೆಗೂ ಅವರಿಗೂ ಯಾವುದೇ ಸಂಬಂಧವಿಲ್ಲ. ಈ ಕುರಿತ ಲಿಖಿತ ಹೇಳಿಕೆಗಳನ್ನು ಮಾನ್ಯ ಮಾಡಬೇಕು' ಎಂದು ಮನವಿ ಮಾಡಿದರು.

ಹೇಳಿಕೆ ಪರಿಶೀಲಿಸಿದ ನ್ಯಾಯಪೀಠ, 'ಮಳಿಗೆಗಳನ್ನು ಟೆಂಡರ್ ಇಲ್ಲದೇ ಹಂಚಿಕೆ ಮಾಡಲಾಗಿದೆ. ಆದ್ದರಿಂದ, ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸುವುದು ಸೂಕ್ತ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

ಹೈಕೋರ್ಟ್ ಸುದ್ದಿ

ಶೌಚಗುಂಡಿ ಸ್ವಚ್ಛತಾ ಕಾರ್ಮಿಕರ ಸಮೀಕ್ಷೆಗೆ ಎರಡು ತಿಂಗಳ ಗಡುವು

ಬೆಂಗಳೂರು: 'ಶೌಚಗುಂಡಿ ಸ್ವಚ್ಛತಾ ಕಾರ್ಮಿಕರ (ಮ್ಯಾನುಯೆಲ್ ಸ್ಕ್ಯಾವೆಂಜರ್ಸ್) ಸಮಗ್ರ ಸಮೀಕ್ಷೆಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಕಾರ್ಮಿಕರಿಂದ ಮ್ಯಾನ್‌ಹೋಲ್ ಸ್ವಚ್ಛಗೊಳಿಸುವ ಪದ್ಧತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆ-2013ರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಕಾರ್ಮಿಕ ಒಕ್ಕೂಟ ಮಂಡಳಿಯ ಅಖಿಲ ಭಾರತ ಕೇಂದ್ರ ಸಮಿತಿಯ (ಎಸಿಸಿಟಿಯು) ಕರ್ನಾಟಕ ಘಟಕ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ತಮಟೆ' ಸ್ವಯಂಸೇವಾ ಸಂಸ್ಥೆ ಪರ ಹಾಜರಾಗಿದ್ದ ಹಿರಿಯ ವಕೀಲೆ ಜಯ್ನಾ ಕೊಠಾರಿ, 'ಸಮೀಕ್ಷೆ ನಡೆಸಲು ನ್ಯಾಯಾಲಯ ಈ ಹಿಂದೆಯೇ ನಿರ್ದೇಶನ ನೀಡಿದ್ದರೂ ಈತನಕ ಆಗಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದಕ್ಕೆ ಪ್ರತಿಯಾಗಿ ಸರ್ಕಾರದ ಪರ ವಕೀಲರು 'ಸಮೀಕ್ಷೆ ನಡೆಸಲು ನೋಡಲ್ ಅಧಿಕಾರಿ ನೇಮಿಸಲಾಗಿದೆ' ಎಂದು ತಿಳಿಸಿದರು.

'1–5ನೇ ತರಗತಿ ಆರಂಭಿಸಿದರೆ ಹೋರಾಟ'

ಬೆಂಗಳೂರು: 'ಕೋವಿಡ್ ಸೋಂಕು ದೂರವಾಗಿಲ್ಲ. ಮಕ್ಕಳಿಗೆ ಲಸಿಕೆ ಬಂದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಒಂದರಿಂದ ಭೌತಿಕ ತರಗತಿ ಆರಂಭಿಸುವುದು ಸರಿಯಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮತ್ತು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರಿಗೆ 'ಸಿಟಿಜನ್ ರೈಟ್ಸ್ ಫೌಂಡೇಷನ್'' ಪತ್ರ ಬರೆದಿದೆ.

'ಮಕ್ಕಳಿಗೆ ಕೋವಿಡ್ ಲಸಿಕೀಕರಣ ಪೂರ್ಣಗೊಳ್ಳುವವರೆಗೂ ಪ್ರಾಥಮಿಕ ಶಾಲೆ (1ರಿಂದ 5ವರೆಗಿನ ತರಗತಿ) ಆರಂಭಿಸಬಾರದು. ಒಂದು ವೇಳೆ ಸರ್ಕಾರ ತಪ್ಪು ನಡೆ ಅನುಸರಿಸಿದರೆ ಕಾನೂನು ಹೋರಾಟ ನಡೆಸಲಾಗುವುದು' ಎಂದು ಫೌಂಡೇಷನ್ ಅಧ್ಯಕ್ಷ ಕೆ.ಎ. ಪಾಲ್ ಎಚ್ಚರಿಕೆ ನೀಡಿದ್ದಾರೆ.

'ಕೋವಿಡ್ 3ನೇ ಅಲೆಯ ಆತಂಕ ಜನರನ್ನು ಕಾಡುತ್ತಿದೆ. ಕೇರಳ, ಮಹಾರಾಷ್ಟ್ರ ಸಹಿತ ಹಲವು ರಾಜ್ಯಗಳಲ್ಲಿ ಸೋಂಕು ನಿಯಂತ್ರಿಸಲು ಸ್ಥಳೀಯ ಸರ್ಕಾರಗಳು ಹರಸಾಹಸ ಪಡುತ್ತಿವೆ. ಈ ಮಧ್ಯೆ, ಶಾಲಾ ಕಾಲೇಜುಗಳನ್ನು ಆರಂಭಿಸುವ ಮೂಲಕ ರಾಜ್ಯ ಸರ್ಕಾರ, ಮಕ್ಕಳ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆಯೇ ಎಂಬ ಪ್ರಶ್ನೆ ಉದ್ಭವವಾಗಿದೆ' ಎಂದಿದ್ದಾರೆ.

'ವಿದೇಶಗಳಿಗೆ ತೆರಳಲು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಲಸಿಕೆ ಪಡೆದಿರಲೇಬೇಕು ಎಂದು ಹೇಳುತ್ತಿರುವ ಸರ್ಕಾರ, ಶಾಲೆಗಳ ವಿಚಾರದಲ್ಲೇಕೆ ವ್ಯತಿರಿಕ್ತ ನಿಲುವು ಹೊಂದಿದೆ' ಎಂದು ಪ್ರಶ್ನಿಸಿದ್ದಾರೆ.

'ಇದೀಗ 1ನೇ ತರಗತಿಯಿಂದಲೇ ಶಾಲಾರಂಭಕ್ಕೆ ಎಲ್ಲರ ಒಲವಿದೆ. ದಸರಾ ನಂತರ ಶಾಲೆ ಆರಂಭಿಸಲಾಗುವುದೆಂದು ಶಿಕ್ಷಣ ಸಚಿವರು ಹೇಳಿದ್ದಾರೆ. ಆದರೆ, ಹೆತ್ತವರು ಅಭಿಪ್ರಾಯವನ್ನೇ ಕೇಳಿಲ್ಲ' ಎಂದೂ ಪತ್ರದಲ್ಲಿದೆ.

'ಶಾಲೆಗಳ ಆರಂಭ ಸರಿಯೇ ಎಂಬ ಬಗ್ಗೆ ಮಾಧ್ಯಮಗಳು ನಡೆಸಿದ ಸಮೀಕ್ಷೆ ಪ್ರಕಾರ ಶೇ 73ರಷ್ಟು ಮಂದಿ ಶಾಲೆ ಆರಂಭಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಪೋಷಕರ ಅಭಿಪ್ರಾಯ ಪಡೆಯದೆ ಶಾಲೆ ಆರಂಭಿಸಲು ಸರ್ಕಾರ ಮುಂದಾಗಿರುವುದು ಆಕ್ಷೇಪಾರ್ಹ' ಎಂದಿದ್ದಾರೆ.

ಮಳೆ ಅವಘಡ: ಇಬ್ಬರು ಸಾವು

ಪ್ರಜಾವಾರ್ತೆ ವಾರ್ತೆ

ಮುಖ್ಯಾಂಶಗಳು
- ಸಿಡಿಲು ಬಡಿದು, ವಿದ್ಯುತ್ ತಂತಿ ತಗುಲಿ ಸಾವು
- ಹೊಲ-ಗದ್ದೆಗಳು ಜಲಾವೃತ
- ಜಯಪುರ ಭಾಗದಲ್ಲಿ ಗರಿಷ್ಠ ಮಳೆ

ಹುಬ್ಬಳ್ಳಿ: ರಾಜ್ಯದ ವಿವಿಧೆಡೆ ಸೋಮವಾರ ಉತ್ತಮ ಮಳೆಯಾಗಿದೆ. ಹುಬ್ಬಳ್ಳಿ ತಾಲ್ಲೂಕು ಅಗಡಿಯಲ್ಲಿ ಸಿಡಿಲು ಬಡಿದು ವ್ಯಕ್ತಿಯೊಬ್ಬ ಸತ್ತಿದ್ದರೆ, ಆನವಟ್ಟಿ ಬಳಿ ಕಡಿದುಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಯುವಕನೊಬ್ಬ ಮೃತಪಟ್ಟಿದ್ದು, ಮೂರು ಹಸುಗಳು ಸತ್ತಿವೆ.

ಹುಬ್ಬಳ್ಳಿ ತಾಲ್ಲೂಕಿನ ಅಗಡಿ ಗ್ರಾಮದ ನಿವಾಸಿ ಶಿವಾನಂದ ಚೆನ್ನಬಸಪ್ಪ ಗೋಕುಲ (51) ಸೋಮವಾರ ಹೊಲದಲ್ಲಿ ಕೆಲಸ ಮಾಡುವಾಗ ಮಧ್ಯಾಹ್ನ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಉಳಿದಂತೆ, ಧಾರವಾಡ ಜಿಲ್ಲೆಯ ಅಳ್ನಾವರದಲ್ಲಿ ಧಾರಾಕಾರ ಮಳೆಯಾಗಿದ್ದು ಮರಗಳು, ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ. ಹೊಲ ಗದ್ದೆಗಳು ಜಲಾವೃತವಾದವು. ಉತ್ತರಕನ್ನಡ ಜಿಲ್ಲೆ ಶಿರಸಿ, ಮುಂಡಗೋಡ ತಾಲ್ಲೂಕಿನ ವಿವಿಧೆಡೆ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಳಸ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಬಿರುಸಿನಿಂದ ಮಳೆ ಸುರಿಯಿತು. ಮೂಡಿಗೆರೆ, ಶೃಂಗೇರಿ ಭಾಗ, ಕೊಪ್ಪ ತಾಲ್ಲೂಕಿನ ನಾರ್ವೆ, ಜಯಪುರ ಭಾಗದಲ್ಲಿ ಮಳೆಯಾಗಿದೆ. ಜಯಪುರದಲ್ಲಿ ಗರಿಷ್ಠ 2.4 ಸೆಂ.ಮೀ ಮಳೆಯಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ [illegible] ಗಂಟೆ ಗುಡುಗು ಸಹಿತ ಮಳೆ ಸುರಿದಿದೆ. ಮಂಗಳೂರು- ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಸಮೀಪ ರಸ್ತೆ ಬದಿ ಅಂಗಡಿಗಳಿಗೆ ನೀರು ನುಗ್ಗಿದ್ದು, ವ್ಯಾಪಾರಸ್ಥರಿಗೆ ಸಮಸ್ಯೆಯಾಯಿತು.

ಯುವಕ, ಮೂರು ಜಾನುವಾರು ಸಾವು: ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಆನವಟ್ಟಿ ಬಳಿ ಕುಬಟೂರು ಕೆರೆ ಬಳಿ ಜಾನುವಾರು ಹುಡುಕಲು ಹೋಗಿದ್ದ ಸಮನವಳ್ಳಿ ಗೊಲ್ಲರ ತಾಂಡಾದ ಕುಮಾರ (28) ಕಡಿದು ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಮೃತಪಟ್ಟಿದ್ದಾನೆ. ಮೂರು ಹಸುಗಳು ಸತ್ತಿವೆ.

ಉಳಿದಂತೆ, ಸಾಗರ ತಾಲ್ಲೂಕಿನ ನೀಚಡಿ ಗ್ರಾಮದ ಕೆ.ಕೆ. ನಾಗರಾಜ್ ಅವರ ಮನೆಗೆ ಸಿಡಿಲು ಬಡಿದಿದ್ದು, ನಷ್ಟ ಸಂಭವಿಸಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಗುಡುಗು ಸಹಿತ, ಶಿಕಾರಿಪುರ, ಭದ್ರಾವತಿ, ಹೊಸನಗರ, ಸಾಗರದಲ್ಲಿ ಸಾಧಾರಣ ಮಳೆಯಾಗಿದೆ.

ಯಾದಗಿರಿ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸೋಮವಾರ ಸಂಜೆ ಧಾರಾಕಾರ ಮಳೆ ಸುರಿಯಿತು. ಗುರುಮಠಕಲ್, ವಡಗೇರಾದಲ್ಲಿ ಸಾಧಾರಣ ಮಳೆ ಸುರಿದಿದೆ

ಗೋರಿಗಳನ್ನು ಸ್ಥಳಾಂತರಿಸಿ: ಸಚಿವ ಸುನಿಲ್ ಕುಮಾರ್

ಚಿಕ್ಕಮಗಳೂರು: 'ದತ್ತ ಪೀಠ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ನಿರ್ದೇಶನದಂತೆ ಸರ್ಕಾರವು ಸಮಿತಿ ರಚಿಸಿ ಶೀಘ್ರದಲ್ಲಿ ತೀರ್ಮಾನ ಕೈಗೊಳ್ಳಲಿದೆ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದರು.

ಬಾಬಾಬುಡನ್ ಗಿರಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮುಜಾವರ್ ನೇಮಕ ಮಾಡಿದ್ದ ಆದೇಶವನ್ನು ಹೈಕೋರ್ಟ್ ವಜಾಗೊಳಿಸಿದೆ. ಇದು ಹೋರಾಟಗಾರರಿಗೆ ಸಂತಸ ಮೂಡಿಸಿದೆ. ಈಗಿನ ಸರ್ಕಾರ ಹಿಂದೂಗಳ ಭಾವನೆಗಳ ಪರವಾಗಿದೆ' ಎಂದು ಪ್ರತಿಕ್ರಿಯಿಸಿದರು.

'ದತ್ತ ಪೀಠ ಹೋರಾಟವು ನನ್ನ ಬೆಳವಣಿಗೆಯಲ್ಲಿ ಪ್ರಮುಖ ಸಂಗತಿ. ದತ್ತಾತ್ರೇಯ ಪೀಠ ಮತ್ತು ಬಾಬಾಬುಡನ್ ದರ್ಗಾ ಬೇರೆ, ಬೇರೆ ಎಂಬುದು ದಾಖಲೆಗಳಲ್ಲಿ ಇದೆ. ಮುಸ್ಲಿಮರು ನಾಗೇನಹಳ್ಳಿಯ ದರ್ಗಾ ಅಭಿವೃದ್ಧಿ ಮಾಡಬೇಕು. ಇಲ್ಲಿ ಅನಗತ್ಯವಾಗಿ ನಿರ್ಮಿಸಿರುವ ಗೋರಿಗಳನ್ನು ನಾಗೇನಹಳ್ಳಿಗೆ ಸ್ಥಳಾಂತರಿಸಬೇಕು. ಈ ಸ್ಥಳದಲ್ಲಿ ಹಿಂದೂಗಳಿಗೆ ಪೂಜೆಗೆ ಅವಕಾಶ ಮಾಡಿಕೊಡಬೇಕು' ಎಂದೂ ಮನವಿ ಮಾಡಿದರು.

ಅಕ್ಷರ ಅಕ್ಕರೆ ಬೆಳೆಸಲು 'ಪುಸ್ತಕ ಗೂಡು'

ಒಂದನೇ ಪುಟದಿಂದ

ಪುಸ್ತಕಗಳಿವೆ: 'ಮಳೆ-ಗಾಳಿಯಿಂದ ಪುಸ್ತಕಗಳಿಗೆ ರಕ್ಷಣೆ ನೀಡಲು ಗೂಡು ರಚಿಸಲಾಗಿದೆ. ಸಾರ್ವಜನಿಕರು ಮನೆಯಲ್ಲಿ ಇರುವ ಹಳೆಯ ಪುಸ್ತಕಗಳನ್ನು ಇಲ್ಲಿ ತಂದಿಡಬಹುದು.ಗೂಡಿನಲ್ಲಿ ಸೇರುವ ಪುಸ್ತಕಗಳು ಜನರ ನಡುವೆ ವಿನಿಮಯ ಆಗುತ್ತವೆ' ಎಂದರು.

'ಪ್ರಮುಖ ಮೂರು ಸ್ಥಳಗಳಲ್ಲಿ ಗೂಡು ರಚಿಸಿ, ಪ್ರತಿ ಗೂಡಿನಲ್ಲಿ 30-40 ಪುಸ್ತಕಗಳನ್ನು ಇಟ್ಟಿದ್ದೇವೆ. ಕಾದಂಬರಿ, ಮಕ್ಕಳ ಕತೆ, ಪತ್ರಿಕೆಗಳ ವಿಶೇಷಾಂಕ ಸಂಚಿಕೆ ಸೇರಿದಂತೆ 250ಕ್ಕೂ ಹೆಚ್ಚು ಪುಸ್ತಕಗಳು ಸಂಗ್ರಹವಾಗಿವೆ. ಎಂದು ಉಳಾಯಿಬೆಟ್ಟು ಗ್ರಾಮ ಪಂಚಾಯಿತಿ ಅಧ್ಯಕ್ಷ ಹರಿಕೇಶ್ ಶೆಟ್ಟಿ, ಪಿಡಿಒ ಅನಿತಾ ತಿಳಿಸಿದರು.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ

ಸಂ:ಕಾ.ಇಂ/ಲೋಇ/ಹಾವಿ/ಹಾಸನ/ಟೆ.ನಂ-4 /2021-22 ದಿನಾಂಕ: 04.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಪ್ರಕಟಣೆ ಸಂಖ್ಯೆ:19/2021-22 ದಿನಾಂಕ 04.10.2021 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-1 ನಿಯಮವಾದ್ದರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಹಾಸನ ವಿಭಾಗದ ಹಾಸನ ತಾಲ್ಲೂಕಿನ ಒಟ್ಟು 2 ಸಂಖ್ಯೆ ಕಟ್ಟಡ ವಾರ್ಷಿಕ ನಿರ್ವಹಣೆ ಕಾಮಗಾರಿಗಳ ಗರಿಷ್ಠ ಟೆಂಡರ್ ಮೊತ್ತ ರೂ. 16.50 ಲಕ್ಷ ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.16.00 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 22.10.2021 – 16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/436/2021-22

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ -04, ಭೂತರಾಮನಹಟ್ಟಿ, ಬೆಳಗಾವಿ-591156

ಸಂ.: ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2021-22/ ದಿನಾಂಕ: 04.10.2021

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ಸ್ಥಳೀಯ ವೃಂದದ (ಕ-ಕ) 317ಜೆ ಅಡಿಯಲ್ಲಿ ಲಭ್ಯವಿರುವ ವಿವಿಧ ವೃಂದದ ಬೋಧಕೇತರ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಜಿ ಆಹ್ವಾನ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ವೃಂದದ (ಕ-ಕ) 371 ಜೆ ಅಡಿಯಲ್ಲಿ ಲಭ್ಯವಿರುವ ವಿವಿಧ ವೃಂದದ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ 08 ಪ್ರತಿಗಳಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಹುದ್ದೆಗಳ ವಿವರ, ವಿದ್ಯಾರ್ಹತೆ, ಸೇವಾ ಅನುಭವ ಇತ್ಯಾದಿ ವಿವರಗಳನ್ನು ಪರಿಶೀಲಿಸಬಹುದಾಗಿದೆ ಹಾಗೂ ಸದರಿ ವೆಬ್‌ಸೈಟ್‌ನಿಂದ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು, ಅರ್ಜಿ ಶುಲ್ಕ ಎಸ್.ಸಿ/ಎಸ್.ಟಿ/ಕೆ-1 ಅಭ್ಯರ್ಥಿಗಳಿಗೆ ರೂ. 500/- ಗಳು ಹಾಗೂ ಇತರೆ ಸಾಮಾನ್ಯ ಅಭ್ಯರ್ಥಿಗಳಿಗೆ ರೂ.1,000/- ಗಳನ್ನು ಡಿ.ಡಿ. ಮುಖಾಂತರ ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ಭರ್ತಿ ಮಾಡಿದ ಅರ್ಜಿಯೊಂದಿಗೆ ಲಗತ್ತಿಸಿ ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಬೆಳಗಾವಿ-591156 ಈ ವಿಳಾಸಕ್ಕೆ **ದಿನಾಂಕ: 18.10.2021**ರಂದು **ಸಂಜೆ 5:00 ಗಂಟೆಯೊಳಗಾಗಿ** ಕುಲಸಚಿವರ ಕಛೇರಿಗೆ ತಲುಪಿಸುವಂತೆ ತಿಳಿಸಲಾಗಿದೆ.

ಸಹಿ/-
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

DIPR/BGM/848/Manipal/2021-22

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಬೆಂಗಳೂರು

ಕರ್ನಾಟಕ ಸರ್ಕಾರ

7ನೇ ಮಹಡಿ, ಎಂ.ಎಸ್.ಐ.ಎಲ್ ಹೌಸ್, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು – 560 052.
ಫೋನ್ : 080 – 22371120, ಇಮೇಲ್ : rscdirector@yahoo.in

ನಾಮ ನಿರ್ದೇಶನಗಳಿಗಾಗಿ ಅರ್ಜಿ ಆಹ್ವಾನ

ಸಂಖ್ಯೆ: ಕರಾರಸುಪ್ರಾ/MORTH/ ವಿವ-18/2021-22 ದಿನಾಂಕ: 04-10-2021

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು, ರಾಜ್ಯದಲ್ಲಿ ಅರ್ಹ ವ್ಯಕ್ತಿಗಳಿಂದ ಜೀವರಕ್ಷಕರಿಗೆ **(Good Samaritans)** ಹಾಗೂ ರಸ್ತೆ ಸುರಕ್ಷತೆಯಲ್ಲಿ ಅತ್ಯುನ್ನತ ಚಟುವಟಿಕೆಗಳನ್ನು ನಡೆಸಿರುವ ಸ್ವಯಂ ಸೇವಾ ಸಂಸ್ಥೆಗಳಿಂದ 2020-21ನೇ ಸಾಲಿನ ರಾಷ್ಟ್ರಮಟ್ಟದ ಪ್ರಶಸ್ತಿಗಳಿಗೆ, ಶಿಫಾರಸು ಮಾಡಲು ನಾಮ ನಿರ್ದೇಶನಗಳನ್ನು ಭಾರತ ಸರ್ಕಾರದ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಅಧೀನ ಕಾರ್ಯದರ್ಶಿಗಳು ತಮ್ಮ ಪತ್ರ ಸಂಖ್ಯೆ : **RT-25050/03/2020-RS (FTS187835)**, ದಿನಾಂಕ : **07-09-2021** ಇವರ ಸೂಚನೆ ಮೇರೆಗೆ ಆಹ್ವಾನಿಸಲಾಗಿದೆ.

ಪ್ರಶಸ್ತಿಗಳ ವಿವರ ಈ ಕೆಳಗಿನಂತಿದೆ.

1. ರಸ್ತೆ ಸುರಕ್ಷತೆಯಲ್ಲಿ ಅತ್ಯುತ್ತಮ ಕಾರ್ಯ ಮಾಡಿರುವಂತಹ ಸ್ವಯಂ ಸೇವಾ ಸಂಸ್ಥೆಗಳಿಗೆ (ಮೂರು ಪ್ರಶಸ್ತಿ).
2. ತುರ್ತು ಸಂದರ್ಭಗಳಲ್ಲಿ ಸಹಾಯ ಮಾಡಿದ ಜೀವರಕ್ಷಕರಿಗೆ. (ಮೂರು ಪ್ರಶಸ್ತಿ).

ನಿಗದಿತ ಅರ್ಜಿಯ ನಮೂನೆಯು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ವೆಬ್ಸೈಟ್ನಲ್ಲಿ ಲಭ್ಯವಿದೆ.

ನಾಮ ನಿರ್ದೇಶನಗಳನ್ನು ಪೂರಕ ದಾಖಲೆಗಳೊಂದಿಗೆ (ಫೋಟೋಗಳು, ದಿನಪತ್ರಿಕೆ ತುಣುಕುಗಳು ಇತ್ಯಾದಿಗಳನ್ನು), ಅಪರ ಆಯುಕ್ತರ ಕಛೇರಿಗೆ ದಿನಾಂಕ:13-10-2021 ರೊಳಗಾಗಿ ಸಲ್ಲಿಸಬಹುದು.

ಸಹಿ/- ಅಪರ ಆಯುಕ್ತರು
ಕ.ರಾ.ರ.ಸು.ಪ್ರಾ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

DIPR/DDU/R.O:1774/2021-22

IN THE COURT PRIN DIST & SESSIONS JUDGE BAGALKOT AT: BAGALKOT

COMMERCIAL.O.S.NO-4/2020

1) Nirani Sugars Limited Mudhol, Dist: Bagalkot ...Plaintiff -V/s-
1) Laxmi Agencies and another ...Defendant

SUIT SUMMONS TO BELOW NAMED DEFENDANT NO. 1&2.

1) Laxmi Agencies, (COAL BRIQUETS INDUSTY) Plot # 400A, industrial area, Balkampady, Mangalore-575011 Dakshan kannada District Karnataka, represented by its proprietor Shri, Hiriyappa D.B Age: 67 Years, Occ: Business,
2) Shri, Hiriyappa D.B Proprietor of Laxmi Agencies, (COAL BRIQUETS INDUSTY) Plot # 400A, industrial area, Balkampady, Mangalore-575011 Dakshan kannada District Karnataka,

Whereas, the above name Plaintiff has filed above numbered suit seeking for the relief of recovery of money praying to direct the defendants to pay an amount of Rs. 5,34,20,000/- based on the dishonored cheques by awarding the interest at the rate of Rs.18% P.A from the date of suit, till the entire realization of the suit claim, made against the defendants.

The above suit is now fixed on 24/11/2021, you are hereby summoned to appear before this Hon'ble court in person or through duly instructed counsel to answer the claim of the plaintiff on 24/11/2021at.11:00 A.M. Failing which necessary orders shall be passed in your absence.

Given under my hand and seal of this court on this 24-09-2021

BY ORDER OF THE COURT

Sd/-
Advocate for plaintiff
Place:Bagalkot

Sd/-
Prin.District sessions judge Bagalkot

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ-ಮಹದೇವಪುರ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು – 560 002.

ಸಂಖ್ಯೆ: ಕಾಪಾಅ/ರಮೂ/ಮ-ಪುರ/ಟೆಂಡರ್/02/2021-22 ದಿನಾಂಕ: 04.10.2021

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಬಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ಮಹದೇವಪುರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಟೆಂಡರುದಾರರಿಂದ ಈ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿ & ಪ್ಯಾಕೇಜ್‌ನ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)
ರಸ್ತೆ ಮೂಲಭೂತ ಸೌಕರ್ಯ ಮಹದೇವಪುರ ವಿಭಾಗದಲ್ಲಿ 110 ಗ್ರಾಮಗಳ ಯೋಜನೆ ಅಡಿಯಲ್ಲಿ ಬೆಂಗಳೂರು ಜಲ ಮಂಡಳಿ ವತಿಯಿಂದ ನೀರು ಸರಬರಾಜು, ಒಳಚರಂಡಿ ಕೊಳವೆಮಾರ್ಗಗಳನ್ನು ಅಳವಡಿಸಲು ಮತ್ತು ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ಅಗೆದಿರುವ ರಸ್ತೆ ಭಾಗಗಳನ್ನು ಪುನಶ್ಚೇತನ ಮಾಡುವುದು. ಪ್ಯಾಕೇಜ್-1 GOK-2020-21.	6302.43
ಇಎಂಡಿ (₹. ಲಕ್ಷಗಳಲ್ಲಿ)	ಸರ್ಕಾರದ ಆದೇಶ ಸಂಖ್ಯೆ: ಅಇ 675, ವೆಚ್ಚ-12/2020, ದಿನಾಂಕ: 22-12-2020 ರಂತೆ ಘೋಷಣೆ ಪ್ರಮಾಣಪತ್ರ ಸಲ್ಲಿಸುವುದು.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **07.10.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **26.10.2021**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **19.10.2021**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತಸೌಕರ್ಯ) ಇಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **27.10.2021**ರ ಸಂಜೆ **4:30** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ- ಮಹದೇವಪುರ ವಿಭಾಗ, ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ-ಮಹದೇವಪುರ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು-560 001. ದೂರವಾಣಿ ಸಂಖ್ಯೆ: +91-80-29619801
ಮಿಂಚ್ ಅಂಚೆ: latha.mdksmscl@gmail.com

No: HFW/KSMSCL/TND/03(II)Drugs/29/2021-22 Dated: 04.10.2021

ಟೆಂಡರ್ ಪ್ರಕಟಣೆ

ಉಲ್ಲೇಖ: 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/03(II) Drugs/29/2021-22, Dated: 04.10.2021 (IND-837).
2. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/CH/31/ 2021-22 Dated: 04.10.2021 (IND-844).

ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ. ನಿಯಮಾನುಸಾರ ಈ ಕೆಳಕಂಡ ಟೆಂಡರ್‌ರನ್ನು ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.

1. 2019-20ನೇ ಸಾಲಿನ ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. **2.** 2021-22ನೇ ಸಾಲಿನ ಮಕ್ಕಳ ಕಾರ್ಯಕ್ರಮದಡಿ ಔಷಧಿಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ.

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://eproc.karnataka.gov.in** ನಲ್ಲಿ **ದಿನಾಂಕ: 04.10.2021** ರಿಂದ ಔಷಧಿ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.

DIPR/DDU/RO1771/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

(ಕಂಪನಿಗಳ ಕಾಯಿದೆ 2013ರಡಿಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆ)
ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175
Bengaluru SMART CITY

ಕಾರ್ಯಪಾಲಕ ಅಭಿಯಂತರರ ಕಚೇರಿ-02, ಬೃಬೆಂಮಪಾಲಿಕೆ ಕಟ್ಟಡ, ತಿಮ್ಮಯ್ಯ ರಸ್ತೆ, ಅಲಿಯನ್ಸ್ ಫ್ರಾನ್ಸಿಸ್ ಡೇ ಶಾಲೆ ಎದುರು, ವಸಂತನಗರ, ಬೆಂಗಳೂರು – 560 052. ದೂರವಾಣಿ: 080-22200080
ಸಂಖ್ಯೆ: ಬೆಂಸ್ಮಾಸಿಲಿ/ಟಿಎಸ್/ಕಾಪಾಅ-02/ಟೆಂಡರ್-04/2021-22 ದಿನಾಂಕ: 04.10.2021

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)

ವ್ಯವಸ್ಥಾಪಕ ನಿರ್ದೇಶಕರು ಬೆಂ.ಸ್ಮಾ.ಸಿಟಿ ಲಿಮಿಟೆಡ್‌ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು-02 ರವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರುದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್-ಮೆಂಟ್ ಪೋರ್ಟಲ್ ಮುಖಾಂತರ **(https://eproc.karnataka.gov.in)** ಪಟ್ಟಿಯಲ್ಲಿ ತಿಳಿಸಿರುವ ಕಾಮಗಾರಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರಿಗಿಟ್ಟ ಮೊತ್ತ (₹.ಗಳಲ್ಲಿ)	ಗುತ್ತಿಗೆ ಅವಧಿ
1	ಬೆಂಗಳೂರಿನಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಚೇರಿಗೆ ಭದ್ರತಾ ಸೇವೆಗಳನ್ನು ಒದಗಿಸುವುದು.	8,50,000.00	12 ತಿಂಗಳು
2	ಬೆಂಗಳೂರಿನಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಚೇರಿಗೆ ಸ್ವಚ್ಛತೆ ಸೇವೆಗಳನ್ನು ಒದಗಿಸುವುದು.	7,50,000.00	12 ತಿಂಗಳು

(1) ಟೆಂಡರ್ ದಾಖಲೆಗಳನ್ನು ದಿನಾಂಕ **07.10.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **18.10.2021**ರ ಸಂಜೆ **4:00** ಗಂಟೆಯವರೆಗೆ (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **13.10.2021** ರ ಸಂಜೆ **4:00** ಗಂಟೆಗೆ ಕಾರ್ಯಪಾಲಕ ಅಭಿಯಂತರರು-02, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಇಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **21.10.2021**ರ ಸಂಜೆ **4:30** ಗಂಟೆಗೆ ಕಾರ್ಯಪಾಲಕ ಅಭಿಯಂತರರು-02, ಬೆಂಸ್ಮಾಸಿಲಿ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಹಾಗೂ ಸಹಾಯಕೇಂದ್ರ ಸಂಖ್ಯೆ: **080-22441076** ರಲ್ಲಿ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು-02,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂ: ಬೆಂಅಪ್ರಾ/ಉಆ(ಭೂಸ್ವಾ)/139/2021-22 ದಿನಾಂಕ : 01.10.2021

ಪತ್ರಿಕಾ ಪ್ರಕಟಣೆ

ಡಾ|| ಕೆ.ಶಿವರಾಮಕಾರಂತ ಬಡಾವಣೆಗೆ ಅಧಿಸೂಚಿಸಿರುವ ಜಮೀನಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: Miscellaneous Application No(s).1614-1616/2019 in Miscellaneous Application No(s).1316-1348/2019 in Civil Appeal No(s).7661-7663/2018, ದಿನಾಂಕ:03.12.2020 ಮತ್ತು ದಿನಾಂಕ:05.05.2021ರ ಆದೇಶದಂತೆ ಭೂಮಾಲೀಕರಿಗೆ ನಗದು ಪರಿಹಾರ ಅಥವಾ 60:40 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳ ರೂಪದಲ್ಲಿ ಪರಿಹಾರವನ್ನು ನೀಡುವ ಬಗ್ಗೆ ಸರ್ಕಾರದಿಂದ 60:40ರ ಯೋಜನೆಗೆ ಅನುಮೋದನೆ ಪಡೆದು ಅದರಂತೆ ಪರಿಹಾರ ನೀಡಲು ಆದೇಶವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/553/ ಎಂಎನ್‌ಎಕ್ಸ್/2018, ದಿನಾಂಕ:17.02.2021ರ ಆದೇಶದಂತೆ ಭೂಸ್ವಾಧೀನವಾದ ಜಮೀನುಗಳ ಭೂ ಮಾಲೀಕರಿಗೆ ಭೂ ಪರಿಹಾರವಾಗಿ ಭೂಸ್ವಾಧೀನ ಕಾಯ್ದೆ 1894ರಂತೆ ನಗದು ಭೂ ಪರಿಹಾರ ಅಥವಾ 60:40 ಅನುಪಾತದಲ್ಲಿ ಎಕರೆ ಒಂದಕ್ಕೆ 9583 ಚ.ಅಡಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಭೂಪರಿಹಾರವಾಗಿ ನೀಡಲು ಆದೇಶವಾಗಿರುತ್ತದೆ. ಅದರಂತೆ, ಐತೀರ್ಪು ಅನುಮೋದನೆಯಾದ ಪ್ರಕರಣಗಳಲ್ಲಿ ಭೂಮಾಲೀಕರಿಗೆ ಭೂಸ್ವಾಧೀನ ಕಾಯ್ದೆ 1894ರ ಕಲಂ 12(2)ರಡಿ ನೋಟೀಸ್ ನೀಡಲಾಗಿರುತ್ತದೆ. ಭೂಮಾಲೀಕರಿಗೆ ಘನ ನ್ಯಾಯಾಲಯದ ಹಾಗೂ ಸರ್ಕಾರದ ಆದೇಶದಂತೆ ನಗದು ಪರಿಹಾರ ಅಥವಾ ಅಭಿವೃದ್ಧಿಪಡಿಸಿದ ನಿವೇಶನಗಳ ರೂಪದ ಪರಿಹಾರಗಳ ಪೈಕಿ ಯಾವುದಾದರೂ ಒಂದು ರೀತಿಯ ಪರಿಹಾರವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿರುತ್ತದೆ. ಭೂ ಮಾಲೀಕರು ಮೇಲ್ಕಂಡ ಆಯ್ಕೆಗಳ ಪೈಕಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಪರಿಹಾರವಾಗಿ ಪಡೆಯಲು ಇಚ್ಛೆ ವ್ಯಕ್ತಪಡಿಸಿ, ಸಂಬಂಧಪಟ್ಟ ವಿಶೇಷ ಭೂ ಸ್ವಾಧೀನಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದಲ್ಲಿ, ಅಂತಹ ಭೂಮಾಲೀಕರಿಗೆ ಭೂಸ್ವಾಧೀನವಾದ ಜಮೀನಿನ ವಿಸ್ತೀರ್ಣಕ್ಕೆ ನೀಡಬಹುದಾದ ಅಭಿವೃದ್ಧಿಪಡಿಸಿದ ನಿವೇಶನಗಳ ಬಾಬ್ತು ಪ್ರಮಾಣ ಪತ್ರಗಳನ್ನು ನೀಡಲಾಗುವುದು. ಆದ್ದರಿಂದ ಐತೀರ್ಪು ಅನುಮೋದನೆಯಾದ ಪ್ರಕರಣಗಳಲ್ಲಿ ಭೂಸ್ವಾಧೀನ ಕಾಯ್ದೆ 1894ರ ಕಲಂ 12(2) ರಡಿ ನೋಟೀಸ್ ನೀಡಲಾಗಿರುವ ಪ್ರಕರಣಗಳಲ್ಲಿನ ಭೂ ಮಾಲೀಕರು ಈ ಪ್ರಕಟಣೆಯ ದಿನಾಂಕದಿಂದ **15 ದಿನಗಳೊಳಗಾಗಿ** ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿ, ವಿಶೇಷ ಭೂಸ್ವಾಧೀನಾಧಿಕಾರಿಗಳು, ಡಾ|| ಕೆ.ಶಿವರಾಮಕಾರಂತ ಬಡಾವಣೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ತಮ್ಮ ಮನವಿಗಳನ್ನು ಸಲ್ಲಿಸುವಂತೆ ಕೋರಲಾಗಿದೆ. ಇಲ್ಲವಾದಲ್ಲಿ ನಿಯಮಾನುಸಾರ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು.

ಸಹಿ/- ಉಪ ಆಯುಕ್ತರು (ಭೂಸ್ವಾ), ಬೆಂಅಪ್ರಾ, ಬೆಂಗಳೂರು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಳಿಯಾಳ ವಿಭಾಗ, ಉತ್ತರ ಕನ್ನಡ
ಇಮೇಲ್: midhly@yahoo.co.in ದೂರವಾಣಿ: 08284-220113

ನಂ:ಕಾನಿಅ/ಸನೀವಿಹ/ತಾವಿ/ಟೆಂಡರ್:2021-22/1324 ದಿನಾಂಕ:01-10-2021

ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್) ಕೆಡ್ಬ್ಲ್ಯೂ-3&4

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ -2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗೆ **KW-3 & KW-4** (ದ್ವಿ-ಲಕೋಟಿ) ಪದ್ಧತಿಯಲ್ಲಿ "ಇ-ಪ್ರೊಕ್ಯೂರಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ.

ಖಾಲಿ ಟೆಂಡರ್ ಫಾರಂಗಳನ್ನು ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ: "https://eproc.karnataka.gov.in/eportal/index.seam" ದಲ್ಲಿ ದಿನಾಂಕ:**13-10-2021** ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲಿನ ಅ.ನಂ: 3 ರಿಂದ 5 ರವರೆಗಿನ ಕಾಮಗಾರಿಗಳಿಗೆ **ದಿನಾಂಕ:08-11-2021** ರಂದು ವಿಭಾಗ ಕಚೇರಿಯಲ್ಲಿ ಬಿಡ್‌ದಾರರೊಂದಿಗೆ ಪೂರ್ವಭಾವಿ ಸಭೆಯನ್ನು ನಿಗದಿಪಡಿಸಲಾಗಿರುತ್ತದೆ. ಟೆಂಡರ್ ಕುರಿತಂತೆ ದಿನಾಂಕ: **12-11-2021** ರೊಳಗಾಗಿ ಅನುಮಾನಗಳಿದ್ದರೆ ಕಚೇರಿ ಅಥವಾ ಇ-ಪ್ರೊಕ್ಯೂರಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ: **15-11-2021** ರ **4.00** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: **17-11-2021 ಮಧ್ಯಾಹ್ನ 4.30** ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಸರ್ಕಾರದ ನಡವಳಿ ಆದೇಶ ಪತ್ರ ಸಂಖ್ಯೆ: ಆ.ಇ/675/ವೆಚ್ಚ-12/2020 ಬೆಂಗಳೂರು ದಿನಾಂಕ:22.12.2020 ರನ್ವಯ ಇ.ಎಂ.ಡಿ ಮೊತ್ತದ ಬದಲಾಗಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್ ದಾಖಲೆಗಳಲ್ಲಿ ಅಳವಡಿಸಿರುವ EMD Declaration ನಮೂನೆಯನ್ನು ಸಹಿಯೊಂದಿಗೆ ಭರ್ತಿ ಮಾಡಿ ಕಡ್ಡಾಯವಾಗಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು **ಕೆಡ್ಬ್ಲ್ಯೂ-3&4 ಬಿಡ್ ಡಾಕ್ಯುಮೆಂಟ್**ರಲ್ಲಿರುವಂತೆ ಪರಿಗಣಿಸಲಾಗುವುದು. ಈ ಬಗ್ಗೆ ಟೆಂಡರದಾರರು ಟೆಂಡರ ಸಲ್ಲಿಸುವ ಮುನ್ನ ಮನದಟ್ಟು ಮಾಡಿಕೊಳ್ಳುವುದು.

ಟೆಂಡರ್ ಸಂಬಂಧಿಸದಂತೆ ಸಂಪೂರ್ಣ ವಿವರಗಳನ್ನು ಮೇಲಿನ ಇ-ಪ್ರೊಕ್ಯೂರಮೆಂಟ್ ಮೂಲಕ ನಿಗದಿ ಪಡಿಸಿದ ದಿನಾಂಕಗಳಂದು ಪಡೆದುಕೊಳ್ಳಬಹುದು. ಹಾಗೂ ವೆಬ್‌ಸೈಟಿನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- (ಅವಿನಾಶ ಆರ್. ಆಲೂರು)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಹಳಿಯಾಳ ವಿಭಾಗ (ಉ.ಕ)

ವಾ.ಸಾ.ಇ/ಎಡಿಕೆ/478/2021-22/ದೇಶಪಾಂಡೆ ಪಬ್ಲಿಸಿಟಿ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು

ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ ರಾಯಚೂರು.
ಮಿಂಚಂಚೆ : spo@uasraichur.edu.in ದೂರವಾಣಿ ಸಂಖ್ಯೆ : 08532-220165

ಇ-ಟೆಂಡರ್ ಪ್ರಕಟಣೆ ಸಂಖ್ಯೆ : SPO/UASR/E-Proc-06/2021-22, Dt : 30-09-2021

:: ಟೆಂಡರ ಪ್ರಕಟಣೆ ::

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.eproc.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ : UAS/2019-20/ IND3949 TO 3961) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ : **16-10-2021** ಆಗಿರುತ್ತದೆ.

ಸಹಿ/- ಸರಕು ಖರೀದಿ ಅಧಿಕಾರಿಗಳು,
ಕೃವಿವಿ ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/373/ಎಂ.ಸಿ.&ಎ/2021-22

ಚಿತ್ರದುರ್ಗ ನಿರ್ಮಿತಿ ಕೇಂದ್ರ

(ಕರ್ನಾಟಕ ಸರ್ಕಾರದ ಪ್ರಾಯೋಜಿತ ನೋಂದಾಯಿತ ಸೋಸೈಟಿ, ಹುಡ್ಕೊ & ಕರ್ನಾಟಕ ಸರ್ಕಾರ)
ಮೇಗಳಹಳ್ಳಿ, ಮೇಡೆಹಳ್ಳಿ ಗ್ರಾ.ಪ, ಚಿತ್ರದುರ್ಗ – 577 502
ಇ-ಮೇಲ್: chitradurgank@yahoo.co.in | nirmithikendracta@gmail.com

ನಂ. ಚಿ.ನಿ.ಕೇ/ಇ-ಟೆಂಡರ್/ಸಿಮೆಂಟ್-1/2021-22 ದಿನಾಂಕ: 01.10.2021

ಇ-ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಚಿತ್ರದುರ್ಗ ನಿರ್ಮಿತಿ ಕೇಂದ್ರದಿಂದ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸಿಮೆಂಟ್ ಖರೀದಿಗಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮಿತ 1999ರ ಪ್ರಕಾರ ತಾಂತ್ರಿಕ ಮತ್ತು ಆರ್ಥಿಕ ಲಕೋಟೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಸಾಮಗ್ರಿಗಳ ವಿವರ: ಸಿಮೆಂಟ್ (OPC 43 Grade) 50 kg per bag. **ಬೇಕಾದ ಅಂದಾಜು ಪ್ರಮಾಣ:** 1,20000 ಚೀಲಗಳು. **ಟೆಂಡರ್‌ನ ಅಂದಾಜು ಮೊತ್ತ:** ರೂ. 396.00 ಲಕ್ಷಗಳು. **ಇ.ಎಂ.ಡಿ ಮೊತ್ತ:** ರೂ. 5.94 ಲಕ್ಷಗಳು.

1) ಟೆಂಡರ್ ಪ್ರಾರಂಭ ದಿನಾಂಕ: **04.10.2021ರ ಬೆಳಿಗ್ಗೆ 11:00 ಗಂಟೆಗೆ.** 2) ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 21.10.2021ರ ಸಂಜೆ 5:00 ಗಂಟೆಯವರೆಗೆ.** 3) ಟೆಂಡರ್ ತೆರೆಯುವ **ದಿನಾಂಕ: 22.10.2021ರ ಮಧ್ಯಾಹ್ನ 1:00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಯೋಜನಾ ನಿರ್ದೇಶಕರು

ವಾಸಾಸಂಇ/ಚಿತ್ರದುರ್ಗ/ಜಿಎ/520/2020-21

ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ (ಅರಣ್ಯ ಪಡೆ ಮುಖ್ಯಸ್ಥರು) ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ 080-23346551

ಸಂಖ್ಯೆ: KFD/HOFF/BIO/PUR/11/2021-ICT-KFD ದಿನಾಂಕ:04-10-2021

ಟೋನರ್/ಕಾರ್ಟಿಟ್ಜ್/ ಡ್ರಮ್ ಕಿಟ್ ಹಾಗೂ ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್ ಅಧಿಸೂಚನೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಕಛೇರಿಯ ವಿವಿಧ ಶಾಖೆಗಳಿಗೆ ಟೋನರ್/ಕಾರ್ಟಿಟ್ಜ್/ ಡ್ರಮ್ ಕಿಟ್ ಹಾಗೂ ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಅಲ್ಪಾವಧಿಯ 'ಇ-ಟೆಂಡರ್' ಅಧಿಸೂಚನೆ ಸಂಖ್ಯೆ: FD/2021-22/IND 1840 ಯನ್ನು **ದಿನಾಂಕ: 04-10-2021** ರಂದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದ್ದು, ಆಸಕ್ತರಿಂದ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ ಮುಖಾಂತರ ದಿನಾಂಕ: 04-10-2021 ರಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 19-10-2021ರ ಸಂಜೆ 5.30.** ಗಂಟೆಯವರೆಗೆ ಅವಕಾಶವಿರುತ್ತದೆ, ತಾಂತ್ರಿಕ ಬಿಡ್ಡನ್ನು **21-10-2021ರ ಬೆಳಗ್ಗೆ 11.30 ಗಂಟೆಗೆ** ಈ ಕಛೇರಿಯಲ್ಲಿ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡಿನ ಮೌಲ್ಯಮಾಪನದ ನಂತರ ತೆರೆಯಲಾಗುವುದು, ಟೆಂಡರ್ ಅಧಿಸೂಚನೆಯ ಪೂರ್ಣ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಮಾಹಿತಿ ಸಂವಹನ ತಂತ್ರಜ್ಞಾನ)

ವಾಸಾಸಂಇ/ಬೆಂನ/1762/ ಅಲಕ್‌ನಂದ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.

ಸಂಖ್ಯೆ: ಡಬ್ಲ್ಯೂಪಿಎಸ್/.ಎ2/ಇ-ಟೆಂಡರ್/ಸಿಆರ್-27/21-22
ದಿನಾಂಕ 27.09.2021.

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

2021-22 ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ, ಕುಂದಾಪುರ, ಮಂಗಳೂರು, ಸಾಗರ ಮತ್ತು ಭದ್ರಾವತಿ ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ "Survey and Demarcation of Notified Forests by Providing and Fixing RCC Pillars and / Cairns" ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ.200,00,000/-ಗಳ ಕಾಮಗಾರಿಗಳಿಗೆ ಅಲಾವಧಿ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರಣ್ಯ ಗುತ್ತಿಗೆದಾರರು ದಿನಾಂಕ: 05.10.2021 ರ ಗಂಟೆ ಸಂಜೆ 04.00 ರೊಳಗಾಗಿ ಟೆಂಡರನ್ನು ಸಲ್ಲಿಸಬಹುದಾಗಿದೆ. ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182-250785ನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು
ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ-08/10/ಎಂಸಿಎ/21-22/655

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ

ಆಕಾಶವಾಣಿ ರಸ್ತೆ, ಸಿ.ಕೆ.ಪುರ, ಚಿತ್ರದುರ್ಗ – 577 501, ದೂರವಾಣಿ ಸಂ: 08194-222984 | e-mail: cuda.cta@rediffmail.com

ಸಂ. ಚಿನಪ್ರಾ/ನಯೋಸ/ನಾಸೌನಿ/1/2021-22 ದಿನಾಂಕ:30.09.2021

ಪ್ರಕಟಣೆ

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ನಾಗರೀಕ ಸೌಕರ್ಯಕ್ಕಾಗಿ ಮೀಸಲಿಟ್ಟ (ಸಿ.ಎ) ನಿವೇಶನಗಳು ಹಂಚಿಕೆಗಾಗಿ ಲಭ್ಯವಿರುತ್ತವೆ. ಅರ್ಹ ಸಂಘ/ಸಂಸ್ಥೆಗಳಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1991ರ ರೀತ್ಯ ಮಂಜೂರುಮಾಡಲು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಗ್ರಾಮ	ಅಳತೆ ಮೀಟರ್‌ಗಳಲ್ಲಿ	ಒಟ್ಟು ಅಳತೆ ಚ.ಮೀ.ಗಳಲ್ಲಿ	ಚ.ಮೀ.ಗೆ ರೂ.ಗಳಲ್ಲಿ	ಒಟ್ಟು ಮೌಲ್ಯ	ಪ್ರಾ.ಠೇವಣಿ ಶೇ.10ರಷ್ಟು	ಪ್ರವರ್ಗ	ಕಾಯ್ದಿರಿಸಿ ಉದ್ದೇಶ
1	2	3	4	5	6	7	8	9
1	ಚಿತ್ರದುರ್ಗ	(14+14.1)/2x (26.1+24.1)/2	363.95	12000	4367400	436740		*
2	ಕೆಳಗೋಟೆ	(19+23.4)/2x (13.7+22.7)/3	724.32	8500	65156720	615672		ನರ್ಸರಿ ಶಾಲೆ
3	ಕೆಳಗೋಟೆ	ಅನಿಯತ ನಿವೇಶನ	370 & 558	8500	7888000	788800		ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆ
4	ಕೆಳಗೋಟೆ	(11+18)/2x (24+25)/2	369.75	8500	3142875	314288		ಜಿಮ್/ಗ್ರಂಥಾಲಯ
5	ಮದಕರಿಪುರ	(37.8+32.5)/2 x0+21.4)/2	348.45	6900	2404305	240431		*
6	ಮದಕರಿಪುರ	19x18	342	6900	2359800	235980	ಪರಿಶಿಷ್ಟ ಜಾತಿ	*
7	ಮದಕರಿಪುರ	(0+17)/2x 19+59)/2	550.92	6900	3801348	380135	ಪರಿಶಿಷ್ಟ ಜಾತಿ	ಧಾರ್ಮಿಕ/ಸಾಂಸ್ಕೃತಿ/ಸಾಮಾಜಿಕ ಚಟುವಟಿಕೆ/ನರ್ಸರಿ ಶಾಲೆ
8	ಮದಕರಿಪುರ	(15+13)/2x 18/2	252	6900	1738800	173880		*
9	ಪಿಳ್ಳೇಕೆರನಹಳ್ಳಿ	(27.7+28.7)/2 x(9.7+9.9)/2	285.4	8000	2283200	228320	ಪರಿಶಿಷ್ಟ ಪಂಗಡ	*
10	ಕಿರುಬನಕಲ್ಲು	17 x 19.2	326.4	10000	3264000	326400	ಪರಿಶಿಷ್ಟ ಜಾತಿ	*
11	ಕಿರುಬನಕಲ್ಲು	(21.2+14)/2x (16.6+16.7)/2	310.23	10000	3102300	310230		*
12	ಕಿರುಬನಕಲ್ಲು	(20.5+21.5)x (16+16.5)	341.25	10000	3412500	341250		*
13	ಕಿರುಬನಕಲ್ಲು	18.75x (18.5+21.5)	375	10000	3750000	375000		*
14	ಕವಾಡಿಗರಹಟ್ಟಿ	24 x 24	576	6500	3744000	374400		ಧಾರ್ಮಿಕ/ಸಾಂಸ್ಕೃತಿ/ಸಾಮಾಜಿಕ ಚಟುವಟಿಕೆ/ನರ್ಸರಿ ಶಾಲೆ
15	ಕವಾಡಿಗರಹಟ್ಟಿ	46 x (16.2+10)/2	602.6	6500	3916900	391690		ಧಾರ್ಮಿಕ/ಸಾಂಸ್ಕೃತಿ/ಸಾಮಾಜಿಕ ಚಟುವಟಿಕೆ/ನರ್ಸರಿ ಶಾಲೆ
16	ಕೆಂಚನಕಟ್ಟೆ	(10.7+9.3)/2 x 22.9	229	10000	2290000	229000		*

* ಬ್ಯಾಂಕ್, ಮಿಲ್ಕ್ ಬೂತ್, ಮೆಟರ್‌ನಿಟಿ ಹೋಂ, ಚೈಲ್ಡ್‌ಕೇರ್ ಸೆಂಟರ್, ಜಿಮ್, ಗ್ರಂಥಾಲಯ, ಫೇರ್ ಪ್ರೈಸ್ ಶಾಪ್ ಮತ್ತು ಇತರೆ ಉದ್ದೇಶಗಳಿಗೆ ಷರತ್ತುಗಳು ಅನ್ವಯಿಸುತ್ತವೆ.

ನಿಬಂಧನೆಗಳು : (1) ರೂ.1,000-00ಗಳ ಶುಲ್ಕವನ್ನು ಪ್ರಾಧಿಕಾರಕ್ಕೆ ಭರಿಸಿ ನಿಗಧಿತ ಅರ್ಜಿ ನಮೂನೆ 1 ಮತ್ತು 2ನ್ನು ಪಡೆದು ಅರ್ಜಿಯೊಂದಿಗೆ ಶೇ.10ರಷ್ಟು ಠೇವಣಿ ಮೊತ್ತವನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ,ಚಿತ್ರದುರ್ಗ ಇವರ ಹೆಸರಿನಲ್ಲಿ ಡಿ.ಡಿ.ಯೊಂದಿಗೆ **ದಿನಾಂಕ:15.10.2021, ಸಂಜೆ 5.00 ಗಂಟೆಯ ಒಳಗಾಗಿ** ಪ್ರಾಧಿಕಾರಕ್ಕೆ ಸಲ್ಲಿಸುವುದು. (2) ಗುತ್ತಿಗೆ ಆಧಾರದ ಮೇಲೆ 30ವರ್ಷಗಳ ಅವಧಿಗೆ ಮಾತ್ರ (3) ಪೌರಸೌಕರ್ಯ ನಿವೇಶನಗಳ ಹಂಚಿಕೆಗೆ ಸಲ್ಲಿಸಿದ ಅರ್ಜಿಗಳನ್ನು ಅಂಗೀಕರಿಸುವ ಅಥವ ತಿರಸ್ಕರಿಸುವ ಅಧಿಕಾರವು ಪ್ರಾಧಿಕಾರವು ಕಾಯ್ದಿರಿಸಿಕೊಂಡಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ 08194 222984

ಸಹಿ/- ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ

ವಾಸಾಸಂಇ/ಚಿತ್ರದುರ್ಗ/ಜಿಎ/519/2021-22

ಸಹಿ/- ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ

‘ಅಕ್ಷರ ಗುರು’ಗಳ ಸುತ್ತ ಅಂಧಕಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪುಟ್ಟ, ಪುಟ್ಟ ಕಡ್ಡಿ ಸೇರಿಸಿ ಗೂಡು ಕಟ್ಟುವ ಗುಬ್ಬಚ್ಚಿಯಂತೆ, ಬದುಕಿನ ಗೂಡು ಕಟ್ಟಿ ನೆಮ್ಮದಿಯಿಂದ ಬದುಕು ಸಾಗಿಸುತ್ತಿದ್ದ ಅನುದಾನರಹಿತ ಖಾಸಗಿ ಶಾಲೆಗಳ ಸಾವಿರಾರು ಶಿಕ್ಷಕರಿಗೆ ಇಂದು ಕಡ್ಡಿಯೂ ಇಲ್ಲ... ಗೂಡೂ ಇಲ್ಲ!

ಬದುಕಿನ ಬಂಡಿಗೆ ಸುನಾಮಿಯಂತೆ ಅಪ್ಪಳಿಸಿದ ಕೋವಿಡ್, ‘ಅಕ್ಷರ ಜ್ಞಾನ’ವನ್ನೇ ನಂಬಿದ್ದ ಗುರುಗಳನ್ನು ದೈನೇಸಿ ಸ್ಥಿತಿಗೆ ತಳ್ಳಿದೆ. ಇಂದಲ್ಲ, ನಾಳೆ ಪರಿಸ್ಥಿತಿ ಸುಧಾರಿಸಬಹುದು ಎಂದು ಕಾಯುತ್ತಿದ್ದ ಈ ಸಮುದಾಯದ ಅನೇಕರು ಸಂಪಾದನೆಗಾಗಿ ನಾನಾ ದಾರಿಗಳ ಮೊರೆ ಹೋದರು. ಚಾಕ್, ಡಸ್ಟರ್ ಹಿಡಿದ ಕೈಗಳು ಅನಿವಾರ್ಯವಾಗಿ ಹಾರೆ, ಪಿಕ್ಕಾಸು ಹಿಡಿದು ಗಾರೆ ಕೆಲಸಕ್ಕೆ ಮುಂದಾದವು. ಹಲವರು ತಳ್ಳುಗಾಡಿ ನೂಕಿ ತರಕಾರಿ ಮಾರಿದರು. ಕೆಲವರು ಕೂಲಿ ಕೆಲಸಕ್ಕೆ ಹೋದರು. ಇನ್ನೂ ಕೆಲವರು ನರೇಗಾ ಕಾರ್ಮಿಕರಾದರು.

ಆದರೆ, ಈ ಶಿಕ್ಷಕರ ಪೈಕಿ ಬಹುತೇಕರು ತಮ್ಮ ಬದುಕಿನ ತೊಳಲಾಟವನ್ನು ಇನ್ನೊಬ್ಬರಲ್ಲಿ ಹೇಳಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಎಲ್ಲವನ್ನೂ ಒಡಲಲ್ಲೇ ಇಟ್ಟುಕೊಂಡು ಬೇಯುತ್ತಿದ್ದಾರೆ. ಕೇವಲ ₹ 5 ಸಾವಿರ ಆರ್ಥಿಕ ನೆರವು ಘೋಷಿಸಿದ್ದು ಬಿಟ್ಟರೆ, ರಾಜ್ಯ ಸರ್ಕಾರ ನೆರವಿಗೆ ಬಂದಿಲ್ಲ ಎಂದು ಕೊರಗುತ್ತಿದ್ದಾರೆ.

‘ಕೋವಿಡ್ ಸಂದರ್ಭದಲ್ಲಿಯೇ ವಿವಾಹ ನಿಶ್ಚಿತಾರ್ಥವಾಗಿತ್ತು. ಹೊಸ ಬಾಳಿನ ಸುಮಧುರ ಕನಸು

ಹೊಲದಲ್ಲಿ ಔಷಧಿ ಸಿಂಪಡಿಸುತ್ತಿರುವ ಮಹೇಂದ್ರ ಸಿಂಗ್ ಪಾಟೀಲ

ಬದುಕು ಬೀದಿಗೆ ತಂದ ಕೋವಿಡ್

ಕಾಣುತ್ತಿದ್ದ ನನಗೆ ಕೋವಿಡ್ ಕೊಟ್ಟ ಪೆಟ್ಟಿನಿಂದ ಕಣ್ಣು ಕತ್ತಲೆಯಾಯಿತು. ನನ್ನ ಸಂಬಳವನ್ನೇ ನೆಚ್ಚಿಕೊಂಡಿದ್ದ ಕುಟುಂಬಕ್ಕೆ ಬರಸಿಡಿಲು ಬಡಿಯಿತು. ಕೆಲಸವಿಲ್ಲ, ಸಂಬಳವಿಲ್ಲ... ಬದುಕು ಬೀದಿಗೆ ಬೀಳುವ ಆತಂಕ. ಒಂದು ಹೊತ್ತಿನ ಊಟಕ್ಕೂ ಪರದಾಡಿದೆ. ಧರೆಯೇ ಹತ್ತಿ ಉರಿಯುವಾಗ ಬದುಕಲಿಕ್ಕೆಲ್ಲಿ ಓಡುವೆ... ಎಂಬಂತೆ, ಬೇರೆ ದಾರಿ ಕಾಣದೆ, ಕೆಲಸವೂ ಸಿಗದೆ ಆತ್ಮಹತ್ಯೆಯೇ ಕೊನೆ ದಾರಿ ಎಂಬಂತಾಗಿದೆ...’

–ಹೀಗೆ ಕೋವಿಡ್ ಸಂದರ್ಭವನ್ನು ಬಿಚ್ಚಿಟ್ಟರು ಚಿಕ್ಕಮಗಳೂರು ಜಿಲ್ಲೆ ಅಕ್ಷರ ಜನನಿ ವಿದ್ಯಾಶಾಲೆಯಲ್ಲಿ ಆರು ವರ್ಷಗಳಿಂದ ಕೆಲಸ ಮಾಡುತ್ತಿರುವ

ಹೊಲದಲ್ಲಿ ನರೇಗಾ ಕೆಲಸ ಮಾಡಿದೆ. ಮಳೆಯಿಂದಾಗಿ ನರೇಗಾ ಕೆಲಸ ಸ್ಥಗಿತಗೊಂಡಾಗ ಹೊಲದಲ್ಲಿ ಕಳೆ ಕೀಳಲು, ಔಷಧಿ ಸಿಂಪಡಿಸುವ ಕೆಲಸವನ್ನೂ ಮಾಡಿದೆ

ಮಹೇಂದ್ರ ಸಿಂಗ್ ಪಾಟೀಲ, ಔರಾದ್

ಸಹ ಶಿಕ್ಷಕ ಡಿ.ಕೆ. ಚಂದ್ರಯ್ಯ. ಮುಂದೆ ಅವರಿಗೆ ಮಾತೇ ಬರಲಿಲ್ಲ.

ಯಾದಗಿರಿ ಜಿಲ್ಲೆ ಶಹಾಪುರದ ಭೀಮರಾಯನಗುಡಿಯ ನಿವೇದಿತಾ ಶಾಲೆಯ ಶರಣಪ್ಪ ಅವರ ಕಥೆ ಇನ್ನೊಂದು ರೀತಿಯದ್ದು. ‘20 ವರ್ಷಗಳಿಂದ ಕೆಲಸ ಮಾಡುತ್ತಿರುವ ನನಗೆ ₹ 8 ಸಾವಿರ ವೇತನ. ಅದರಲ್ಲೇ ಕುಟುಂಬ ನಡೆಸಬೇಕು. ಮನೆ ಬಾಡಿಗೆ, ಮಕ್ಕಳ ಶಾಲೆಯ ಶುಲ್ಕ ಕಟ್ಟಬೇಕು. ಎಲ್ಲರಿಗೂ ನೆರವು ನೀಡಿದ ಸರ್ಕಾರ ನನ್ನಂಥವರನ್ನು ಮರೆತೇ ಬಿಟ್ಟಿತು. ಸತ್ತರೂ ಒಂದೆ, ಇದ್ದರೂ ಒಂದೇ ಎಂದು ಅನಿಸಿದೆ. ಒಂದೂವರೆ ವರ್ಷದಿಂದ ತಳ್ಳುಗಾಡಿಯಲ್ಲಿ ತರಕಾರಿ ಮಾರಾಟ ಮಾಡಿ ಬದುಕುತ್ತಿದ್ದೇನೆ’ ಎಂದರು ಶರಣಪ್ಪ.

ಬೀದರ್ ಜಿಲ್ಲೆಯ ಔರಾದ್‌ನ ಅಮರೇಶ್ವರ ಗುರುಕುಲದ ಶಿಕ್ಷಕ ಮಹೇಂದ್ರ ಸಿಂಗ್ ಪಾಟೀಲ ಅವರದ್ದು ಬೇರೊಂದು ಥರ. ಶಾಲೆ ಮುಚ್ಚಿದ ಬಳಿಕ ನರೇಗಾ ಕೆಲಸ ಮಾಡುತ್ತಿದ್ದ ವಡಗಾಂವ್ (ಡಿ) ಗ್ರಾಮದ ಮಹೇಂದ್ರ ಸಿಂಗ್ ಪಾಟೀಲ, ಬಳಿಕ ಹೊಲಗಳಲ್ಲಿ ಕಳೆ ಕೀಳುವುದು ಮತ್ತು ಕ್ರಿಮಿನಾಶಕ ಸಿಂಪಡಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು!

‘ಎಂಟು ವರ್ಷಗಳಿಂದ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ ₹ 10 ಸಾವಿರ ವೇತನ ಮತ್ತು ಮನೆ ಪಾಠದಿಂದ ಬರುವ ಹಣದಿಂದ ಕುಟುಂಬ ನಿರ್ವಹಿಸುತ್ತಿದ್ದೆ. ಆದರೆ, ಲಾಕ್‌ಡೌನ್ ಬಳಿಕ ವೇತನ ಇಲ್ಲ. ಈ ನಡುವೆ ಮದುವೆಯೂ ಆದೆ. ತಂದೆ– ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲಿದೆ. ಹೀಗಾಗಿ, ಕೂಲಿ ಕೆಲಸಕ್ಕೆ ಹೋಗಲೇಬೇಕಾಯಿತು. ಬೇಸಿಗೆಯಲ್ಲಿ ಎರಡು ವಾರ ನರೇಗಾ ಕೆಲಸ ಮಾಡಿದೆ. ಮಳೆಯಿಂದ ಆ ಕೆಲಸ ನಿಂತಿದೆ. ನಂತರ ಹೊಲಗಳಿಗೆ ಕಳೆ ಕೀಳಲು, ಔಷಧಿ ಸಂಪಡಿಸಲು ಹೋಗುತ್ತಿದ್ದೇನೆ. ನಿತ್ಯ ₹ 250 ಕೂಲಿ ಸಿಗುತ್ತಿದೆ. ಕೂಲಿ ಮಾಡಲು ಹಿಂಜರಿಕೆ ಇಲ್ಲ. ಆದರೆ, ಇಂಥ ಸಂಕಷ್ಟ ಬಂತಲ್ಲ ಎಂದು ನೆನಪಿಸಿಕೊಂಡಾಗ ದುಃಖ ಆಗುತ್ತಿದೆ’ ಎಂದು ಭಾವುಕರಾದರು.

ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿ ನೀಡುವ ಅಲ್ಪ ಸಂಬಳದಲ್ಲಿ ಸಂಸಾರ ನಡೆಸುತ್ತಿದ್ದ ಶಿಕ್ಷಕರು ಇಂದು ಸಾಲದ ಸುಳಿಯಲ್ಲಿ ಸಿಲುಕುವಂತಾಗಿದೆ. ನಿತ್ಯದ ಅವಶ್ಯಕ ವಸ್ತುಗಳನ್ನು ಖರೀದಿಸಲು ಹಿಂದು ಮುಂದು ನೋಡುವಂತಾಗಿದೆ. ಅತ್ತ ಶಾಲಾ ಆಡಳಿತ ಮಂಡಳಿಗೂ ಒತ್ತಡ ಹೇರಲಾಗದೆ, ಇತ್ತ ಮನೆಯ ಪರಿಸ್ಥಿತಿ ಎದುರಿಸಲು ಸಾಧ್ಯವಾಗದೆ ಎಷ್ಟೋ ಶಿಕ್ಷಕರು ಪ್ರಾಣವನ್ನೇ ಕಳೆದುಕೊಳ್ಳಬೇಕಾದ ಸ್ಥಿತಿ ಬಂದಿದೆ.

ಇದೀಗ ಆರನೇ ತರಗತಿಯಿಂದ ಶಾಲೆಗಳು ಮತ್ತೆ ಆರಂಭವಾಗಿವೆ. ಆಡಳಿತ ಮಂಡಳಿಯವರಿಗೆ ವಿದ್ಯಾರ್ಥಿಗಳ ಶುಲ್ಕ ಬರಲು ಆರಂಭವಾಗಿದೆ. ಬಾಕಿ ವೇತನ ಸೇರಿ ಎಲ್ಲಾ ವೇತನ ನೀಡಿದರೆ ಶಿಕ್ಷಕರಿಗೆ ಅನುಕೂಲವಾಗುತ್ತದೆ. ಆದರೆ, ಕೆಲವೇ ಕೆಲವು ಖಾಸಗಿ ಶಾಲೆಯವರು ತಮ್ಮ ಶಿಕ್ಷಕರಿಗೆ ವೇತನ ನೀಡುತ್ತಿದ್ದಾರೆ. ಬಹುತೇಕ ಶಾಲೆಯವರು ವೇತನ ನೀಡುತ್ತಿಲ್ಲ. ಪೋಷಕರು ಮಕ್ಕಳನ್ನು ಕಳುಹಿಸಲು ಹಿಂಜರಿಯುತ್ತಿದ್ದಾರೆ. ಆರ್ಥಿಕವಾಗಿ ಗಟ್ಟಿ ಇರುವ ಶಾಲಾ ಆಡಳಿತ ಮಂಡಳಿಗಳೂ ಸಂಬಳ ನೀಡುತ್ತಿಲ್ಲ ಎನ್ನುವ ನೋವು ಈ ಶಿಕ್ಷಕ ವರ್ಗದ್ದು.

ಅಂಕಿ-ಅಂಶಗಳು

20,581 ರಾಜ್ಯದಲ್ಲಿರುವ ಅನುದಾನರಹಿತ ಶಾಲೆಗಳು

45.32 ಲಕ್ಷ ಅನುದಾನರಹಿತ ಶಾಲೆಗಳಲ್ಲಿರುವ ವಿದ್ಯಾರ್ಥಿಗಳು

1.73 ಲಕ್ಷ ಅನುದಾನರಹಿತ ಶಾಲೆಗಳಲ್ಲಿರುವ ಶಿಕ್ಷಕರು

34,000 ಬೋಧಕೇತರ ಸಿಬ್ಬಂದಿ

ಕೋವಿಡ್ ನನ್ನ ಬದುಕನ್ನೇ ಕಸಿದುಕೊಂಡಿದೆ. ಕನಸುಗಳನ್ನೆಲ್ಲ ನುಚ್ಚುನೂರು ಮಾಡಿದೆ. ಕೆಲಸವಿಲ್ಲ, ಸಂಬಳವಿಲ್ಲ. ಒಂದು ಹೊತ್ತಿನ ಊಟಕ್ಕೂ ಪರದಾಡುವಂತಾಗಿದೆ

ಡಿ.ಕೆ. ಚಂದ್ರಯ್ಯ, ಚಿಕ್ಕಮಗಳೂರು

ಸರ್ಕಾರದಿಂದ ನೆರವು ಇಲ್ಲದೆ ಬೇರೆ ಮೂಲಗಳಿಂದ ಸಹಾಯವೂ ಸಿಗದೆ ಜೀವನ ಸಾಗಿಸುತ್ತಿರುವ ಖಾಸಗಿ ಶಾಲಾ ಶಿಕ್ಷಕರ ಗೋಳು ಹೇಳತೀರದು

ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷರು, ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಒಕ್ಕೂಟ (ರುಪ್ಸ)

ಧಾರವಾಡ ಸೃಜನಾ ರಂಗಮಂದಿರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೋಲ್ಕತ್ತಾದ ತಬಲಾ ವಾದಕಿ ರಿಂಪಾ ಶಿವಾ ಅವರಿಗೆ ‘ಯುವ’ ಪ್ರಶಸ್ತಿ, ಹಿಂದೂಸ್ತಾನಿ ಗಾಯಕ ಪಂ. ಎಂ. ವೆಂಕಟೇಶಕುಮಾರ ಅವರಿಗೆ ‘ರಾಜಗುರು’ ಪ್ರಶಸ್ತಿ ಹಾಗೂ ವಿಜಯಪುರದ ಕೊಳಲು ವಾದಕಿ ಕೃತಿಕಾ ಜಂಗಿನಮಠ ಅವರಿಗೆ ‘ಯುವ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಉದಯ ದೇಸಾಯಿ, ಮಾಧವ ಗಿತ್ತೆ, ಜಿಲ್ಲಾಧಿಕಾರಿ ನಿತೇಶ ಪಾಟೀಲ್, ನಿಜಗುಣ ರಾಜಗುರು, ಚಂದ್ರಕಾಂತ ಬೆಲ್ಲದ, ಶಾಸಕ ಅರವಿಂದ ಬೆಲ್ಲದ, ನ್ಯಾಯಮೂರ್ತಿ ವಿ. ಶ್ರೀಶಾನಂದ, ಮುರುಘಾಮಠದ ಪೀಠಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮೀಜಿ, ಪಟ್ಟದ ಗದಿಗಯ್ಯ ಸ್ವಾಮೀಜಿ, ಭಾರತಿದೇವಿ ರಾಜಗುರು ಇದ್ದಾರೆ

ಹಿಂದುತ್ವದ ಗುಣಗಾನ; ಕಾರ್ಯಕ್ರಮ ಮೊಟಕು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿಜಯನಗರ ಜಿಲ್ಲಾ ಉದ್ಘಾಟನಾ ಸಮಾರಂಭದ ನಿಮಿತ್ತ ಭಾನುವಾರ ರಾತ್ರಿ ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಗಾಯಕಿ ಲಕ್ಷ್ಮಿ ದುಬೆ ಅವರು ಹಿಂದುತ್ವದ ಗುಣಗಾನ ಮಾಡಿದ್ದರಿಂದ ಅವರ ಕಾರ್ಯಕ್ರಮವನ್ನು ಮೊಟಕುಗೊಳಿಸಲಾಯಿತು.

ಭಾನುವಾರ ರಾತ್ರಿ 11.30ಕ್ಕೆ ಲಕ್ಷ್ಮಿ ದುಬೆ ಅವರು, ‘ಹಿಂದುತ್ವಕ್ಕೆ ಜೈ’, ‘ಅಂಬೆ ಮಾತೆಗೆ ಜೈ’, ‘ಜಗದಂಬೆ ಮಾತೆಗೆ ಜೈ’ ಎಂಬ ಘೋಷಣೆಯೊಂದಿಗೆ ವೇದಿಕೆಗೆ ಬಂದರು. ‘ನಿರೀಕ್ಷಿಸಿ, ಉತ್ಸಾಹದಿಂದ ನಿರೀಕ್ಷಿಸಿ, ಶ್ರೀರಾಮನ ದರ್ಶನ ಪಡೆಯಲು ನಿರೀಕ್ಷಿಸಿ, ಭಗವಾಧ್ವಜದ ಎದುರು ಎಲ್ಲರೂ ತಲೆಬಾಗಿಸಲೇಬೇಕು. ಜೈಶ್ರೀರಾಮ, ಕಣಕಣದಲ್ಲೂ ಶ್ರೀರಾಮ

ಲಕ್ಷ್ಮಿ ದುಬೆ ಅವರು ಭಕ್ತಿಗೀತೆ ಹಾಡುವುದಾಗಿ ಹೇಳಿದ್ದರು. ಆದರೆ, ವೇದಿಕೆಯಲ್ಲಿ ಆಕ್ಷೇಪಾರ್ಹ ಪದ ಬಳಸಿದ್ದಾರೆ. ಅವರಿಂದ ವಿವರಣೆ ಕೇಳಲಾಗಿದೆ.

ಅನಿರುದ್ಧ್ ಪಿ. ಶ್ರವಣ್, ಜಿಲ್ಲಾಧಿಕಾರಿ, ವಿಜಯನಗರ ಜಿಲ್ಲೆ

ಇದ್ದಾನೆ. ಹಿಂದುತ್ವದ ದೀಪ ಬೆಳಗಿಸಲು ನನ್ನ ಅಣ್ಣ ಆನಂದ್ ಸಿಂಗ್ ನನಗೆ ಅವಕಾಶ ಕೊಟ್ಟಿದ್ದಾರೆ’ ಎಂದು ಹಾಡಿನ ಮಧ್ಯದಲ್ಲಿ ಹೇಳಿದರು.

‘ಶ್ರೀರಾಮನ ಮಂದಿರ ನಿರ್ಮಾಣದ ಬಗ್ಗೆ ಜನ ಹಲವು ವರ್ಷಗಳಿಂದ ಕನಸು ಕಾಣುತ್ತಿದ್ದರು. ಅದನ್ನು ಪ್ರಧಾನಿ ಮೋದಿಯವರು ಸಾಧ್ಯವಾಗಿಸಿದ್ದಾರೆ. ಮಂದಿರದಲ್ಲಿ ಶ್ರೀರಾಮನ ಪ್ರತಿಷ್ಠಾಪನೆ ಮಾಡಿದ್ದಾರೆ. ಮೋದಿಯವರಿಗೆ ಇಲ್ಲಿಂದಲೇ ಸಾಷ್ಟಾಂಗ ನಮಸ್ಕಾರ ಮಾಡುವೆ. ಭಾರತದಲ್ಲಿ ಇರುವ ಶತ್ರುಗಳನ್ನು ಒದ್ದೋಡಿಸುವ ಸಮಯ ಬಂದಿದೆ. ಜೈ ಶ್ರೀರಾಮ’ ಎಂದರು. ಅದಕ್ಕೆ ಕಾರ್ಯಕ್ರಮದ ಸಂಘಟಕರು ಆಕ್ಷೇಪ ವ್ಯಕ್ತಪಡಿಸಿ, ‘ಆಕ್ಷೇಪಾರ್ಹ ಪದ ಬಳಕೆ ಮಾಡಬಾರದು’ ಎಂದು ಸೂಚಿಸಿದರು.

ಆದರೆ, ಲಕ್ಷ್ಮಿ ದುಬೆ ಅವರು ಅವರ ಮಾತಿಗೆ ಕಿವಿಗೊಡಲಿಲ್ಲ. ‘ಎಲ್ಲೆಡೆ ಗೋಹತ್ಯೆ ನಿಲ್ಲಿಸುತ್ತೇವೆ. ಅದು ನಮ್ಮ ಸಂಕಲ್ಪ. ಅದು ಭಾರತದ ಘೋಷಣೆಯೂ ಹೌದು. ಭಾರತದ ಅಭಿಮಾನ ಹಿಂದೂ’ ಎಂದು ಹಾಡಿದರು. ಈ ವೇಳೆ ಬಹಳ ಸಿಟ್ಟಿಗಾದ ಜಿಲ್ಲಾಧಿಕಾರಿ ಅನಿರುದ್ಧ್ ಪಿ. ಶ್ರವಣ್, ಅವರ ಕಾರ್ಯಕ್ರಮ ಮೊಟಕುಗೊಳಿಸಲು ಆದೇಶಿಸಿದರು. ಮುಖ್ಯವೇದಿಕೆಯ ವಿದ್ಯುತ್ ದೀಪ ಆರಿಸಲಾಯಿತು. ಬಳಿಕ ಲಕ್ಷ್ಮಿ ದುಬೆ ಮತ್ತು ಅವರ ತಂಡದವರು ವೇದಿಕೆಯಿಂದ ನಿರ್ಗಮಿಸಿದರು.

ಪ್ರಜಾವಾಣಿ

ಫೋನ್-ಇನ್ ಕಾರ್ಯಕ್ರಮ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಸಾಧಕ ಬಾಧಕಗಳೇನು?

- ಶಿಕ್ಷಣ ನೀತಿಯ ಬಗ್ಗೆ ಸಂದೇಹಗಳಿವೆಯೇ?
- ನೂತನ ನೀತಿಯಿಂದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲಗಳೇನು?
- ಎನ್‌ಇಪಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವೇ–ಪೂರಕವೇ?
- ತರಾತುರಿಯಲ್ಲಿ ನೀತಿ ಜಾರಿ ಮಾಡಿದ್ದರ ಬಗ್ಗೆ ಆಕ್ಷೇಪ ಇದೆಯೇ?

ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ

ಡಾ.ಸಿ.ಎನ್. ಅಶ್ವತ್ಥನಾರಾಯಣ
ಉನ್ನತ ಶಿಕ್ಷಣ ಸಚಿವ

ಶಿಕ್ಷಣ ನೀತಿ ಬಗ್ಗೆ ಮಾತ್ರ ಪ್ರಶ್ನೆ ಕೇಳಲು ಅವಕಾಶ

07.10.2021, ಗುರುವಾರ

ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 12ರವರೆಗೆ

ದೂರವಾಣಿ ಸಂಖ್ಯೆ 08045557230

facebook LIVE facebook.com/prajavani.net

ಅತ್ಯಾಚಾರ ಯತ್ನ, ಬೆಂಕಿ ಹಚ್ಚಿ ಕೊಲೆ

ಸುರಪುರ (ಯಾದಗಿರಿ ಜಿಲ್ಲೆ): ವ್ಯಕ್ತಿಯೊಬ್ಬ ಮಧ್ಯರಾತ್ರಿ ಮಹಿಳೆಯ ಮನೆಗೆ ನುಗ್ಗಿ ಅತ್ಯಾಚಾರಕ್ಕೆ ಯತ್ನಿಸಿದ್ದು, ತಪ್ಪಿಸಿಕೊಳ್ಳಲು ಯತ್ನಿಸಿದ ಆಕೆಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ ಪ್ರಕರಣ ತಾಲ್ಲೂಕಿನ ಗ್ರಾಮವೊಂದರಲ್ಲಿ ನಡೆದಿದೆ.

‘ಗಂಗಪ್ಪ ಬಸಪ್ಪ ಅರಳೊಳ್ಳಿ ಎಂಬಾತ ಕೃತ್ಯವೆಸಗಿದ್ದು, ಆತನ ಪತ್ತೆ ಕಾರ್ಯ ನಡೆದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸಿ.ಬಿ. ವೇದಮೂರ್ತಿ ತಿಳಿಸಿದರು.

‘ಆರೋಪಿ ಮಹಿಳೆಯ ಮನೆಗೆ ಭಾನುವಾರ ಮಧ್ಯರಾತ್ರಿ 2 ಗಂಟೆಗೆ ನುಗ್ಗಿ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ತಪ್ಪಿಸಿಕೊಳ್ಳಲು ಯತ್ನಿಸಿದಾಗ, ಸಿಟ್ಟಿಗೆದ್ದ ಆತ ಮನೆ ಹೊರಗಡೆ ನಿಲ್ಲಿಸಿದ್ದ ಬೈಕ್‌ನಿಂದ ಪೆಟ್ರೋಲ್ ತಂದು ಸುರಿದು ಬೆಂಕಿ ಹಚ್ಚಿದ್ದಾನೆ. ತೀವ್ರ ಗಾಯಗೊಂಡ ಆಕೆಯನ್ನು ಸುರಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಂತರ ಕಲಬುರ್ಗಿ ಜಿಮ್ಸ್‌ಗೆ ಕರೆದೊಯ್ಯಲಾಯಿತು’ ಎಂದು ಅವರು ಹೇಳಿದರು.

‘ಮಹಿಳೆಗೆ ಶೇ 95ರಷ್ಟು ಸುಟ್ಟಗಾಯಗಳಾಗಿದ್ದವು. ಉಳಿಸುವ ಯತ್ನ ಫಲಕಾರಿಯಾಗಲಿಲ್ಲ’ ಎಂದು ಕಲಬುರ್ಗಿ ಜಿಲ್ಲಾ ಸರ್ಜನ್ ಡಾ. ಅಂಬಾರಾಯ ರುದ್ರವಾಡಿ ತಿಳಿಸಿದರು.

ಹಿಂದುಳಿದ ಸಮುದಾಯದವರನ್ನು ಗುರುತಿಸಿ, ಸ್ಥಾನ ನೀಡಿ: ಮಾಲೀಕಯ್ಯ

ಕಲಬುರ್ಗಿ: ‘ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಹಿಂದುಳಿದ ಸಮುದಾಯದ ಮುಖಂಡರ ಶ್ರಮ ಇದೆ. ಅವರನ್ನು ಗುರುತಿಸಬೇಕು. ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ ಸೋಮವಾರ ಅಸಮಾಧಾನ ಹೊರಹಾಕಿದರು. ಸಚಿವ ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲಿ ಇಲ್ಲಿ ನಡೆದ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಕರೋನ ಹೋರಾಟದಲ್ಲಿ ಕರ್ನಾಟಕಕ್ಕೆ ಅತ್ಯುತ್ತಮ ರಾಜ್ಯ ಪ್ರಶಸ್ತಿ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ **ಶ್ರೀ ಮನ್ಸುಕ್ ಮಾಂಡವಿಯಾ** ಅವರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವ ಕರ್ನಾಟಕದ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವ **ಡಾ ಕೆ. ಸುಧಾಕರ್**

ಕೋವಿಡ್ ವಿರುದ್ಧದ ನಮ್ಮ ಹೋರಾಟಕ್ಕೆ ಪ್ರತಿಫಲವಾಗಿ **‘ದೇಶದಲ್ಲೇ ಅತ್ಯುತ್ತಮ ರಾಜ್ಯ’ ಪ್ರಶಸ್ತಿಯನ್ನು ಕರ್ನಾಟಕಕ್ಕೆ ಇಂಡಿಯಾ ಟುಡೇ ಪುರಸ್ಕರಿಸಿದೆ.**

ನಮ್ಮ **ಆರೋಗ್ಯ ಸೇವೆ ಕಾರ್ಯಕರ್ತರು ಮತ್ತು ಫ್ರಂಟ್‌ಲೈನ್ ಕಾರ್ಯಕರ್ತರ** ತ್ಯಾಗ ಇಲ್ಲದಿದ್ದರೆ ಈ ಸಾಧನೆ ಸಾಧ್ಯವಾಗುತ್ತಿರಲಿಲ್ಲ ಮತ್ತು ಈ ಗೌರವ ಸಂಪೂರ್ಣವಾಗಿ ಅವರಿಗೇ ಸಲ್ಲುತ್ತದೆ.

ನಮಗೆ ಅಗತ್ಯ ಮಾರ್ಗದರ್ಶನವನ್ನು ನೀಡಿದ್ದಕ್ಕೆ ಗೌರವಯುತ **ಪ್ರಧಾನಿ ನರೇಂದ್ರ ಮೋದಿ ಜಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಾಂಕ್ರಾಮಿಕ ರೋಗ ಕಾಣಿಸಿಕೊಂಡಾಗಿನಿಂದ ಈವರೆಗೆ ನೀಡಿದ ಬೆಂಬಲ ಮತ್ತು ಮಾರ್ಗದರ್ಶನಕ್ಕಾಗಿ ಕೇಂದ್ರ ಆರೋಗ್ಯ ಸಚಿವ ಶ್ರೀ ಮನ್ಸುಕ್ ಮಾಂಡವಿಯಾ ಹಾಗೂ ನಮ್ಮ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ** ಅವರಿಗೆ ನಾನು ಧನ್ಯವಾದಗಳನ್ನು ತಿಳಿಸಲು ಬಯಸುತ್ತೇನೆ.

ಅಷ್ಟೇ ಅಲ್ಲ, **ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ** ಅವರಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನಾವೆಲ್ಲ ಒಗ್ಗೂಡಿ ಕರ್ನಾಟಕವನ್ನು ಕರೋನ ಮುಕ್ತವಾಗಿಸೋಣ! **ಧನ್ಯವಾದಗಳು!**

ಡಾ ಕೆ. ಸುಧಾಕರ್

ಲಖಿಂಪುರ–ಖೇರಿ ಹಿಂಸೆ: ದೇಶದಾದ್ಯಂತ ಪ್ರತಿಭಟನೆಗೆ ಸಜ್ಜಾದ ಕಾಂಗ್ರೆಸ್; ಪ್ರಧಾನಿ ಮೌನ ಪ್ರಶ್ನಿಸಿದ ಎಎಪಿ

ಸಚಿವರ ತಲೆದಂಡ, ಮಗನ ಸೆರೆಗೆ ಒತ್ತಡ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ, ಲಖಿಂಪುರ–ಖೇರಿಯಲ್ಲಿ ಹಿಂಸಾಚಾರಕ್ಕೆ ಕಾರಣ ಎಂಬ ಆರೋಪ ಹೊತ್ತಿರುವ ಆಶಿಶ್ ಮಿಶ್ರಾ ಅವರನ್ನು ಬಂಧಿಸಬೇಕು ಮತ್ತು ಅಜಯ್ ಅವರನ್ನು ವಜಾ ಮಾಡಬೇಕು ಎಂಬ ಆಗ್ರಹ ಸೋಮವಾರ ಬಲವಾಗಿ ಕೇಳಿ ಬಂದಿದೆ.

ಅಜಯ್ ಅವರನ್ನು ತಕ್ಷಣವೇ ವಜಾ ಮಾಡಬೇಕು ಮತ್ತು ಆಶಿಶ್ ಅವರನ್ನು ಬಂಧಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ. ಮೃತ ರೈತರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ಕೊಡಬೇಕು, ಲಖಿಂಪುರ–ಖೇರಿಗೆ ಹೋಗುತ್ತಿದ್ದಾಗ ಬಂಧನಕ್ಕೆ ಒಳಗಾದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಲಖಿಂಪುರ–ಖೇರಿ ಹಿಂಸಾಚಾರದ ಬಗ್ಗೆ ಪ್ರಧಾನಿಯ ಮೌನವನ್ನು ಎಎಪಿ ಪ್ರಶ್ನಿಸಿದೆ. ಅಜಯ್ ಮಿಶ್ರಾ ಅವರನ್ನು ತಕ್ಷಣವೇ ಸಚಿವ ಸ್ಥಾನದಿಂದ ವಜಾ ಮಾಡಿ, ನಿಷ್ಪಕ್ಷಪಾತ ತನಿಖೆ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಪ್ರಧಾನಿಯನ್ನು ಎಎಪಿ ಒತ್ತಾಯಿಸಿದೆ.

'ಬಹಳ ಸ್ಪಷ್ಟವಾಗಿ ಇದು ಹಾಥರಸ್ ಮಾದರಿ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಲಖಿಂಪುರ–ಖೇರಿ ಘಟನೆಯನ್ನು ಮುಚ್ಚಿ ಹಾಕಲು ಯತ್ನಿಸುತ್ತಿವೆ' ಎಂದು ಎಎಪಿ ವಕ್ತಾರ ಸೌರಭ್ ಭಾರದ್ವಾಜ್ ಹೇಳಿದ್ದಾರೆ.

ದೇಶದಾದ್ಯಂತ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಮಂಗಳವಾರ ಪ್ರತಿಭಟನೆ ನಡೆಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ. ದೆಹಲಿಯಲ್ಲಿರುವ ಉತ್ತರ ಪ್ರದೇಶ ಭವನದ ಮುಂದೆ ಕಾಂಗ್ರೆಸ್ ಮುಖಂಡರು ಸೋಮವಾರ ಪ್ರತಿಭಟನೆ ನಡೆಸಿದ್ದಾರೆ.

ನ್ಯಾಯಕ್ಕಾಗಿ ರೈತರು ನಡೆಸುತ್ತಿರುವ ಅಹಿಂಸಾತ್ಮಕ ಹೋರಾಟವು ಗೆಲ್ಲುವಂತೆ ಮಾಡುವುದಾಗಿ ಕಾಂಗ್ರೆಸ್ ಪಕ್ಷವು ಶಪಥ ಮಾಡಿದೆ. ವಿರೋಧ ಪಕ್ಷಗಳ ನಾಯಕರು ಲಖಿಂಪುರ–ಖೇರಿಗೆ ಪ್ರವೇಶಿಸುವುದನ್ನು ತಡೆದ ಉತ್ತರ ಪ್ರದೇಶ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಕೂಡ ಸೇರಿಕೊಂಡಿದೆ.

'ಪ್ರಿಯಾಂಕಾ, ನೀನು ಹಿಮ್ಮೆಟ್ಟುವುದಿಲ್ಲ ಎಂಬುದು ನನಗೆ ಗೊತ್ತು. ನಿನ್ನ ಧೈರ್ಯಕ್ಕೆ ಅವರು ಹೆದರುತ್ತಾರೆ. ನ್ಯಾಯಕ್ಕಾಗಿ ದೇಶದ ಅನ್ನದಾತರು ನಡೆಸುತ್ತಿರುವ ಅಹಿಂಸಾತ್ಮಕ ಹೋರಾಟಕ್ಕೆ ಗೆಲುವು ದೊರೆಯುವಂತೆ ನೋಡಿಕೊಳ್ಳೋಣ' ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು 'ನೋ ಫಿಯರ್' ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡಿದ್ದಾರೆ. 'ರೈತರನ್ನು ದಮನ ಮಾಡುವ, ಮುಗಿಸುವ ಪ್ರಯತ್ನದಲ್ಲಿ ಬಿಜೆಪಿ ಸರ್ಕಾರ ತೊಡಗಿದೆ' ಎಂದು ಪ್ರಿಯಾಂಕಾ ಹೇಳಿದ್ದಾರೆ.

ಲಖಿಂಪುರ–ಖೇರಿ ಪ್ರವೇಶಿಸಲು ರಾಜಕಾರಣಿಗಳಿಗೆ ಸರ್ಕಾರ ಅವಕಾಶ ಕೊಟ್ಟಿಲ್ಲ. ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಮತ್ತು ಪಂಜಾಬ್ ಉಪಮುಖ್ಯಮಂತ್ರಿ ಸುಖಬೀರ್ ಸಿಂಗ್ ರಂಧಾವ ಅವರನ್ನು ಕರೆತಂದ ವಿಮಾನಗಳಿಗೆ ಲಖನೌ ವಿಮಾನ ನಿಲ್ದಾಣದಲ್ಲಿ ಇಳಿಯಲು ಅನುಮತಿ ನಿರಾಕರಿಸಲಾಯಿತು. ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಹೆಲಿಕಾಪ್ಟರ್‌ಗೂ ಅನುಮತಿ ದೊರೆಯಲಿಲ್ಲ.

ಲಖಿಂಪುರ–ಖೇರಿಯಲ್ಲಿ ಇಂತಹ ಹಿಂಸಾಚಾರ ನಡೆದರೂ ಪ್ರಧಾನಿ ನರೇಂದ್ರ ಮೋದಿ ಅವರು ಏಕೆ ಮೌನವಾಗಿದ್ದಾರೆ ಎಂದು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಪ್ರಶ್ನಿಸಿದ್ದಾರೆ.

'ಉತ್ತರ ಪ್ರದೇಶಕ್ಕೆ ಹೋಗಲು ಪಾಸ್‌ಪೋರ್ಟ್ ಅಥವಾ ವೀಸಾ ಬೇಕಾಗಿದೆಯೇ? ಉತ್ತರ ಪ್ರದೇಶದಲ್ಲಿ ಜನರ ಹಕ್ಕುಗಳನ್ನು ರದ್ದು ಮಾಡಲಾಗಿದೆಯೇ' ಎಂದು ಅವರು ಕೇಳಿದ್ದಾರೆ.

ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತರನ್ನು ಸಚಿವ ಮಿಶ್ರಾ ಅವರು ಹಿಂಸಿಸುವುದಾಗಿ ಬೆದರಿಸಿದ್ದಾರೆ. ಅವರ ಮಗ ಕ್ರೂರವಾಗಿ ಕೊಲೆ ನಡೆಸಿರುವುದು ಕಾಕತಾಳೀಯ ಏನಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ತಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಮಿಶ್ರಾ ಅವರು ಲಖಿಂಪುರ–ಖೇರಿಗೆ ಹೋಗುವುದನ್ನು ತಡೆಯಲಾಗಿದೆ. ಅವರನ್ನು ಭಾನುವಾರ ರಾತ್ರಿಯಿಂದ ಗೃಹ ಬಂಧನದಲ್ಲಿ ಇರಿಸಲಾಗಿದೆ. ಇದನ್ನು ಖಂಡಿಸುವುದಾಗಿ ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಹೇಳಿದ್ದಾರೆ.

ಕಾಂಗ್ರೆಸ್ ಮುಖಂಡ ನವಜೋತ್ ಸಿಂಗ್ ಸಿಧು ಅವರ ನೇತೃತ್ವದಲ್ಲಿ ಪಂಜಾಬ್ ಶಾಸಕರು ಚಂಡಿಗಡದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ತಮ್ಮನ್ನು ಬಂಧಿಸಿ ಇರಿಸಲಾಗಿದ್ದ ಅತಿಥಿಗೃಹದ ಕೋಣೆಯಲ್ಲಿ ಪ್ರಿಯಾಂಕಾ ಗಾಂಧಿ ಅವರು ಕಸ ಗುಡಿಸಿದರು ಪಿಟಿಐ ಚಿತ್ರ

ಸಚಿವ ಮಿಶ್ರಾ ಪ್ರಚೋದನೆ?

ಲಖಿಂಪುರ–ಖೇರಿ ಜಿಲ್ಲೆಯಲ್ಲಿ ಅಜಯ್ ಮಿಶ್ರಾ ಅವರನ್ನು 'ಮಹಾರಾಜ' ಎಂದೇ ಸಂಬೋಧಿಸುತ್ತಾರೆ. ಅವರ ವಿರುದ್ಧ ಹಲವು ಅಪರಾಧ ಪ್ರಕರಣಗಳು ಹಿಂದೆ ದಾಖಲಾಗಿದ್ದವು.

ಲಖಿಂಪುರ–ಖೇರಿ ಕ್ಷೇತ್ರವನ್ನು ಲೋಕಸಭೆಯಲ್ಲಿ ಪ್ರತಿನಿಧಿಸುವ ಅವರನ್ನು ಇತ್ತೀಚಿನ ಪುನರ್ ರಚನೆಯ ಸಂದರ್ಭದಲ್ಲಿ ಕೇಂದ್ರ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಲಾಗಿತ್ತು. ತಮಗೆ ಕಪ್ಪು ಬಾವುಟ ತೋರಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಅವರು ಹೇಳಿದ್ದು ರೈತರನ್ನು ಕೆರಳಿಸಿತ್ತು.

'ನನ್ನ ನಿಜವಾದ ತಾಕತ್ತು ತೋರಿದರೆ ಈ ರೈತರು ಗ್ರಾಮ ಬಿಡಿ, ಜಿಲ್ಲೆಯನ್ನೇ ಬಿಟ್ಟು ಓಡಬೇಕಾಗುತ್ತದೆ' ಎಂದು ಮಿಶ್ರಾ ಅವರು ಕೆಲ ದಿನಗಳ ಹಿಂದೆ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದ್ದರು.

'ನಾನು ವಾಹನದಿಂದ ಕೆಳಗೆ ಇಳಿದರೆ ಅವರಿಗೆ (ರೈತರಿಗೆ) ಓಡುವುದಕ್ಕೂ ಸಮಯ ಸಿಗದು... ಇಲ್ಲಿರುವ ಜನರಿಗೆ ನನ್ನ ಹಿನ್ನೆಲೆ ತಿಳಿದಿದೆ' ಎಂದೂ ಹೇಳಿದ್ದರು.

2003ರಲ್ಲಿ ಕೊಲೆ ಪ್ರಕರಣವೊಂದರಲ್ಲಿಯೂ ಅವರ ಹೆಸರು ಕೇಳಿ ಬಂದಿತ್ತು. ಮತ್ತೆ ಅವರು ಖುಲಾಸೆಗೊಂಡಿದ್ದರು.

ರೈತರ ಮೇಲೆ ಸಚಿವರ ಆಕ್ರೋಶ

ಪ್ರತಿಭಟನೆ ನಡೆಸುತ್ತಿದ್ದ ರೈತರು ಬಿಜೆಪಿಯ ಮೂವರು ಕಾರ್ಯಕರ್ತರು ಮತ್ತು ವಾಹನದ ಚಾಲಕನನ್ನು ಹೊಡೆದು ಕೊಂದಿದ್ದಾರೆ. ಹಾಗಾಗಿ ರೈತರ ವಿರುದ್ಧವೂ ಪ್ರಕರಣ ದಾಖಲಿಸಬೇಕು ಎಂದು ಸಚಿವ ಅಜಯ್ ಮಿಶ್ರಾ ಒತ್ತಾಯಿಸಿದ್ದಾರೆ.

'ಜನರ ಗುಂಪಿನಲ್ಲಿ ಭಯೋತ್ಪಾದಕರೂ ಇದ್ದಿರಬೇಕು ಎಂಬ ಅನುಮಾನ ಇದೆ. ಬಿಜೆಪಿ ಕಾರ್ಯಕರ್ತರ ಮೇಲೆ ಲಾಠಿ ಮತ್ತು ಖಡ್ಗದಿಂದ ಹಲ್ಲೆ ನಡೆಸಲಾಗಿದೆ. ಅವರನ್ನು ಹೊಡೆದೇ ಕೊಲ್ಲಲಾಗಿದೆ' ಎಂದು ಮಿಶ್ರಾ ಆರೋಪಿಸಿದ್ದಾರೆ.

'ನನ್ನ ಮಗ ಸ್ಥಳದಲ್ಲಿ ಇರಲಿಲ್ಲ. ಒಂದು ವೇಳೆ ಇದ್ದಿದ್ದರೆ ಆತನನ್ನೂ ಕೊಂದು ಹಾಕುತ್ತಿದ್ದರು' ಎಂದು ಮಿಶ್ರಾ ಹೇಳಿದ್ದಾರೆ.

ಯಾರೂ ಹೊಣೆ ಹೊರಲ್ಲ: 'ಸುಪ್ರೀಂ'

ಲಖಿಂಪುರ–ಖೇರಿಯಲ್ಲಿ ನಡೆದಂತಹ ಘಟನೆಗಳು ನಡೆದಾಗ ಅದರ ಹೊಣೆಯನ್ನು ಯಾರೂ ಹೊತ್ತುಕೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರೈತರ ಪ್ರತಿಭಟನೆಯ ಸಂದರ್ಭದಲ್ಲಿ ನಡೆದ ಹಿಂಸಾಚಾರದಲ್ಲಿ ಎಂಟು ಮಂದಿ ಮೃತಪಟ್ಟಿರುವುದು ದುರದೃಷ್ಟಕರ ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಹೇಳಿದ್ದಕ್ಕೆ ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರ ಪೀಠವು ಹೀಗೆ ಪ್ರತಿಕ್ರಿಯೆ ಕೊಟ್ಟಿತು.

ಜಂತರ್ ಮಂತರ್‌ನಲ್ಲಿ ಸತ್ಯಾಗ್ರಹಕ್ಕೆ ಅವಕಾಶ ಕೊಡಬೇಕು ಎಂದು ಕೋರಿ ರೈತ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು.

ರೈತರ ಹತ್ಯೆಗೆ ಕಾರಣವಾದ ಲಖಿಂಪುರ–ಖೇರಿಯಲ್ಲಿ ನಡೆದ ಘಟನೆಗಳು ಯಾವುದೇ ನಾಗರಿಕ ಸಮಾಜದಲ್ಲಿ ಕ್ಷಮಾರ್ಹವಲ್ಲ. ಪ್ರತಿಭಟನೆನಿರತ ರೈತರು ನಮ್ಮ ಸೋದರರು

ವರುಣ್ ಗಾಂಧಿ, ಬಿಜೆಪಿ ಸಂಸದ

ಇಲ್ಲಿ ನಡೆಯುತ್ತಿರುವುದು ಪ್ರಜಾಪ್ರಭುತ್ವ ಅಲ್ಲ, ನಿರಂಕುಶಾಧಿಪತ್ಯ. ಬಿಜೆಪಿ ಭರವಸೆ ಕೊಟ್ಟದ್ದು ರಾಮ ರಾಜ್ಯವಾದರೆ, ಇಲ್ಲಿ ಈಗ ಇರುವುದು ಹತ್ಯಾರಾಜ್ಯ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ನಿರಂಕುಶಾಧಿಕಾರಿ ಮಾತ್ರ ಹೀಗೆ ಮಾಡಬಹುದು. ಪ್ರಜಾಪ್ರಭುತ್ವವನ್ನು ಕೊನೆಗೊಳಿಸಲು ಬಿಜೆಪಿ ಬಯಸಿದೆಯೇ? ನಾಗರಿಕ ಹಕ್ಕುಗಳ ಉಲ್ಲಂಘನೆಯು ಸಂವಿಧಾನ ವಿರೋಧಿ

ಅಶೋಕ್ ಗೆಹ್ಲೋಟ್, ರಾಜಸ್ಥಾನ ಮುಖ್ಯಮಂತ್ರಿ

ರೈತರ ಮೇಲೆ ನಡೆಸಿದ ಅಮಾನವೀಯ ಹಲ್ಲೆಯ ಸಂತ್ರಸ್ತರನ್ನು ರಾಜಕೀಯ ನಾಯಕರು ಭೇಟಿಯಾಗುವುದನ್ನು ತಡೆಯುವ ಹಕ್ಕು ಸರ್ಕಾರಕ್ಕೆ ಇಲ್ಲ

ಸೀತಾರಾಂ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

ಹಿಂಸಾಚಾರದಲ್ಲಿ ಭಾಗಿಯಾದವರು ರೈತರಲ್ಲ. ಅವರೆಲ್ಲರೂ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದವರು. ಎಡಪಂಥೀಯ ವಿಧಾನದಲ್ಲಿ ಘಟನೆ ನಡೆದಿದೆ

ಭಾರತೀಯ ಕಿಸಾನ್ ಸಂಘ, ಆರ್‌ಎಸ್‌ಎಸ್‌ನ ಅಂಗಸಂಸ್ಥೆ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸೆಲೆಬ್ರಿಟಿ LIVE
ಸಂಜೆ 4 ರಿಂದ 5
ಮುಖಾಮುಖಿ: ರಂಗ ನಿರ್ದೇಶಕಿ, ಚಿತ್ರನಟಿ 'ರಂಗಶಂಕರ'ದ ರೂವಾರಿ ಆರುಂಧತಿ ನಾಗ್ ಅವರ ಜೊತೆಗೆ

ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8: ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ
ಪ್ರಜಾವಾಣಿ ಕನ್ನಡ ಧ್ವನಿ

ರೈತ ನಾಯಕರಿಗೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ರೈತ ನಾಯಕರಾದ ರಾಕೇಶ್ ಟಿಕಾಯತ್ ಮತ್ತು ಯೋಗೇಂದ್ರ ಯಾದವ್ ಸೇರಿ ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ವಿವಿಧ ರೈತ ಸಂಘಟನೆಗಳ 43 ರೈತ ನಾಯಕರಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ನೀಡಿದೆ.

ರಸ್ತೆ ತಡೆ ಮಾಡುತ್ತಿರುವುದರಿಂದ ದೆಹಲಿ ಮತ್ತು ನೋಯ್ಡಾ ನಡುವೆ ಸಂಚಾರ ಮಾಡುವುದು ಪ್ರಯಾಸದಾಯಕವಾಗಿದೆ ಎಂದು ನೋಯ್ಡಾ ನಿವಾಸಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯ ವಿಚಾರಣೆ ನಡೆಸಬೇಕು ಎಂದು ಕೋರಿ ಹರಿಯಾಣ ಸರ್ಕಾರ ಅರ್ಜಿ ಸಲ್ಲಿಸಿತ್ತು. ಅರ್ಜಿ ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಎಂ. ಎಂ. ಸುಂದ್ರೇಶ್ ಅವರಿದ್ದ ಪೀಠ ಈ ಕುರಿತು ರೈತ ನಾಯಕರ ಪ್ರತಿಕ್ರಿಯೆಯನ್ನು ಕೇಳಿದೆ.

ರೈತರ ಜೊತೆ ಮಾತುಕತೆ ನಡೆಸಲು ಹರಿಯಾಣ ಸರ್ಕಾರ ಸಮಿತಿ ರಚಿಸಿದೆ. ಆದರೆ ರೈತರು ಮಾತುಕತೆಗೆ ಬರಲು ನಿರಾಕರಿಸುತ್ತಿದ್ದಾರೆ. ನೋಟಿಸ್ ಜಾರಿ ಮಾಡಿದರೆ ಮಾತುಕತೆಗೆ ಬರಲು ನಿರಾಕರಿಸಲು ಸಾಧ್ಯವಿಲ್ಲ ಎಂದು ಹರಿಯಾಣ ಸರ್ಕಾರದ ಪರವಾಗಿ ಕೋರ್ಟ್‌ಗೆ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಹರಿಯಾಣ ಸರ್ಕಾರದ ವಾದ ಆಲಿಸಿದ ಕೋರ್ಟ್ ಈ ಕುರಿತು ಪ್ರತಿಕ್ರಿಯೆ ನೀಡುವಂತೆ ರೈತ ನಾಯಕರಿಗೆ ಹೇಳಿದೆ. ಮುಂದಿನ ವಿಚಾರಣೆಯನ್ನು ಅ.20ಕ್ಕೆ ಕಾಯ್ದಿರಿಸಿದೆ.

ಶಹೀನ್ ಬಾಗ್ ಹೋರಾಟಕ್ಕೆ ಸಂಬಂಧಿಸಿಂತೆ 2020ರ ಅ.7ರಂದು ನೀಡಿದ್ದ ತೀರ್ಪನ್ನು ಉಲ್ಲೇಖಿಸಿದ ಕೋರ್ಟ್, ರಸ್ತೆಗಳನ್ನು ನಿರಂತರವಾಗಿ ಆಕ್ರಮಿಸಿಕೊಳ್ಳುವಂತಿಲ್ಲ ಎಂದಿದೆ.

ಮೃತರ ಪರಿವಾರಕ್ಕೆ ₹45 ಲಕ್ಷ ಪರಿಹಾರ

ಒಂದನೇ ಪುಟದಿಂದ

ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಜತೆಗೆ ಜಂಟಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು. ಮೃತರ ಕುಟುಂಬದ ಒಬ್ಬ ಸದಸ್ಯರಿಗೆ ಅವರ ಅರ್ಹತೆಗೆ ಅನುಸಾರವಾದ ಉದ್ಯೋಗ ನೀಡಲಾಗುವುದು ಮತ್ತು ಆರೋಪಿಗಳನ್ನು ಎಂಟು ದಿನಗಳ ಒಳಗೆ ಬಂಧಿಸಲಾಗುವುದು ಎಂದು ಅವರು ಹೇಳಿದರು.

ಹಿಂಸಾಚಾರ ನಡೆದ ತಿಕೋನಿಯ ಪಟ್ಟಣದಲ್ಲಿ ಭದ್ರತೆ ಮತ್ತು ಗಸ್ತು ಹೆಚ್ಚಿಸಲಾಗಿದೆ. ಜಿಲ್ಲೆಯ ಬೇರೆ ಎಲ್ಲಿಯೂ ಅಹಿತಕರ ಘಟನೆಗಳು ನಡೆದಿಲ್ಲ. ಭಾನುವಾರದ ಘಟನೆಗೆ ಸಂಬಂಧಿಸಿ ಏಳು ಮಂದಿಯನ್ನು ಈಗಾಗಲೇ ಬಂಧಿಸಲಾಗಿದೆ ಎಂದು ಪ್ರಶಾಂತ್ ಕುಮಾರ್ ಮಾಹಿತಿ ನೀಡಿದರು.

ಸಚಿವ ಅಜಯ್ ಮಿಶ್ರಾ ಮತ್ತು ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಿ ಅವರನ್ನು ತಡೆಯಲು ನೂರಾರು ರೈತರು ಭಾನುವಾರ ಯತ್ನಿಸಿದ್ದರು. ಈ ಗುಂಪಿನ ಮೇಲೆ ಮಿಶ್ರಾ ಅವರಿಗೆ ಸಂಬಂಧಿಸಿದ ಎಸ್‌ಯುವಿ ಹರಿದು ನಾಲ್ವರು ರೈತರು ಮೃತಪಟ್ಟರು. ನಂತರ ನಡೆದ ಹಿಂಸಾಚಾರಕ್ಕೆ ನಾಲ್ವರು ಬಲಿಯಾದರು. ರೈತರ ಮೇಲೆ ಹರಿದ ಕಾರನ್ನು ಅಜಯ್ ಮಿಶ್ರಾ ಮಗ ಆಶಿಶ್ ಮಿಶ್ರಾ ಚಾಲನೆ ಮಾಡಿದ್ದರು ಎಂದು ರೈತರು ಆರೋಪಿಸಿದ್ದಾರೆ.

ಪ್ರಿಯಾಂಕಾ ಸೇರಿ ಹಲವರ ಬಂಧನ

ಒಂದನೇ ಪುಟದಿಂದ

ಭದ್ರತಾ ಸಿಬ್ಬಂದಿಯು ತಮ್ಮನ್ನು ತಳ್ಳಿದ್ದಾರೆ, ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಇಬ್ಬರೂ ನಾಯಕರು ಆರೋಪಿಸಿದ್ದಾರೆ.

ಪ್ರಿಯಾಂಕಾ ಅವರು ಅತಿಥಿಗೃಹದಲ್ಲಿ ಸತ್ಯಾಗ್ರಹ ಆರಂಭಿಸಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ಪ್ರಿಯಾಂಕಾ ಬಂಧನ ಖಂಡಿಸಿ ಅತಿಥಿ ಗೃಹದ ಹೊರಗೆ ಪ್ರತಿಭಟನೆ ನಡೆಸಿದ್ದಾರೆ. ಅತಿಥಿ ಗೃಹದ ನೆಲವನ್ನು ಪ್ರಿಯಾಂಕಾ ಅವರು ಗುಡಿಸುತ್ತಿರುವ 42 ಸೆಕೆಂಡ್‌ನ ವಿಡಿಯೊವನ್ನು ಉತ್ತರ ಪ್ರದೇಶ ಕಾಂಗ್ರೆಸ್ ವಕ್ತಾರ ವಿಕಾಸ್ ಶ್ರೀವಾಸ್ತವ ಅವರು ಬಿಡುಗಡೆ ಮಾಡಿದ್ದಾರೆ.

ಈಶಾನ್ಯದಲ್ಲಿ ಡ್ರೋನ್‌ಗಳ ಮೂಲಕ ಕೋವಿಡ್ ಲಸಿಕೆ ವಿತರಣೆ

ನವದೆಹಲಿ(ಪಿಟಿಐ): ತಲುಪಲು ಕಷ್ಟಕರವಾದ ಈಶಾನ್ಯದ ದುರ್ಗಮ ಭೂಪ್ರದೇಶಗಳಿಗೆ ಡ್ರೋನ್ ಮೂಲಕ ಕೋವಿಡ್ -19 ಲಸಿಕೆ ಪೂರೈಸುವ ಸೌಲಭ್ಯಕ್ಕೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಸೋಮವಾರ ಚಾಲನೆ ನೀಡಿದರು.

ಐಸಿಎಂಆರ್‌ನ ಡ್ರೋನ್ ರೆಸ್ಪಾನ್ಸ್ ಅಂಡ್ ಔಟ್‌ರೀಚ್ ಇನ್ ನಾರ್ತ್ ಈಸ್ಟ್ (ಐ-ಡ್ರೋನ್), ಜೀವರಕ್ಷಕ ಕೋವಿಡ್ ಲಸಿಕೆಗಳು ಎಲ್ಲರಿಗೂ ತಲುಪುವಂತೆ ಮಾಡುವ ಒಂದು ವಿತರಣಾ ಮಾದರಿಯಾಗಿದೆ. ಆರೋಗ್ಯದಲ್ಲಿ 'ಅಂತ್ಯೋದಯ' ಎನ್ನುವ ಸರ್ಕಾರದ ಬದ್ಧತೆಗೆ ಅನುಗುಣವಾಗಿ ದೇಶದ ಕಟ್ಟಕಡೆಯ ನಾಗರಿಕರಿಗೂ ಆರೋಗ್ಯ ತಲುಪುವಂತೆ ಮಾಡಲಿದೆ ಎಂದು ಅಧಿಕಾರಿಗಳು ಹೇಳಿದರು.

ಮೇಕ್ ಇನ್ ಇಂಡಿಯಾ ಅಡಿ ತಯಾರಾದ ಡ್ರೋನ್ ಅನ್ನು ದಕ್ಷಿಣ ಏಷ್ಯಾದಲ್ಲಿ ಇದೇ ಮೊದಲ ಬಾರಿಗೆ ಕೋವಿಡ್ -19 ಲಸಿಕೆ ವಿತರಣೆಗೆ ಬಳಸಲಾಗಿದೆ.

'ರಾಜ್ಯಗಳು ₹50 ಸಾವಿರ ಪರಿಹಾರ ನೀಡಲೇಬೇಕು'

'ಮರಣ ಪ್ರಮಾಣಪತ್ರದಲ್ಲಿ ಕೋವಿಡ್ ಕಾರಣ ನೀಡಿಲ್ಲ ಎಂಬ ನೆಪ ಹೇಳಬೇಡಿ'

ನವದೆಹಲಿ (ಪಿಟಿಐ): ಮರಣ ಪ್ರಮಾಣಪತ್ರದಲ್ಲಿ ಸಾವಿಗೆ ಕಾರಣ ನೀಡಿಲ್ಲ ಎಂಬ ಕಾರಣ ಮುಂದಿಟ್ಟು ಕೋವಿಡ್‌ನಿಂದ ಮೃತಪಟ್ಟವರಿಗೆ ₹50 ಸಾವಿರ ಪರಿಹಾರ ನೀಡಿಕೆಗೆ ಯಾವ ರಾಜ್ಯವೂ ತಡೆ ಒಡ್ಡಬಾರದು ಎಂದು ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ಶಿಫಾರಸು ಮಾಡಿದಂತೆ ಕೋವಿಡ್‌ನಿಂದ ಮೃತಪಟ್ಟವರಿಗೆ ₹50 ಸಾವಿರ ಎಕ್ಸ್‌ಗ್ರೇಷಿಯಾ ಪರಿಹಾರ ನೀಡಬೇಕು. ಕೋವಿಡ್‌ನಿಂದ ಸಾವು ಸಂಭವಿಸಿದೆ ಎಂದು ಸೂಚಿಸಿ ಪ್ರಮಾಣಪತ್ರ ಸಲ್ಲಿಸಿದ 30 ದಿನಗಳ ಒಳಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಪರಿಹಾರ ಮೊತ್ತವನ್ನು ಪಾವತಿಸಬೇಕು ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ಪೀಠ ಹೇಳಿತು.

ಈ ಪರಿಹಾರ ಯೋಜನೆಯ ಬಗ್ಗೆ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಹೆಚ್ಚಿನ ಪ್ರಚಾರ ನೀಡಬೇಕು ಎಂದು ಸಹ ಪೀಠವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿತು.

ಎನ್‌ಡಿಎಂಎ ನಿಗದಿಪಡಿಸಿದ ಮಾರ್ಗಸೂಚಿಗಳನ್ನು ಒಪ್ಪಿಕೊಂಡ ಪೀಠ, ಈಗಾಗಲೇ ಮರಣ ಪ್ರಮಾಣಪತ್ರ ನೀಡಲಾಗಿದ್ದರೆ, ನೊಂದ ಕುಟುಂಬ ಸೂಕ್ತ ಪ್ರಾಧಿಕಾರವನ್ನು ಸಂಪರ್ಕಿಸಬಹುದಾಗಿದೆ ಎಂದು ಹೇಳಿತು.

ಆರ್‌ಟಿಪಿಸಿಆರ್ ಪರೀಕ್ಷೆಯಂತಹ ಅಗತ್ಯ ದಾಖಲೆಗಳೊಂದಿಗೆ ಮರಣ ಪ್ರಮಾಣಪತ್ರವನ್ನು ಬದಲಿಸಬಹುದಾಗಿದೆ ಎಂದು ಹೇಳಿದ ಪೀಠ, ನೊಂದ ಕುಟುಂಬಗಳಿಗೆ ಮತ್ತೂ ತೊಡಕು ಮುಂದುವರಿದಿದ್ದೇ ಆದರೆ ಕುಂದುಕೊರತೆ ಪರಿಹಾರ ಸಮಿತಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಸಲಹೆ ನೀಡಿತು.

'ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂಬ ಉಲ್ಲೇಖ ಮರಣ ಪ್ರಮಾಣಪತ್ರದಲ್ಲಿ ಇಲ್ಲ ಎಂಬ ಕಾರಣ ನೀಡಿ ಎಕ್ಸ್‌ಗ್ರೇಷಿಯಾ ಪರಿಹಾರವನ್ನು ನೀಡುವುದಿಲ್ಲ ಎಂದು ಯಾವ ರಾಜ್ಯವೂ ಹೇಳುವಂತಿಲ್ಲ. ದೂರು ಪರಿಹಾರ ಸಮಿತಿಯು ಮೃತ ರೋಗಿಗಳ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿ 30 ದಿನಗಳೊಳಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸೂಚನೆ ನೀಡಬೇಕು' ಎಂದು ಪೀಠ ನಿರ್ದೇಶನ ನೀಡಿತು.

ಅಮೆರಿಕದ ಇಬ್ಬರು ವಿಜ್ಞಾನಿಗಳಿಗೆ 'ವೈದ್ಯಕೀಯ ನೊಬೆಲ್'

ಸ್ಟಾಕ್‌ಹೋಮ್ (ಎಎಫ್‌ಪಿ) : ಅಮೆರಿಕದ ಸಂಶೋಧಕರಾದ ಡೇವಿಡ್ ಜೂಲಿಯಸ್ ಮತ್ತು ಪ್ರೊ.ಆರ್ಡೆಮ್ ಪಟಪೂಟಿಯನ್ ಅವರಿಗೆ ಜಂಟಿಯಾಗಿ 2021ರ ವೈದ್ಯಕೀಯ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ನೊಬೆಲ್ ಸಮಿತಿ ಸೋಮವಾರ ಹೇಳಿದೆ.

'ಚರ್ಮದಲ್ಲಿನ ಸ್ಪರ್ಶ ಮತ್ತು ತಾಪಮಾನ ಗ್ರಹಿಕೆ ವ್ಯವಸ್ಥೆಯ ಕುರಿತ ಸಂಶೋಧನೆಗಳಿಗಾಗಿ ಇಬ್ಬರಿಗೂ ಬಹುಮಾನವನ್ನು ನೀಡಲಾಗಿದೆ' ಎಂದು ನೊಬೆಲ್ ಪ್ರಶಸ್ತಿ ಸಮಿತಿಯ ತೀರ್ಪುಗಾರರು ತಿಳಿಸಿದ್ದಾರೆ.


ಡೇವಿಡ್ ಜೂಲಿಯಸ್

ಪ್ರೊ.ಆರ್ಡೆಮ್ ಪಟಪೂಟಿಯನ್

ಡೇವಿಡ್ ಜೂಲಿಯಸ್ ಅವರು ಸ್ಯಾನ್‌ಫ್ರಾನ್ಸಿಸ್ಕೊದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಪ್ರೊ.ಆರ್ಡೆಮ್ ಪಟಪೂಟಿಯನ್ ಅವರು ಕ್ಯಾಲಿಫೋರ್ನಿಯಾದ ಸ್ಕ್ರಿಪ್ಸ್ ಸಂಶೋಧನಾ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟಿದ್ದ 1,200 ಮಂದಿಯ ಪಿಂಡ ಪ್ರದಾನ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ಕೋವಿಡ್‌ನಿಂದ ಮೃತಪಟ್ಟಿದ್ದ 1200 ಮಂದಿಯ ಹೆಸರಿನಲ್ಲಿ ಸಚಿವ ಆರ್.ಅಶೋಕ ಸೋಮವಾರ ಪಟ್ಟಣ ಸಮೀಪದ ದೊಡ್ಡ ಗೋಸಾಯಿಘಾಟ್ ಬಳಿ ಸರ್ಕಾರದ ವತಿಯಿಂದ ಕಾವೇರಿ ನದಿಗೆ ಸೋಮವಾರ ಪಿಂಡ ಅರ್ಪಿಸಿದರು.

ಜೋತಿಷಿ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವ ವಹಿಸಿದ್ದರು. ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ ಬಳಿಕ ಮಾತನಾಡಿದ ಸಚಿವರು, 'ಯಾರೂ ಅನಾಥರಲ್ಲ, ಬದುಕಿದ್ದಾಗ ಎಲ್ಲರೂ ಸಮಾಜಕ್ಕಾಗಿ ಕೆಲಸ ಮಾಡಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸಿ ಪಿಂಡ ಪ್ರದಾನ ಮಾಡಲಾಗಿದೆ' ಎಂದರು.

ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್, ಜಿಲ್ಲಾಧಿಕಾರಿ ಎಸ್. ಅಶ್ವತಿ ಅವರೂ ಇದ್ದರು. ಜೂನ್ 2ರಂದು ಮಳವಳ್ಳಿ ತಾಲ್ಲೂಕು, ಬೆಳಕವಾಡಿ ಬಳಿ ಸಾಮೂಹಿಕವಾಗಿ ಅಸ್ಥಿ ವಿಸರ್ಜಿಸಲಾಗಿತ್ತು.

ಶ್ರೀರಂಗಪಟ್ಟಣ ಸಮೀಪದ ಗಂಜಾಂ ದೊಡ್ಡ ಗೋಸಾಯಿಘಾಟ್ ಬಳಿ ಕಾವೇರಿ ನದಿಯಲ್ಲಿ ಸಚಿವ ಆರ್ ಅಶೋಕ ಸೋಮವಾರ ಪಿಂಡ ವಿಸರ್ಜಿಸಿದರು

ದೆಹಲಿ ಕರ್ನಾಟಕ ಸಂಘ: ಸಿ.ಎಂ.ನಾಗರಾಜ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಕರ್ನಾಟಕ ಸಂಘದ 2021–22ನೇ ಸಾಲಿನ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಆಯ್ಕೆಗಾಗಿ ಭಾನುವಾರ ಚುನಾವಣೆ ನಡೆಯಿತು.

ಅಧ್ಯಕ್ಷರಾಗಿ ಸಿ.ಎಂ. ನಾಗರಾಜ, ಉಪಾಧ್ಯಕ್ಷರಾಗಿ ಡಾ.ಎಂ.ಎಸ್. ಶಶಿಕುಮಾರ್, ಪೂಜಾ ರಾವ್, ಪ್ರಧಾನ ಕಾರ್ಯದರ್ಶಿಯಾಗಿ ಆರ್. ರೇಣುಕುಮಾರ್, ಜಂಟಿ ಕಾರ್ಯದರ್ಶಿಗಳಾಗಿ ಬಿ.ನಾರಾಯಣ, ಸುಮಿತಾ ಮುರಗೋಡ, ಖಜಾಂಚಿಯಾಗಿ ರಾಧಾಕೃಷ್ಣ ಆಯ್ಕೆಯಾಗಿದ್ದಾರೆ.

ಸಿ.ಎಂ. ನಾಗರಾಜ

ಆರ್. ರೇಣು ಕುಮಾರ್

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪ್ರಭಾಕರ ಮಡ್ಡಿತೋಟ, ಎಂ.ಶಿವಪ್ಪ, ಎ.ಟಿ. ಶ್ರೀನಿವಾಸ, ಕೆ.ಎಸ್. ಮೂರ್ತಿ, ಮಾಲಿನಿ ಪ್ರಹ್ಲಾದ್, ವಿ.ನವೀನ ಕುಮಾರ್, ಸವಿತಾ ನೆಲ್ಲಿ, ಬಿ.ಎಸ್. ಅಶ್ವಿನಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ತೆರಿಗೆರಹಿತ ಪ್ರದೇಶದ ಹೂಡಿಕೆ ಮಾಹಿತಿ ಬಯಲು

ಒಂದನೇ ಪುಟದಿಂದ

ಕಂಪನಿಗಳು, ಟ್ರಸ್ಟ್‌ಗಳು, ಪ್ರಾಧಿಕಾರಗಳು ಹಾಗೂ ಸಂಸ್ಥೆಗಳನ್ನು ಕಡಿಮೆ ಅಥವಾ ತೆರಿಗೆ ರಹಿತವಾಗಿ ಸ್ಥಾಪಿಸುವ ಬಗ್ಗೆ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ವೃತ್ತಿಪರ ಸೇವೆಗಳನ್ನು ಈ ಸೇವಾದಾತ ಸಂಸ್ಥೆಗಳು ನೀಡುತ್ತವೆ.

'ತೆರಿಗೆಮುಕ್ತ ದೇಶಗಳಿಂದ ಪ್ರತಿವರ್ಷ ಜಾಗತಿಕವಾಗಿ ₹32 ಲಕ್ಷ ಕೋಟಿ ತೆರಿಗೆ ನಷ್ಟವಾಗುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಇದರಿಂದ ಹೆಚ್ಚು ಹಾನಿಗೊಳಗಾಗುತ್ತವೆ. ಈ ಪ್ರವೃತ್ತಿಯಿಂದ ಅಪರಾಧ ಮತ್ತು ಭ್ರಷ್ಟಾಚಾರ ಬೆಳೆಯುತ್ತದೆ' ಎಂದು ಖಾಸಗಿ ನಿಗಾ ಸಂಸ್ಥೆ ಆಕ್ಸ್‌ಫ್ಯಾಮ್ ಇಂಡಿಯಾ ಅಭಿಪ್ರಾಯಪಟ್ಟಿದೆ.

ತನಿಖೆಗೆ ಮುಂದಾದ ಸರ್ಕಾರ

ಪಂಡೋರ ದಾಖಲೆಗಳಲ್ಲಿ ಪ್ರಸ್ತಾಪಿಸಿದ ತೆರಿಗೆ ವಂಚನೆ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಕೇಂದ್ರ ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಅಧ್ಯಕ್ಷರ ನೇತೃತ್ವದಲ್ಲಿ ವಿವಿಧ ಸಂಸ್ಥೆಗಳ ಗುಂಪು (ಎಂಎಜಿ) ತನಿಖೆಯ ಮೇಲ್ವಿಚಾರಣೆ ನಡೆಸಲಿದೆ ಎಂದು ತಿಳಿಸಿದೆ. ಜಾರಿ ನಿರ್ದೇಶನಾಲಯ, ರಿಸರ್ವ್ ಬ್ಯಾಂಕ್ ಮತ್ತು ಹಣಕಾಸು ಗುಪ್ತಚರ ಘಟಕದ ಪ್ರತಿನಿಧಿಗಳು ಈ ತಂಡದಲ್ಲಿ ಇರಲಿದ್ದಾರೆ.

'ಈ ಬೆಳವಣಿಗೆಗಳನ್ನು ಸರ್ಕಾರ ಗಮನಿಸುತ್ತಿದ್ದು, ತನಿಖೆಯ ಬಳಿಕ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಈ ಪ್ರಕರಣಗಳಲ್ಲಿ ಪರಿಣಾಮಕಾರಿ ತನಿಖೆ ನಡೆಸುವ ಉದ್ದೇಶದಿಂದ ಸರ್ಕಾರವು ಇತರ ದೇಶಗಳೊಂದಿಗೆ ಸಮಾಲೋಚನೆ ನಡೆಸಲಿದೆ. ಸರ್ಕಾರವು ಅಂತರ-ಸರ್ಕಾರಿ ಗುಂಪಿನ ಭಾಗವಾಗಿದ್ದು, ತೆರಿಗೆ ವಂಚನೆಯಂತಹ ಕೃತ್ಯಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಇತರ ದೇಶಗಳ ಜೊತೆ ಸಹಯೋಗ ಸಾಧಿಸಲಿದೆ.

7ರವರೆಗೆ ಆರ್ಯನ್ ಖಾನ್ ಎನ್‌ಸಿಬಿ ವಶಕ್ಕೆ

ಮುಂಬೈ (ಪಿಟಿಐ): ಐಷಾರಾಮಿ ಹಡಗಿನಲ್ಲಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡ ಪ್ರಕರಣದಲ್ಲಿ ಭಾನುವಾರ ಬಂಧಿಸಲಾಗಿದ್ದ ನಟ ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಹಾಗೂ ಇನ್ನಿಬ್ಬರನ್ನು ಇದೇ 7ರವರೆಗೆ (ಗುರುವಾರ) ಎನ್‌ಸಿಬಿ ವಶಕ್ಕೆ ನೀಡಲಾಗಿದೆ.


ಆರ್ಯನ್ ಖಾನ್

ಆರ್ಯನ್, ಸಹ ಆರೋಪಿಗಳಾದ ಮುನ್ಮುನ್ ಧಮೇಚಾ ಹಾಗೂ ಅರ್ಬಾಜ್ ಮರ್ಚಂಟ್ ಅವರನ್ನು ಎನ್‌ಸಿಬಿ ಭಾನುವಾರ ಸಂಜೆ ಬಂಧಿಸಿತ್ತು. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಬಳಿಕ, ಆರೋಪಿಗಳನ್ನು ದಿನದಮಟ್ಟಿಗೆ ಎನ್‌ಸಿಬಿ ವಶಕ್ಕೆ ನೀಡಲಾಗಿತ್ತು.

'ಈ ಪ್ರಕರಣದ ಸಹ ಆರೋಪಿಗಳ ಬಳಿ ಮಾದಕ ವಸ್ತುಗಳು ಪತ್ತೆಯಾಗಿವೆ. ಈ ಮೂವರು ಆರೋಪಿಗಳು ಅವರೊಂದಿಗೇ ಇದ್ದುದರಿಂದ ತನಿಖೆ ಅಗತ್ಯ. ಇದು, ಪ್ರಾಸಿಕ್ಯೂಷನ್‌ಗೆ ಹಾಗೂ ತಾವು ಕಳಂಕಿತರಲ್ಲ ಎಂಬುದನ್ನು ಸಾಬೀತುಪಡಿಸಲು ಆರೋಪಿಗಳಿಗೆ ಇಬ್ಬರಿಗೂ ಅನುಕೂಲವಾಗಲಿದೆ' ಎಂದು ನ್ಯಾಯಾಲಯ ಹೇಳಿದೆ.

ಹೆಚ್ಚಿನ ವಿಚಾರಣೆಗಾಗಿ ಆರ್ಯನ್ ಅವರನ್ನು ಇದೇ 11 ರವರೆಗೆ ತಮ್ಮ ವಶಕ್ಕೆ ನೀಡುವಂತೆ ಎನ್‌ಸಿಬಿ ಮನವಿ ಮಾಡಿತ್ತು.ಆದರೆ, ತಮ್ಮ ಕಕ್ಷಿದಾರರು ಒಳ್ಳೆಯ ನಡತೆ ಹೊಂದಿದವರಾಗಿದ್ದು, ಅವರಿಗೆ ಅಪರಾಧ ಪ್ರಕರಣದ ಹಿನ್ನೆಲೆ ಇಲ್ಲ. ಅಲ್ಲದೇ, ದಾಳಿ ನಡೆದಾಗ ಅವರು ಓಡಿಹೋಗದೇ ಶೋಧ ಕಾರ್ಯಕ್ಕೂ ಸಹಕರಿಸಿದ್ದಾರೆ ಮತ್ತು ಅವರ ಬಳಿ ಯಾವುದೇ ಮಾದಕ ದ್ರವ್ಯ ಪತ್ತೆಯಾಗಿಲ್ಲ ಎಂದು ಆರ್ಯನ್ ಪರ ವಕೀಲ ಸತೀಶ್ ಮನಶಿಂಧೆ ವಾದಿಸಿದರು.

ಸಂಘಟಕರಿಂದ ವಿಶೇಷ ಆಹ್ವಾನಿತರಾಗಿ ಖಾನ್ ಪಾರ್ಟಿಯಲ್ಲಿ ಭಾಗಿಯಾಗಿದ್ದರು. ಅಲ್ಲಿ ವಶಪಡಿಸಿಕೊಂಡ ಮಾದಕ ಪದಾರ್ಥಗಳಿಗೂ ಅವರಿಗೂ ಸಂಬಂಧವಿಲ್ಲ. ವಿದೇಶದಲ್ಲಿ ಇದ್ದಾಗಲೂ ಅಂಥ ಪ್ರಕರಣದಲ್ಲಿ ಭಾಗಿಯಾಗಿಲ್ಲ ಎಂಬುದನ್ನು ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

ಆದರೆ, ಸಹ ಆರೋಪಿ, ಖಾನ್ ಸ್ನೇಹಿತ ಅರ್ಬಾಜ್ ಮರ್ಚಂಟ್ ಬಳಿ ಇದ್ದ ಆರು ಗ್ರಾಂ ಚರಸ್ ವಶಪಡಿಸಿಕೊಳ್ಳಲಾಗಿದೆ ಎಂಬುದನ್ನು ಎನ್‌ಸಿಬಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ನ್ಯಾಯಾಲಯದ ಗಮನಕ್ಕೆ ತಂದರು. ಇದಲ್ಲದೇ ಸಹ ಆರೋಪಿಗಳೊಂದಿಗೆ ಅವರು ನಡೆಸಿದ ವಾಟ್ಸ್‌ಆ್ಯಪ್ ಮಾತುಕತೆಯಲ್ಲಿ ಮಾದಕ ವಸ್ತು ಖರೀದಿಸುವ ಬಗ್ಗೆ ಪ್ರಸ್ತಾಪವಿರುವುದರಿಂದ, ಆ ಬಗೆಗೂ ತನಿಖೆಯಾಗಬೇಕಿದೆ ಎಂದು ಹೇಳಿದರು.

ಶಾರುಕ್ ಬೆಂಬಲಕ್ಕೆ ನಿಂತ ಬಾಲಿವುಡ್

ಚಿತ್ರ ನಿರ್ಮಾಪಕ ಹನ್ಸಲ್ ಮೆಹ್ತಾ, ನಟಿಯರಾದ ಪೂಜಾ ಭಟ್ ಹಾಗೂ ಸುಚಿತ್ರಾ ಕೃಷ್ಣಮೂರ್ತಿ ಶಾರುಕ್ ಖಾನ್ ಬೆಂಬಲಕ್ಕೆ ನಿಂತಿದ್ದಾರೆ. ಆರ್ಯನ್ ಬಂಧನವಾದ ಕೆಲವು ಗಂಟೆಗಳ ಬಳಿಕ ಸಲ್ಮಾನ್ ಖಾನ್ ಮಾತ್ರ, ಶಾರುಕ್ ಮನೆಗೆ ಭೇಟಿ ನೀಡಿದ್ದರು.

'ಮಕ್ಕಳು ಸಂಕಷ್ಟಕ್ಕೆ ಸಿಕ್ಕಾಗ ಪೋಷಕರಿಗೆ ಅತೀವ ನೋವಾಗುತ್ತದೆ. ಅದರಲ್ಲೂ ನ್ಯಾಯಾಲಯಕ್ಕಿಂತ ಮುನ್ನವೇ ಜನರು ಮಕ್ಕಳ ಬಗ್ಗೆ ತೀರ್ಪು ನೀಡುತ್ತಿರುವುದು ಇನ್ನಷ್ಟು ನೋವಿನ ಸಂಗತಿ' ಎಂದು ಮೆಹ್ತಾ ಟ್ವೀಟ್ ಮಾಡಿದ್ದಾರೆ.

'ಈ ಸಂಕಟದ ಸಮಯ ನೀಗುತ್ತದೆ. ನಿಮ್ಮ ಕಷ್ಟದಲ್ಲಿ ನಾನು ನಿಮ್ಮೊಂದಿಗೆ ಇರುತ್ತೇನೆ' ಎಂದು ಪೂಜಾ ಭಟ್ ಟ್ವೀಟ್ ಮಾಡಿದ್ದಾರೆ.

ಎನ್‌ಸಿಬಿ, ಬಾಲಿವುಡ್ ಗುರಿಯಾಗಿಸಿಯೇ ದಾಳಿ ನಡೆಸುತ್ತಿದೆ ಎಂದು ಹರಿಹಾಯ್ದಿರುವ ನಟಿ ಸುಚಿತ್ರಾ ಕೃಷ್ಣಮೂರ್ತಿ, ಮಕ್ಕಳು ಕಷ್ಟದಲ್ಲಿರುವುದನ್ನು ನೋಡುವುದಕ್ಕಿಂತ ದೊಡ್ಡ ಕಷ್ಟ ಪೋಷಕರಿಗೆ ಬೇರಾವುದೂ ಇಲ್ಲ ಎಂದು ಟ್ವೀಟ್ ಮಾಡಿದ್ದಾರೆ.

ಬಾಲಿವುಡ್ ಬಗೆಗಿನ ಮಾಧ್ಯಮ ತನಿಖೆಯ ಬಗ್ಗೆ ನಟ ಸುನಿಲ್ ಶೆಟ್ಟಿ ಅಸಮಾಧಾನ ವ್ಯಕ್ತಪಡಿಸಿದ್ದರು. 'ಆ ಮಗುವಿಗೆ ಉಸಿರಾಡಲು ಬಿಡಿ' ಎಂದು ಆರ್ಯನ್ ಬಂಧನಕ್ಕಿಂತ ಮೊದಲೇ ಮನವಿ ಮಾಡಿದ್ದರು.

'ಸಮಾಜ ಬಯಸಿದರೆ ಮೂರನೇ ಪೀಠ'

ವಿಜಯಪುರ: 'ಧರ್ಮದ ಆಧಾರದ ಮೇಲೆ ಪಂಚಮಸಾಲಿ ಸಮಾಜವನ್ನು ಕಟ್ಟಿ ಬೆಳೆಸಲು ಸಮಾಜದ 52 ಮಠಾಧೀಶರಿರುವ ಪಂಚಮಸಾಲಿ ಮಠಾಧೀಶರ ಒಕ್ಕೂಟ ಸ್ಥಾಪಿಸಲಾಗಿದೆ. ಸಮಾಜದವರು ಬಯಸಿದರೆ ಮೂರನೇ ಪೀಠ ಸ್ಥಾಪಿಸಲಾಗುವುದು' ಎಂದು ಒಕ್ಕೂಟದ ಅಧ್ಯಕ್ಷ, ಬಬಲೇಶ್ವರದ ಬೃಹನ್‌ಮಠದ ಡಾ.ಮಹಾದೇವ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಂಚಮಸಾಲಿ ಸಮಾಜದ ಈಗಿರುವ ಕೂಡಲಸಂಗಮ ಮತ್ತು ಹರಿಹರ ಪೀಠಗಳು ಧರ್ಮ ಮಾರ್ಗ ಬಿಟ್ಟು ತಮ್ಮದೇ ಆದ ರಾಜಕೀಯ ಲೆಕ್ಕಾಚಾರದಲ್ಲಿ ತೊಡಗಿವೆ. ಸಮಾಜಕ್ಕೆ ನ್ಯಾಯ ಒದಗಿಸಲು ಮಠಾಧೀಶರ ಒಕ್ಕೂಟ ಕಟ್ಟಿಕೊಂಡಿದ್ದೇವೆ' ಎಂದರು.

'ಪಂಚಮಸಾಲಿ ಸಮಾಜವು ವೀರಶೈವ ಲಿಂಗಾಯತ ಸಮಾಜದ ಒಂದು ಪಂಗಡ. ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯ ಧಾರ್ಮಿಕ ಸಂಪ್ರದಾಯಗಳನ್ನು ಬಿಟ್ಟು ನಾಸ್ತಿಕರಾಗುತ್ತಿದ್ದಾರೆ. ಇವರನ್ನು ಧರ್ಮ, ಅಧ್ಯಾತ್ಮದ ಮಾರ್ಗದಲ್ಲಿ ಕರೆದುಕೊಂಡು ಹೋಗುವ ಉದ್ದೇಶ ನಮ್ಮ ಒಕ್ಕೂಟದ್ದಾಗಿದೆ' ಎಂದರು.

'ಅಕ್ಟೋಬರ್ 23ರಂದು ಜಮಖಂಡಿಯಲ್ಲಿ 100 ಬಾಲಕರಿಗೆ ಲಿಂಗದೀಕ್ಷೆ, ಅಯ್ಯಾಚಾರ ನೀಡಲಾಗುವುದು' ಎಂದು ಹೇಳಿದರು.

ಒಕ್ಕೂಟದ ಕಾರ್ಯದರ್ಶಿಯಾದ ಮನಗೂಳಿ ಹಿರೇಮಠದ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ, ಜಮಖಂಡಿ ತಾಲ್ಲೂಕಿನ ಕಮರಿಮಠದ ಸಿದ್ಧಲಿಂಗ ದೇವರು, ಅಲಗೂರಿನ ಶಾಂತಮೂರ್ತಿ ಸ್ವಾಮೀಜಿ, ಬುರಾಣಾಪುರ ಆರೂಡ ಆಶ್ರಯಮದ ಯೋಗೇಶ್ವರಿ ಮಾತಾಜಿ ಮತ್ತು ಬಸವರಾಜ ಕಾನಗೊಂಡ ಇದ್ದರು.

ಪಂಚಮಸಾಲಿ ಮಠಾಧೀಶರ ಒಕ್ಕೂಟದ ಬಗ್ಗೆ ಕೆಲವರು ಲಘುವಾಗಿ ಮಾತನಾಡುತ್ತಿದ್ದಾರೆ. ಒಕ್ಕೂಟವನ್ನು ಲಘುವಾಗಿ ಪರಿಗಣಿಸಿದರೆ ನಾವು ಏನು ಎಂಬುದನ್ನು ಮಾಡಿ ತೋರಿಸುತ್ತೇವೆ

ಡಾ.ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷ, ಪಂಚಮಸಾಲಿ ಮಠಾಧೀಶರ ಒಕ್ಕೂಟ

ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ

ಶುಚಿತ್ವದ ಕಲ್ಪನೆಗಳು ಇಂದು ಎಂದಿಗಿಂತ ಹೆಚ್ಚು ಪ್ರಸ್ತುತ. ಹೆಜ್ಜೆಹೆಜ್ಜೆಗೆ ಕೈ ತೊಳೆದು ರೋಗ ಗೆಲ್ಲುವ ತವಕ. ಶುಚಿತ್ವ ಮತ್ತು ಆರೋಗ್ಯದ ದೇಸೀ ಚಿಂತನೆಗಳೆಂತಿವೆ? ಓದಿರಿ.

ಡಾ. ಸತ್ಯನಾರಾಯಣ ಭಟ್ ಪಿ.

'ಅಣುರೇಣು ತೃಣ ಕಾಷ್ಠ ಕಾರಣ ಗೋವಿಂದ ನಿರ್ಮಲಾತ್ಮಕನಾಗಿ ಇರುವುದೇ ಆನಂದ, ಗೋವಿಂದಾ ನಿನ್ನ ನಾಮವೇ ಚಂದಾ...' ಪುರಂದರದಾಸವರೇಣ್ಯರ ಹಾಡಿನ ಸೊಲ್ಲು ಎಷ್ಟು ಪರಿಪೂರ್ಣ! ಅಂತಹ ನಿರ್ಮಲ ಆತ್ಮಚಿಂತನೆ ಮತ್ತು ಮನಃಸ್ಥಿತಿಯಿಂದ ಪರಿಪೂರ್ಣ ಆನಂದವನ್ನು ಸಂಪಾದಿಸುವ ಸರಳ ವಿಧಾನ ದಾಸರು ಬರೆದಿರಿಸಿದರು. ಧ್ಯಾನದ ಸುಗಮ ಹಾದಿಗೆ ದಾಸರು ಒತ್ತು ನೀಡಿದರು. ಇದು ಯಾರಿಗೂ ಅಸಾಧ್ಯವಲ್ಲ. ಅಸಾಧುವೂ ಖಂಡಿತ ಅಲ್ಲ. ಅಂತಹ ಹಾದಿಯ ಆಯ್ಕೆಯೊಂದೇ ಹಿತಾಯು, ಸುಖಾಯುಷ್ಯದ ಸೋಪಾನ. ಯೋಗ ಮತ್ತು ಧ್ಯಾನದ ಸುಲಭ ಹಾದಿ ನಮ್ಮ ನೆಲದ್ದು. ಆತ್ಮ-ಪರಮಾತ್ಮರ ಸಂಯೋಗದ ಸುಲಭ ಸೋಪಾನ. ಅರೆ ತಾಸಿನ ಧ್ಯಾನದಿಂದ ಎಷ್ಟೆಷ್ಟೋ ಲಾಭಗಳಿವೆ. ಪ್ರಾಣಾಯಾಮದಂತಹ ಸರಳ ವಿಧಾನಗಳಿವೆ. ಉಸಿರಾಟದ ಗತಿಯ ನಿಯಂತ್ರಣದಿಂದ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ.

ಸ್ನಾನಮೂಲಂ ಕ್ರಿಯಾ ಸರ್ವಂ ಎನ್ನುತ್ತದೆ ಮನುಸ್ಮೃತಿ. ಅಂದರೆ ಎಲ್ಲ ದಿನವೂ ಎಲ್ಲ ಕಾಲವೂ ಸ್ನಾನದ ಮೂಲಕವೇ ದಿನಾರಂಭವಾಗಲಿ. ಹೊಟ್ಟೆ ತುಂಬ ಉಂಡು ಸ್ನಾನ ಮಾಡುವುದು ಅನುಚಿತ. ಅನಾರೋಗ್ಯದ ಹಾದಿ ಖಂಡಿತ. ಉಂಡಾಗ ದೇಹದ ರಕ್ತಪರಿಚಲನೆ ಉದರದೆಡೆಗೆ ಸುಗಮಗೊಳುವುದು ಸಹಜ ಪ್ರಕ್ರಿಯೆ. ಆದರೆ ಸ್ನಾನದ ಅನಂತರ ರಕ್ತಪರಿಚಲನೆ ದೇಹದ ಮೂಲೆ ಮೂಲೆ ಕಡೆಗೆ ಧಾವಿಸುವುದು ಸಹಜ. ತಿಂಡಿಯ ಅನಂತರ, ಉಂಡೊಡನೆ ಸ್ನಾನದ ಮನೆಗೋಡುವಿರೇ? ಆರೋಗ್ಯಕ್ಕೆ ಖಂಡಿತ ಅಪಾಯವಿದೆ ಎಂಬುದು ನಮ್ಮ ನೆಲದ ತಿಳಿವಳಿಕೆ. ಉದರಗತ ರಕ್ತಪರಿಚಲನೆ ಕುಂಠಿತವಾದೊಡನೆ ಜೀರ್ಣಪ್ರಕ್ರಿಯೆಗೆ ಲೋಪ ಸಹಜ. ಎರಡು ಹೊತ್ತು ಮಿಂದವನು ಖಂಡಿತ ನಿರೋಗಿ.

ಸ್ಯಾನಿಟೈಸರ್ ಎಂಬುದು ಇಂದು ಎಳೆಗೂಸಿನಿಂದ ಹಿರಿ ಹರೆಯದ ಮಂದಿಗೂ ತಿಳಿದ ದ್ರವ. ಏನೇ ಮುಟ್ಟಿದರೂ ಮತ್ತೆ ಮತ್ತೆ ಹಾಕಿ ಉಜ್ಜಿಕೊಳ್ಳುವ ಚಪಲ ಗೀಳುತನ ಅರಂಭವಾಗಿದೆ. ಮುಂಗೈಗೆ ಹಿಡಿಯುವ ಥರ್ಮಾಮೀಟರ್ ಮತ್ತು ಅಂಗೈಗೆ ಪೂಸುವ ನೀಲಿ ದ್ರವದ ರಾಸಾಯನಿಕ ಜನರಿಗೆ ಇಂದು ಸಹಜ ಎನಿಸಿಬಿಟ್ಟಿದೆ. ದಂಡಾಣು ನಾಶಕ ಎಂದು ಭಾವಿಸಲಾಗುವ ರಾಸಾಯನಿಕಗಳ ನ್ಯಾನೋ ಅಂಶಗಳು ಉದರ ಸೇರಿದರೆ ವಿಷವಷ್ಟೇ ಅಲ್ಲ. ಅವುಗಳು ನಮ್ಮ ಕರುಳಿನ ಉಪಕಾರಿ ಬ್ಯಾಕ್ಟೀರಿಯ ಕಾಲೊನಿಯನ್ನು ಕುಲಗೆಡಿಸುತ್ತವೆ. ಹೊಸ ಕಾಯಿಲಿಗೆ ಹಾದಿ ಮಾಡುತ್ತವೆ. ರಾಸಾಯನಿಕಗಳ ಸತತ ಸಂಪರ್ಕದಿಂದ ಉಗುರು, ಬೆರಳು ತುದಿಗಳ ಒಗ್ಗದಿಕೆ (ಅಲರ್ಜಿ) ಪ್ರಕ್ರಿಯೆಗಳು ಕೂಡ ಅನೇಕರಿಗೆ ಉಂಟಾಗಹತ್ತಿವೆ. ಮಕ್ಕಳು ಕಿವಿ, ಕಣ್ಣು ಮುಟ್ಟಿಕೊಂಡರಂತೂ ಉರಿ, ಉರಿಯೂತ ಸಂದರ್ಭಗಳು ಹೇರಳ. ಅದಕ್ಕೆ ಚಿಕಿತ್ಸೆ ಪಡೆಯಬೇಕಾದ ಹೊಸ ಪ್ರಮೇಯಗಳು ಹಲವು. ಮನೆಗೆಲಸಗಿತ್ತಿಯರಿಗೆ, ಹೋಟೆಲ್ ಕಾರ್ಮಿಕರಿಗೆ, ಗೃಹಿಣಿಯರು ಬಳಸುವ ಸಾಬೂನು, ಮಾರ್ಜಕಗಳೂ ಸಹ ಇಂತಹ ಒಗ್ಗದಿಕೆಯ ಪರಿಧಿಯಿಂದ ಹೊರತಾಗಿಲ್ಲ. ಬೂದಿ ಬಳಸಿ ಪಾತ್ರೆ ಬೆಳಗುತ್ತಿದ್ದ ನಮ್ಮಮ್ಮನ ಬೆರಳು ಎಂದೂ ತುರಿಗಜ್ಜಿ ಪಡೆದಿಲ್ಲ. ತಾಜಾ ಗೋಮಯ ಬಳಸಿ ಸಾರಿಸಿದ ಅಂಗಳದ ಶುಚಿತ್ವ ಎಂದೂ ಮಾಸುತ್ತಿರಲಿಲ್ಲ. ಬದಲಾಗಿ ಚೇತೋಹಾರಿಯಾಗಿತ್ತು ಸಹ. ದಿನಗಟ್ಟಲೆ ಅದರ ಸೊಂಪುತನ ಉಳಿಯುತ್ತಿತ್ತು. ನೀರಿಗಿಂತ ಮಿಗಿಲಾದ ಶುಚಿತ್ವಕಾರಕ ವಸ್ತು ಬೇರಿಲ್ಲ. ಅಷ್ಟೂ ಭಯವೇ? ಬಿಸಿ ನೀರು ಬಳಸಿರಿ. ಕೈತೊಳೆದುಕೊಳ್ಳಿರಿ. ಅತಿಯಾದ ಸ್ಯಾನಿಟೈಸರ್ ಬಳಕೆ ಬಗ್ಗೆ ಎಚ್ಚರ ಇರಲಿ.

ಉಪವಾಸದಿಂದ ಆರೋಗ್ಯ ಎಂದು ಪ್ರತಿಪಾದಿಸಿದವನ ಹೆಸರು ಓ.ಯೋಷಿನೊರಿ. ಈ ಜಪಾನೀ ಜೀವಕಣವಿಜ್ಞಾನಿ ಬಯಲಾಗಿಸಿದ ಈ ಸಂಗತಿಗೆ ನೊಬೆಲ್ ಪ್ರಶಸ್ತಿ ದಕ್ಕಿದ ಸುದ್ದಿ ಢಣಾಡಂಗುರವಾಗಿದೆ. ಲಂಘನ ಎಂಬ ಅಪ್ಪಟ ದೇಸೀ ಚಿಂತನೆಯಿದು. ಕಾಯಿಲೆಗಳಲ್ಲಿ ಎರಡು ವಿಧ. ಮೊದಲಿನದು ಅತಿಯಾಗಿ ಕೃಶತ್ವಗೊಳುವ ಕ್ಷಯದಂತಹ ರೋಗಗಳ ಸಮೂಹ. ಅಲ್ಲಿ ಕುಪೋಷಣೆ, ಮಿಥ್ಯಾಪೋಷಣೆಯದೇ ಸಿಂಹಪಾಲು. ಎರಡನೆಯದು ಅತಿ ಪೋಷಣೆ. ಸಂತರ್ಪಣಜನ್ಯ ವ್ಯಾಧಿ ಎಂಬ ವರ್ಗವದು. ಅತಿ ಬೊಜ್ಜು, ಮಧುಮೇಹ, ಏರಿದ ರಕ್ತದೊತ್ತಡ, ಮೂತ್ರಪಿಂಡದ ವೈಫಲ್ಯತೆಗಳಂತಹ ರೋಗಗಳ ದಂಡು ಅಧಿಕಾಧಿಕ ಉಂಡು ಬರಿಸಿಕೊಳ್ಳುವ ವರ್ಗದವು. ಈಗ ನೀವೇ ನಿರ್ಧರಿಸಿರಿ. ಏಕಾದಶಿಯ ಉಪವಾಸದ ಹಿಂದೆ ದೇಹಶುದ್ಧಿಯ ಸಬಲ, ಸಫಲ ಉಪಾಯವಿದೆ. ಮನಸ್ಸನ್ನು ಹಿಡಿತದಲ್ಲಿಡಬೇಕೆ? ಉಪವಾಸ ಮಾಡಿರಿ. ಗಾಂಧೀಜಿಯ ಅತಿ ದೊಡ್ಡ ಅಸ್ತ್ರವಿದಾಗಿತ್ತು. ಲಂಘನಂ ಪರಮೌಷಧಂ ಸೊಲ್ಲಿನಲ್ಲಿದೆ ಇದೇ ಧ್ಯೇಯ. ದೇಹದ ವಿಷಗಳೆಲ್ಲ ಕರಗಿ ಹೋಗುವ ಪಥ (ಸ್ರೋತಸ್ಸು) ಶುಚಿಗೊಳಿಸುವ ಉಪವಾಸ ದೇಹಶುದ್ಧಿಯ ಉತ್ತಮ ವಿಧಾನ. ಪಥ್ಯ ಎಂಬ ಪದ ಸುಪರಿಚಿತ. ಪಥ ಎಂದರೆ ಹಾದಿ ಅಥವಾ ಸ್ರೋತಸ್ಸು. ಅದನ್ನು ಶುದ್ಧೀಕರಿಸಲು ನಮಗೆ ಪಥ್ಯ ಅತ್ಯಗತ್ಯ. ಅರಿತು ಉಣುವ, ಕಾಲ ಕಾಲಕ್ಕೆ ಉಪವಾಸವಿರುವ ವಿಧಿವಿಧಾನಗಳವು. ಇದನ್ನು ಪ್ರಾಯಶ್ಚಿತ್ತವೆಂದಾದರೂ ಕರೆಯಿರಿ. ರೋಗ ತಡೆಯ ಹಾದಿಯಿದು. ಖಂಡಿತ ಇದು ಒಳ ಅಂಗಗಳ ಸಂಪೂರ್ಣ ವಿಶ್ರಾಂತಿ ಎಂದು ಬಗೆಯಿರಿ. ಪರಿಣಾಮ ಒಂದೇ. ದೇಹದ ಅನಗತ್ಯ ವಿಷ ವಸ್ತು ಸಂಚಯನಕ್ಕೆ ಪೂರ್ಣ ವಿರಾಮ. ದಸರೆಯ ಹತ್ತು ದಿನಗಳ ಆಚರಣೆಯಲ್ಲಿ ಉಪವಾಸ, ಲಘೂಪಹಾರಕ್ಕಿದೆ ಬಹಳ ಮಹತ್ವ. ಪೂಜಾಕೈಂಕರ್ಯಗಳಷ್ಟೇ ಅದು ಪ್ರಮುಖ. ಉಪವಾಸವಿರಿ. ಕಾಯ ಮತ್ತು ಚಿತ್ತಶುದ್ಧಿಯನ್ನನುಭವಿಸಿರಿ. ಎರಡೇ ಸಾಲಿನ ಸರ್ವಜ್ಞ ವಚನದ ಅರ್ಥ ತಿಳಿದರೆ ಆರೋಗ್ಯ ಖಂಡಿತ. 'ಹಸಿವಿಲ್ಲದುಣಬೇಡ, ಹಸಿದು ಮತ್ತಿರಬೇಡ, ಬಿಸಿಗೂಡಿ ತಂಗೂಳನುಣಬೇಡ, ವೈದ್ಯನಾ ಬೆಸಸಲೇ ಬೇಡ ಸರ್ವಜ್ಞ!'

ಮೂರು ಸಾವಿರ ವರ್ಷ ಹಿಂದಿನ ಆಯುರ್ವೇದ ಸಂಹಿತೆಯ ಸಾರವೇ ಆಚಾರ ರಸಾಯನ. ಅಂದರೆ ಸಾವು, ಮುಪ್ಪು ಮುಂದೂಡುವ ಹಾದಿ. ಹಿತಾಹಾರ, ಹಿತಮಿತ ಆಚರಣೆ, ಒಳಿತು ಕೆಡುಕುಗಳ ಸಮೀಕ್ಷ್ಯಕಾರಕ ಭಾವ, ವಿಷಯ ಸುಖಗಳಿಂದ ವಿಮುಕ್ತತೆ, ದಾನಶೀಲತೆ, ಸತ್ಯಪರತೆ, ಕ್ಷಮಾಗುಣದಿಂದ ರೋಗ ಬಾರದ ಸ್ಥಿತಿ ಖಂಡಿತ!

(ಲೇಖಕರು ಆಯುರ್ವೇದ ವೈದ್ಯರು)

ಸ್ನಾನ

ಸ್ನಾನದಿಂದ ಸಕಲ ಶ್ರಮ ಪರಿಹಾರ. ಋತುಸುಖದ ನೀರು ಅಂದರೆ ದೀವಳಿಗೆಯಂ ಕುಳಿರು ಚಳಿಗಿರಲಿ ಹದ ಬಿಸಿಯ ನೀರು ಸ್ನಾನ. ವೈಶಾಖದ ಧಗೆಗಿರಲಿ ಮೈಗೆ ತಂಪೆರವ ಋತುಸುಖದ ಜಳಕದ ಪುಳಕ. ಸೀಗೆ, ಬಾಗೆಯ ಸಂಗಡ ಕಡಲೆ, ಹೆಸರಿನ ಹಿಟ್ಟಿನ ಸ್ನಾನಚೂರ್ಣಗಳೇ ಹಿಂದಿನವರ ಚರ್ಮ-ಕೂದಲಿನ ಆರೋಗ್ಯದ ಚಮತ್ಕಾರ. ಅಂದು ಅದು ಸಲ್ಲುತ್ತಿತ್ತು. ಇಂದೇಕೆ ಅದು ಸಲ್ಲಬಾರದು? ಪರಿಸರಕ್ಕೆ ದೇಹದೇಶಕ್ಕೆ ಹಾನಿಗೈವ ಅಗ್ಗದ ರಾಸಾಯನಿಕ ಸರಕು ಬೇಕೆ? ಅಗ್ಗದ ದಾಸವಾಳ, ಬೋರೆ ಎಲೆ ಶಾಂಪೂ, ಚುಜ್ಜಲು, ಕಾಡು ಸೀಗೆ, ಮಂಡಸೀಗೆ, ಬಾಗೆ ಪುಡಿಗಳೇ ಸಾಕೇ? ಯೋಚಿಸಿ ಯೋಜಿಸಿರಿ. ಬಳಸಿ ನೋಡಿರಿ.

ಕನಸು ಕಾಣುತ್ತಾ ಸಂತೋಷವಾಗಿರಿ...

ರಮ್ಯಾ ಶ್ರೀಹರಿ

ರಾತ್ರಿ ಬಿದ್ದ ಕನಸುಗಳು ನಿಮ್ಮ ಹಗಲಿನ ಜೀವನವನ್ನು ಯಾವ ರೀತಿಯಲ್ಲಾದರೂ ಪ್ರಭಾವಿಸುತ್ತಿದೆಯಾ? ನೀವು ಕನಸುಗಳನ್ನು ನೆನಪಿಟ್ಟುಕೊಳ್ಳಲು ಯತ್ನಿಸುತ್ತಿರುವಿರೋ ಅಥವಾ ಅವುಗಳನ್ನು ಮರೆಯಲು ಹವಣಿಸುತ್ತಿರುವಿರೋ?

ಕನಸುಗಳ ಬಗ್ಗೆ ಅನೇಕ ವೈಜ್ಞಾನಿಕ, ಮನೋವಿಶ್ಲೇಷಣಾತ್ಮಕ ಅಧ್ಯಯನಗಳು ನಡೆದಿವೆ, ಅದನ್ನು ನಾವಿಲ್ಲಿ ಚರ್ಚಿಸಬೇಕಿಲ್ಲ. ಕನಸುಗಳನ್ನು ಸೃಜನಾತ್ಮಕವಾಗಿ, ನಮ್ಮ ಜೀವನವನ್ನು ಸಮೃದ್ಧವಾಗಿಸಲು ಬಳಸಿಕೊಳ್ಳುವುದು ಸಾಧ್ಯವಿದೆಯೇ? ಇದ್ದರೆ ಹೇಗೆ? ಇಂಥ ಪ್ರಶ್ನೆಗಳ ಕಡೆಗೆ ಗಮನ ನೀಡೋಣ.

ಹಗಲು ನಾವು ಕಾಣುವ ಕನಸೇ ಇರಲಿ, ರಾತ್ರಿ ನಮಗೆ ಬೀಳುವ ಕನಸೇ ಇರಲಿ, ಅದು ನಮ್ಮ ವರ್ತಮಾನವನ್ನು ಸಹ್ಯ ಮಾಡಿಕೊಳ್ಳುವ, ದಿನನಿತ್ಯದ ಹೊರಪ್ರಪಂಚದಲ್ಲಿ ಸುಲಭಕ್ಕೆ ಕಾಣಿಸದ್ದನ್ನು ನೋಡುವ, ಎಚ್ಚರದ ಬದುಕನ್ನು ಹೇಗಾದರೂ ಮೀರಿ ಹೋಗುವ ಕ್ರಿಯೆ. ಕನಸುಗಳೆಂದರೆ ಬೇರೊಂದು ಪ್ರಪಂಚದಂತೆ, ಸಣ್ಣದೊಂದು ಪ್ರವಾಸ ಮಾಡಿದಂತೆ, ಹೊಸಬರೊಬ್ಬರ ಪರಿಚಯ ಮಾಡಿಕೊಂಡಂತೆ, ನಮ್ಮನ್ನೇ ನಾವು ಬೇರೊಂದು ಬೆಳಕಿನಲ್ಲಿ ನೋಡಿಕೊಂಡಂತೆ. ಕನಸುಗಳಿಂದ ಪ್ರೇರಣೆ ಪಡೆದು ವೈಜ್ಞಾನಿಕ ಸಂಶೋಧನೆಗಳಲ್ಲಿ ಮಹತ್ತರವಾದದ್ದನ್ನು ಸಾಧಿಸಿದವರ ಕುರಿತು ಕೇಳಿದ್ದೇವೆ, ಹಾಗೆಯೇ ಕನಸುಗಳಿಂದ ಸ್ಫೂರ್ತಿ ಪಡೆದ ಕಲಾವಿದರು, ಸಾಹಿತಿಗಳೂ ಇರಬಹುದು. ಅಷ್ಟೇ ಏಕೆ ಅನೇಕರು ಕನಸುಗಳಿಂದಲೇ ಸೂಚನೆ ಪಡೆದು ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಿವಾರಿಸಿಕೊಂಡ ಕಥೆಗಳು ಬಹಳಷ್ಟಿವೆ.

ಕಲಾತ್ಮಕ ಚಟುವಟಿಕೆಗಳಿಗೆ ಅಥವಾ ಸಮಸ್ಯೆ ಪರಿಹಾರಕ್ಕೆ ಯಾವ ರೀತಿಯಲ್ಲಿ ನೆರವಾಗದಿದ್ದರೂ ಕನಸುಗಳು ನಮ್ಮ ಜೀವನದ ಆಳ ಮತ್ತು ವಿಸ್ತಾರವನ್ನು ತಿಳಿಸುವ, ನಮ್ಮ ಆಂತರ್ಯದ ಬೆಳವಣಿಗೆಗೆ ಪೂರಕವಾಗುವ ಶಕ್ತಿ ಹೊಂದಿವೆ. ಕನಸುಗಳಿಂದ ನಾವು ನಮ್ಮ ಬದುಕಿಗೆ ಬೇಕಾದ ಸಂತೋಷವನ್ನು, ವೈವಿಧ್ಯವಯನ್ನು ಅನ್ವೇಷಿಸಿಕೊಳ್ಳಬಹುದು. ಕೆಟ್ಟ ಕನಸುಗಳೂ ಈ ಅನ್ವೇಷಣೆಗೆ ಹೊರತಾಗಿಲ್ಲ. ತಾತ್ಕಾಲಿಕವಾಗಿ ಅವು ನಮ್ಮನ್ನು ತಲ್ಲಣಗೊಳಿಸಿದರೂ ವಿವೇಕದ ದೃಷ್ಟಿಯಿಂದ ನೋಡಿದಾಗ ಅವೂ ಅಂತಿಮವಾಗಿ ಸಂತೋಷವನ್ನೇ ನೀಡುತ್ತವೆ.

ಕನಸುಗಳೂ ಒಂದು ಭಾಷೆ ಇದ್ದಂತೆ, ಅದನ್ನು ಅರಿಯಲು ನಾವು ಕನಸುಗಳ ವ್ಯಾಖ್ಯಾನ, ವಿಶ್ಲೇಷಣೆಯಂತಹ ಪರಿಕರಗಳನ್ನು ಬಳಸದಿರುವುದೇ ಒಳಿತು. ಬದಲಾಗಿ ಕನಸುಗಳ ಭಾಷೆಯನ್ನು ಬದುಕುವುದರ ಮೂಲಕ ಅರಿಯುವುದು ಲೇಸು. ಸಾವು ಮತ್ತು ಲೈಂಗಿಕತೆಯ ಕುರಿತಾದ ಕನಸುಗಳು ಎಲ್ಲರಿಗೂ ಬೀಳುವಂಥದ್ದು ಮತ್ತು ಅತಿ ಹೆಚ್ಚು ಕಳವಳವನ್ನು ಉಂಟುಮಾಡುವಂಥದ್ದು. ಏಕೆಂದರೆ ಮನುಷ್ಯ ಜೀವನದ ಮುಖ್ಯ ಸಂಘರ್ಷಗಳು ಎಂದಿಗೂ ಇವೆರಡರ ಸುತ್ತಲೇ ಇರುತ್ತವೆ.

ಒಮ್ಮೊಮ್ಮೆ ಕನಸುಗಳಲ್ಲಿ ಆತಂಕಗೊಳಿಸುವ ಯಾವುದೇ ನಿರ್ದಿಷ್ಟ ವಸ್ತು, ವ್ಯಕ್ತಿ, ಘಟನೆ ಗೋಚರಿಸದಿದ್ದರೂ ಕನಸಿನ ಪರಿಸರವೇ ಅಂದರೆ ಯಾವುದೋ ಮಸುಕು ಮಸುಕಾದ ದಾರಿ, ಮನೆ, ನೆಲಮಾಳಿಗೆ, ಬಯಲು ಇಂತಹ ಹಗಲು ಬೆಳಕಿನಲ್ಲಿ ನಾವು ಕಾಣುವ ಸಾಮಾನ್ಯ ನೋಟಗಳೇ ಕನಸಿನಲ್ಲಿ ಬಂದಾಗ ಸಾವನ್ನೇ ಕಂಡಷ್ಟು ವಿಹ್ವಲಗೊಳಿಸುತ್ತವೆ. ಅದರ ಅರ್ಥ ಏನಿರಬಹುದು ಎಂದು ತಲೆಕೆಡಿಸಿಕೊಳ್ಳುವ ಬದಲು ಅವುಗಳನ್ನು ನಮ್ಮ ಜಾಗೃತ ಮನಸ್ಸಿಗೆ ತಂದುಕೊಂಡು ಕೆಲ ಸಮಯದ ನಂತರ ಬಿಟ್ಟುಬಿಡುವುದು ಉತ್ತಮ ಉಪಾಯ. ಕನಸಿನಿಂದ ಎಚ್ಚರಾದ ತಕ್ಷಣ ಅದು ಎಷ್ಟು ನೆನಪಾಗುತ್ತದೆಯೋ ಅಷ್ಟನ್ನು ಕಣ್ಣು ಮುಚ್ಚಿಕೊಂಡು ನಮ್ಮ ಜಾಗೃತ ಮನಸ್ಸಿನಲ್ಲಿ ದಾಖಲಿಸಿಕೊಂಡು ಅವುಗಳನ್ನು ಬರೆದು ಅಥವಾ ಚಿತ್ರಬಿಡಿಸಿ ನಂತರ ಅದರ ಕುರಿತು ಮಾತನಾಡುವುದು ಮನೋಚಿಕಿತ್ಸೆಯಲ್ಲಿ ಉಪಯೋಗಿಸುವ ಒಂದು ತಂತ್ರವೂ ಹೌದು. ಕನಸುಗಳ ವಿಷಯ, ವಸ್ತು, ಘಟನೆಗಿಂತ ಮುಖ್ಯವಾದದ್ದು ಅದು ನೀಡುವ ಅನುಭವ ಮತ್ತು ಸಂವೇದನೆಗಳು.

ಸುಂದರವಾದ ಉದ್ಯಾನದಲ್ಲಿದ್ದಂತೆ ಬಿದ್ದ ಕನಸಿನಿಂದ ಎಚ್ಚರಾದಾಗ ಯಾವುದೋ ಅವ್ಯಕ್ತ ದುಃಖವಾಗುತ್ತಿತ್ತೇ? ನಿಮ್ಮದೇ ಮನೆ ಕನಸಿನಲ್ಲಿ ಯಾವುದೋ ವಿಚಿತ್ರ ಬೆಳಕಿನಲ್ಲಿ ಅದ್ದಿಟ್ಟಂತೆ ಕಾಣುತ್ತಿತ್ತೇ? ಯಾವುದೋ ಮುಖ್ಯ ವಸ್ತು ಕಳೆದು ಹೋದಂತೆ, ಎಷ್ಟು ಹುಡುಕಿದರೂ ಕಾಣದಂತೆ, ಸಮಯ ಮೀರಿ ಹೋದ ಮೇಲೆ ಪರೀಕ್ಷೆಗೆ ಹಾಜರಾಗುತ್ತಿರುವಂತೆ ಶಾಲಾ ಕಾಲೇಜನ್ನು ಬಿಟ್ಟ ಎಷ್ಟೋ ವರ್ಷಗಳ ನಂತರವೂ ಬೀಳುವ ಕನಸಿಗೆ ಸುಲಭದ ಅರ್ಥಗಳನ್ನು ಹಚ್ಚುವ ಬದಲು ಅದರೊಳಗೆ ಅಡಕವಾಗಿರುವ ಭಾವನೆಗಳನ್ನು ಗ್ರಹಿಸಲು ಅನುವಾಗುವಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಿ. ಉದಾಹರಣೆಗೆ ಸಮಯ ಮೀರುತ್ತಿದೆ ಎನ್ನುವ ಆತಂಕ ಹುಟ್ಟಿಸಿದ ಕನಸು ಬಿದ್ದಾಗ ಕಾಲ ಸರಿದು ಹೋಗುವುದರೊಟ್ಟಿಗಿನ ನಿಮ್ಮ ಅನುಭವ ಎಂತಹದ್ದು ಎನ್ನುವುದನ್ನು ಮನಸ್ಸಿಗೆ ತಂದುಕೊಳ್ಳಿ. ಇಲ್ಲಿ ಕುತೂಹಲದಿಂದ, ತೆರೆದ ಮನಸ್ಸಿನಿಂದ ಎಲ್ಲ ಕನಸುಗಳನ್ನು ಸ್ವೀಕರಿಸಿ ಅನ್ವೇಷಣೆಯ ಮನೋಭಾವವನ್ನು ಹೊಂದುವುದಷ್ಟೇ ಮುಖ್ಯ.

ಕನಸುಗಳು ಬದುಕಿನ ಕುರಿತಾದ ನಮ್ಮ ರುಚಿ ಮತ್ತು ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇಲ್ಲಿರುವ ಮತ್ತು ಇಂಥದ್ದೇ ಹಲವು ಅಭ್ಯಾಸಗಳು, ಪ್ರಶ್ನೆಗಳು ಸಹಾಯಕವಾಗಬಹುದು:

- ನಿಮ್ಮ ಕನಸಿಗೆ ಹತ್ತಿರವಾದಂತಹ ಚಿತ್ರಗಳು ಪತ್ರಿಕೆಗಳಲ್ಲಿ, ಅಂತರ್ಜಾಲದಲ್ಲಿ ಕಣ್ಣಿಗೆ ಬಿದ್ದರೆ ಅವನ್ನು ಸಂಗ್ರಹಿಸಿಟ್ಟುಕೊಳ್ಳಿ ಅಥವಾ ಅವನ್ನು ಕೆಲ ನಿಮಿಷಗಳು ನೋಡಿ ಅದು ನೀಡುವ ಅನುಭವವನ್ನು ನೆನಪಿಟ್ಟುಕೊಳ್ಳಿ.
- ಒಂದೇ ಬಗೆಯ ಕನಸುಗಳು ಬೀಳುತ್ತಿದ್ದರೆ ಅದರ ಕುರಿತು ನೀವು ಹೇಳಬಹುದಾದ್ದನ್ನು ನಿಮ್ಮ ಧ್ವನಿಯಲ್ಲೇ ರೆಕಾರ್ಡ್ ಮಾಡಿ ಒಮ್ಮೆ ಕೇಳಿ. ಏನನಿಸುತ್ತದೆ?
- ನಿಮ್ಮ ಹಗಲುಗನಸುಗಳು ಸಾಮಾನ್ಯವಾಗಿ ಯಾವುದರ ಸುತ್ತ ಸುತ್ತುತ್ತಿರುತ್ತದೆ?
- ನಿಮ್ಮ ಆಳವಾದ ಭಯ ಮತ್ತು ಬಯಕೆ ಯಾವುದು?
- ನಿಮ್ಮ ಸುತ್ತಲಿನ ದೃಶ್ಯ ಪ್ರಪಂಚವನ್ನು, ಇಂದ್ರಿಯಾನುಭವಗಳನ್ನು, ಜನರನ್ನು ಸುಮ್ಮನೆ ಕುತೂಹಲಕ್ಕಾಗಿ ಗಮನಿಸುತ್ತಿರಿ.

ನಿಮ್ಮ ಕನಸುಗಳು ನಿಮ್ಮೊಳಗೇ ಇರುವ ಅಪರಿಚಿತ ವ್ಯಕ್ತಿಯನ್ನು ನಿಮಗೆ ಪರಿಚಯ ಮಾಡಿಸಬಹುದು.

❖

ನಿಮ್ಮ ಕನಸುಗಳು ನಿಮ್ಮೊಳಗೇ ಇರುವ ಅಪರಿಚಿತ ವ್ಯಕ್ತಿಯನ್ನು ನಿಮಗೆ ಪರಿಚಯ ಮಾಡಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 70

956. 'ಕಾದಂಬರಿ' ಯಾರ ಕೃತಿ?
ಎ) ಚಾಣಕ್ಯ ಬಿ) ಬಾಣಭಟ್ಟ
ಸಿ) ಚರಕ ಡಿ) ಸುಶ್ರುತ

957. ದ್ವಾರಸಮುದ್ರವು ಯಾವ ರಾಜಮನೆತನದ ರಾಜಧಾನಿಯಾಗಿತ್ತು?
ಎ) ಹೊಯ್ಸಳರು ಬಿ) ಶಾತವಾಹನರು
ಸಿ) ಪಾಂಡ್ಯರು ಡಿ) ಚೋಳರು

958. ರಾಷ್ಟ್ರಕೂಟ ರಾಜವಂಶದ ಮೂಲ ಪುರುಷ ಯಾರು?
ಎ) ದಂತಿದುರ್ಗ ಬಿ) ಕೃಷ್ಣ-I
ಸಿ) ಇಂದ್ರ-II ಡಿ) ಗೋವಿಂದ-I

959. ಅಣುಬಾಂಬ್ ಯಾವ ಸಿದ್ಧಾಂತವನ್ನು ಆಧರಿಸಿದೆ?
ಎ) ಪರಮಾಣು ಸಂಯೋಜನೆ
ಬಿ) ಪರಮಾಣು ವಿಭಜನೆ
ಸಿ) ವಿಕಿರಣಶೀಲತೆ
ಡಿ) ಮೇಲಿನ ಯಾವುದೂ ಅಲ್ಲ

960. ಕಿಣ್ವಗಳು ಏನಾಗಿವೆ?
ಎ) ಸಸಾರಜನಕಗಳು ಬಿ) ಶರ್ಕರಪಿಷ್ಟಗಳು
ಸಿ) ಕೊಬ್ಬುಗಳು
ಡಿ) ಮೇಲಿನ ಯಾವುದೂ ಅಲ್ಲ

961. ನಕಾಶೆಯನ್ನು ರಚಿಸುವ ವಿಜ್ಞಾನವನ್ನು ಏನೆಂದು ಕರೆಯುತ್ತಾರೆ?
ಎ) ಗ್ರಾಫೋಲಾಜಿ ಬಿ) ಡೆಮೊಗ್ರಾಫಿ
ಸಿ) ಕ್ರಿಪ್ಟೊಗ್ರಾಫಿ ಡಿ) ಕಾರ್ಟೊಗ್ರಾಫಿ

962. ಭಾರತದ ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳ ವಿಚಾರವನ್ನು ಯಾವ ದೇಶದ ಸಂವಿಧಾನದಿಂದ ಅಳವಡಿಸಲಾಗಿದೆ?
ಎ) ಜರ್ಮನಿ ಬಿ) ಯು.ಎಸ್.ಎಸ್.ಆರ್
ಸಿ) ಯು.ಎಸ್.ಎ ಡಿ) ಯು.ಕೆ

963. ಕೆಳಗಿನವುಗಳಲ್ಲಿ ಯಾವ ಜಿಲ್ಲೆಯು ಕೇರಳದೊಂದಿಗೆ ಗಡಿಯನ್ನು ಹಂಚಿಕೊಂಡಿಲ್ಲ?
ಎ) ದಕ್ಷಿಣ ಕನ್ನಡ ಬಿ) ಕೊಡಗು
ಸಿ) ಉಡುಪಿ ಡಿ) ಚಾಮರಾಜನಗರ

964. ಭಾರತದಲ್ಲಿ ಅಣ್ವಸ್ತ್ರ ಪರೀಕ್ಷೆಯ ಸ್ಥಳವಾದ ಪೋಖ್ರಾನ್ ಯಾವ ರಾಜ್ಯದಲ್ಲಿದೆ?
ಎ) ಮಧ್ಯಪ್ರದೇಶ ಬಿ) ಗುಜರಾತ್
ಸಿ) ಪಂಜಾಬ್ ಡಿ) ರಾಜಸ್ಥಾನ

965. ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಸಲ್ಪಟ್ಟಿದೆ?
1. ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನನಿಲ್ದಾಣ -ದೆಹಲಿ
2. ಚೌಧರಿ ಚರಣ್ ಸಿಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ- ಲಖನೌ
3. ನೇತಾಜಿ ಸುಭಾಸ್‌ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ- ಕೋಲ್ಕತ್ತಾ
ಎ) 1 ಮತ್ತು 2 ಮಾತ್ರ ಬಿ) 2 ಮತ್ತು 3 ಮಾತ್ರ
ಸಿ) 1 ಮತ್ತು 3 ಮಾತ್ರ
ಡಿ) ಮೇಲಿನ ಯಾವುದೂ ಅಲ್ಲ

966. ಕೆಳಗಿನವುಗಳಲ್ಲಿ ಯಾವ ಜೋಡಿ ಸರಿಯಾಗಿ ಹೊಂದಿಕೆಯಾಗಿಲ್ಲ?
ಎ) ಫಿಫಾ ಕಪ್- ಫುಟ್ಬಾಲ್
ಬಿ) ಥಾಮಸ್ ಕಪ್- ಟೆನಿಸ್
ಸಿ) ಟೂರ್ ಡಿ ಫ್ರಾನ್ಸ್- ಸೈಕ್ಲಿಂಗ್
ಡಿ) ಆಶಸ್ ಟ್ರೋಫಿ- ಕ್ರಿಕೆಟ್

967. ಯಾವ ದೇಶದಲ್ಲಿ ಭಾರತವು ರಷ್ಯಾದ ಸಹಕಾರದೊಂದಿಗೆ ಪರಮಾಣು ಘಟಕವನ್ನು ಸ್ಥಾಪಿಸುತ್ತಿದೆ?
ಎ) ನೇಪಾಳ ಬಿ) ಬಾಂಗ್ಲಾದೇಶ
ಸಿ) ಶ್ರೀಲಂಕಾ ಡಿ) ಮಾಲ್ಡೀವ್ಸ್

968. ಸಶಸ್ತ್ರ ಬಲಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವುದಕ್ಕೆ ಸಂಬಂಧಿಸಿದ ಸಂವಿಧಾನದ ವಿಧಿ ಯಾವುದು?
ಎ) 32ನೇ ವಿಧಿ ಬಿ) 33ನೇ ವಿಧಿ
ಸಿ) 34ನೇ ವಿಧಿ ಡಿ) 35ನೇ ವಿಧಿ

969. ನಗಿಸುವ ಅನಿಲ ಯಾವುದು?
ಎ) ನೈಟ್ರಸ್ ಆಕ್ಸೈಡ್
ಬಿ) ಕಾರ್ಬನ್ ಮೊನಾಕ್ಸೈಡ್
ಸಿ) ಸಲ್ಫರ್ ಡೈ ಆಕ್ಸೈಡ್
ಡಿ) ಹೈಡ್ರೋಜನ್ ಪೆರಾಕ್ಸೈಡ್

970. 'ಪಯೋರಿಯಾ' ಕಾಯಿಲೆ ಯಾವುದಕ್ಕೆ ಸಂಬಂಧಿಸಿದೆ?
ಎ) ಹೃದಯ ಬಿ) ಶ್ವಾಸಕೋಶ
ಸಿ) ವಸಡು ಡಿ) ಮೂತ್ರಪಿಂಡ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 69ರ ಉತ್ತರಗಳು: 941. ಡಿ, 942. ಎ, 943. ಸಿ, 944. ಎ, 945. ಬಿ, 946. ಬಿ, 947. ಬಿ, 948. ಸಿ, 949. ಸಿ, 950. ಎ, 951. ಎ, 952. ಎ, 953. ಸಿ, 954. ಎ, 955. ಬಿ

ಸಕ್ಕರೆಯೇ ಕಹಿಯಾದಾಗ...

ಪ್ರಸನ್ನ ಸಂತೇಕಡೂರು

ಸಕ್ಕರೆಯಲ್ಲಿರುವ ಗ್ಲುಕೋಸ್ ಎಂಬ ಅಣು ನಮ್ಮ ದೇಹಕ್ಕೆ ಶಕ್ತಿ ನೀಡುತ್ತದೆ. ಈ ಗ್ಲುಕೋಸ್ ನಮ್ಮ ದೇಹದಲ್ಲಿನ ಪ್ರತಿಯೊಂದು ಜೀವಕೋಶಗಳ ಕಾರ್ಯನಿರ್ವಹಣೆಗೂ ತುಂಬಾ ಅತ್ಯಗತ್ಯ. ನಾವು ತಿಂದಂತಹ ಆಹಾರವೆಲ್ಲವೂ ಬೇರೆ ಬೇರೆ ಕಿಣ್ವಗಳಿಂದ ನಮ್ಮ ದೇಹದಲ್ಲಿ ಜೀರ್ಣವಾಗಿ ಕೊನೆಗೆ ಗ್ಲುಕೋಸ್, ಅಮೈನೋ ಆಮ್ಲಗಳು ಮತ್ತು ಕೊಬ್ಬಿನ ಆಮ್ಲಗಳ ರೂಪದಲ್ಲಿ ನಮ್ಮ ರಕ್ತನಾಳಗಳ ಮೂಲಕ ಹರಿದು ಬೇರೆ ಬೇರೆ ಅಂಗಗಳಲ್ಲಿರುವ ಜೀವಕೋಶಗಳನ್ನು ಸೇರುತ್ತವೆ. ಗ್ಲುಕೋಸ್ ಅಂಶ ನಮ್ಮ ದೇಹದಲ್ಲಿ ಸಮತೋಲನದಿಂದ ಇರಬೇಕು. ಇದು ಸಮತೋಲನದಿಂದ ಇದ್ದರೆ ಪ್ರತಿಯೊಬ್ಬರು ಆರೋಗ್ಯವಾಗಿರುತ್ತಾರೆ. ಈ ಸಮತೋಲನತೆಯನ್ನು ನಮ್ಮ ದೇಹದಲ್ಲಿರುವ ಇನ್ಸುಲಿನ್ ಮತ್ತು ಗ್ಲುಕಗಾನ್ ಎಂಬ ಹಾರ್ಮೋನುಗಳು ನಿಯಂತ್ರಣದಲ್ಲಿಡುತ್ತವೆ. ಇವುಗಳ ನಿಯಂತ್ರಣ ತಪ್ಪಿ ನಮ್ಮ ದೇಹದಲ್ಲಿ ಗ್ಲುಕೋಸಿನ ಪ್ರಮಾಣ ಹೆಚ್ಚಾದರೆ ಆಗ ಮಧುಮೇಹ (ಸಕ್ಕರೆ ಕಾಯಿಲೆ), ಹೃದಯಸಂಬಂಧಿ ಕಾಯಿಲೆಗಳು, ಸ್ಥೂಲಕಾಯತೆ, ಕ್ಯಾನ್ಸರ್ ಇನ್ನೂ ಹಲವು ರೋಗಗಳು ಬರಬಹುದು. ರಕ್ತದಲ್ಲಿ ಗ್ಲುಕೋಸ್ ಪ್ರಮಾಣ ತುಂಬಾ ಕಡಿಮೆಯಾದರೆ ಅಂತಹವರು ಕೋಮಾಸ್ಥಿತಿಯನ್ನು ತಲುಪಿ ಸಾಯಬಹುದು, ಅಥವಾ ಬಹು ಅಂಗಾಂಗ ವೈಫಲ್ಯಕ್ಕೆ ತುತ್ತಾಗಬಹುದು. ನಮ್ಮ ಮೆದುಳಿನ ಕಾರ್ಯಕ್ಕೆ ಗ್ಲುಕೋಸ್ ಸದಾ ಪೂರೈಕೆಯಾಗುತ್ತಿರಬೇಕು. ಹೀಗಾಗಿ ದೇಹದಲ್ಲಿ ಸಕ್ಕರೆ ಅಂಶ ಸದಾ ಸಮತೋಲನದಿಂದ ಇರಬೇಕು.

ಭಾರತದಲ್ಲಿ ಇತ್ತೀಚಿನ ಕೆಲವು ದಶಕಗಳಲ್ಲಿ ಮಧುಮೇಹ, ಹೃದಯಸಂಬಂಧಿ ಕಾಯಿಲೆಗಳು, ಸ್ಥೂಲಕಾಯತೆ, ಕ್ಯಾನ್ಸರ್ ಹೆಚ್ಚಾಗಲು ಕಾರಣವೇನು? ಇದಕ್ಕೆ ಮುಖ್ಯ ಕಾರಣ ನಮ್ಮ ಜೀವನಶೈಲಿಯಲ್ಲಿ ಆದ ಬಹು ಮುಖ್ಯ ಬದಲಾವಣೆ. ಏನು ಆ ಬದಲಾವಣೆ? ಅದು ನಮ್ಮಲ್ಲಿ ಆಗಿರುವ ಪಾಶ್ಚಾತ್ಯೀಕರಣ. ಎಂದರೆ ನಾವು ಯಾಂತ್ರಿಕ ಜೀವನಶೈಲಿಯನ್ನು ಅನುಸರಿಸಲು ಆರಂಭಿಸಿದ್ದು. ಕಳೆದ ಶತಮಾನದ ಎಂಬತ್ತರ ದಶಕದ ನಂತರ ಭಾರತದಲ್ಲಿ ಪ್ರತಿಯೊಬ್ಬರ ಮನೆಗೂ ಟಿ.ವಿ., ಫೋನುಗಳು ಬಂದವು; ದ್ವಿಚಕ್ರ ವಾಹನಗಳು, ಕಾರುಗಳು ಬಂದವು. ಅನಂತರ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳು ಬಂದವು. ನಡೆಯುವುದು ಕಡಿಮೆಯಾಯಿತು; ದಿನನಿತ್ಯದ ರುಬ್ಬುವ, ಬೀಸುವ ಕೆಲಸಕ್ಕೂ ಯಂತ್ರಗಳು ಬಂದವು. ಸರ್ಕಾರಿ ಮತ್ತು ಖಾಸಗಿ ಕಚೇರಿಗಳಲ್ಲೂ ಕಂಪ್ಯೂಟರುಗಳು ಬಂದವು. ಎಲ್ಲರ ದೈಹಿಕ ಶ್ರಮ ಕಡಿಮೆಯಾಗಿ ಕುಳಿತೇ ಮಾಡುವ ಕೆಲಸಗಳು ಹೆಚ್ಚಾದವು. ರಾತ್ರಿಯ ನಿದ್ರೆ ಕಡಿಮೆಯಾಗಿ ಎಲ್ಲರೂ ಟಿ.ವಿ., ಕಂಪ್ಯೂಟರ್, ಫೋನುಗಳ ದಾಸರಾಗುವಂತಾಯಿತು. ಇದರಿಂದ ನಮ್ಮ ನಮ್ಮ ದೇಹದ ದಿನನಿತ್ಯ ಕಾರ್ಯಗಳನ್ನು ನಿರ್ವಹಿಸುವ ಹಾರ್ಮೋನುಗಳಲ್ಲೂ ವ್ಯತಿರಿಕ್ತ ಪರಿಣಾಮವಾಯಿತು. ಅದರಲ್ಲೂ ಇನ್ಸುಲಿನ್ ಹಾರ್ಮೋನಿನ ಕಾರ್ಯನಿರ್ವಹಣೆಯಲ್ಲಿ ಬದಲಾವಣೆಗಳಾಗಿ ರಕ್ತದ ಗ್ಲುಕೋಸ್ ಹೆಚ್ಚಾಗುವಂತಾಯಿತು.

ಬೇಕರಿಗಳು, ಸಿದ್ಧ ತ್ವರಿತ ಆಹಾರದ ಗಾಡಿಗಳು ಹೆಚ್ಚಾದವು. ಹಿತ-ಮಿತವಾಗಿ ಆಹಾರ ತಿನ್ನುತ್ತಿದ್ದವರು ಕೂಡ ಅತಿಹೆಚ್ಚು ಕ್ಯಾಲೋರಿಯುಕ್ತ ಆಹಾರಗಳನ್ನು ತಿನ್ನಲು, ಪಾನೀಯಗಳನ್ನು ಕುಡಿಯಲು ಆರಂಭಿಸಿದರು. ಅದರಲ್ಲೂ ಹೆಚ್ಚು ಹೆಚ್ಚು ಸಕ್ಕರೆಯುಕ್ತ ಆಹಾರಗಳು, ಪಾನೀಯಗಳು ಹೆಚ್ಚಾದವು. ಈ ಪಾನೀಯಗಳಲ್ಲಿ ಸಕ್ಕರೆ ಅಂಶವನ್ನು ಹೆಚ್ಚು ಸೇರಿಸಿರುತ್ತಾರೆ. ಸಿಹಿತಿಂಡಿಗಳು ದಿನನಿತ್ಯವೂ ಕೈಗೆಟಕುವಂತಾಯಿತು. ಇದರಿಂದ ದೇಹದಲ್ಲಿ ಸಕ್ಕರೆ ಅಂಶ ಹೆಚ್ಚಾಗಿ ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು, ಸ್ಥೂಲಕಾಯತೆ, ಕ್ಯಾನ್ಸರುಗಳು ಹೆಚ್ಚಾದವು. ಸ್ಥೂಲಕಾಯತೆ ಮತ್ತು ಮಧುಮೇಹಗಳು ಈಗ ಚಿಕ್ಕ ಚಿಕ್ಕ ಮಕ್ಕಳಲ್ಲೂ ಹೆಚ್ಚಾಗುತ್ತಿದೆ. ಅದಕ್ಕೆ ಮುಖ್ಯ ಕಾರಣ ಮಕ್ಕಳಿಗೆ ಸರಿಯಾಗಿ ವ್ಯಾಯಾಮ ಸಿಗುತ್ತಿಲ್ಲ. ಅವುಗಳನ್ನು ಮನೆಯಿಂದ ಹೊರಗೆ ಕಳುಹಿಸಿ ಆಟ ಆಡಲು ಕೆಲವು ಪೋಷಕರು ಬಿಡುತ್ತಿಲ್ಲ. ಮಕ್ಕಳು ಸದಾ ವೀಡಿಯೋ ಗೇಮ್ಸ್, ಕಂಪ್ಯೂಟರ್, ಫೋನುಗಳನ್ನು ನೋಡುತ್ತ ಕಾಲ ಕಳೆಯುವಂತಾಗಿದೆ. ಗರ್ಭಿಣಿಯರು ಕೂಡ ಹಿತವಾಗಿ ಮಿತವಾಗಿ ವೈವಿಧ್ಯಮಯ ಆಹಾರಗಳನ್ನು ತಿನ್ನಬೇಕು. ಸಕ್ಕರೆ ಅಂಶವಿರುವ ಆಹಾರವನ್ನು ಕೂಡ ಹಿತವಾಗಿ ಮಿತವಾಗಿ ಸೇವಿಸಬೇಕು.

(ಲೇಖಕರು ವಿಜ್ಞಾನಿ)

ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಿಸಿಕೊಳ್ಳಲು ಕೆಲವು ಸಲಹೆಗಳು:

- ಉತ್ತಮ ಸಮತೋಲನ ಆಹಾರ.
- ಉತ್ತಮ ಜೀವನ ಶೈಲಿ.
- ಸಮಯಕ್ಕೆ ಸರಿಯಾಗಿ ನಿದ್ರೆ
- ಧ್ಯಾನ, ಯೋಗ, ವಾಯುವಿಹಾರ, ಸೂರ್ಯನಮಸ್ಕಾರಗಳ ಅಭ್ಯಾಸ
- ದೈಹಿಕ ಶ್ರಮದಲ್ಲಿ ತೊಡಗುವುದು.
- ನೀರನ್ನು ಹೆಚ್ಚು ಕುಡಿಯುವುದು.



❦ ಸುಭಾಷಿತ ❦

ಇದು ತಿಳಿದಿದೆ, ಇದು ತಿಳಿದಿಲ್ಲ ಎನ್ನುವುದೇ ತಿಳಿವು.
-ಕನ್‌ಫ್ಯೂಷಿಯಸ್

ಲಖಿಂಪುರ- ಖೇರಿ ಹಿಂಸಾ ಪ್ರಕರಣ ಸಮಗ್ರ ತನಿಖೆಯಾಗಲಿ

ಉತ್ತರಪ್ರದೇಶದ ಲಖಿಂಪುರ-ಖೇರಿ ಜಿಲ್ಲೆಯಲ್ಲಿ ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿದ್ದ ಪ್ರತಿಭಟನೆ ಸಂದರ್ಭದಲ್ಲಿ ಹಿಂಸಾಚಾರ ಜರುಗಿ ಎಂಟು ಮಂದಿ ಮೃತಪಟ್ಟಿರುವುದು ಅತ್ಯಂತ ದಾರುಣ ಸಂಗತಿ. ಇವರಲ್ಲಿ ನಾಲ್ವರು ರೈತರು ಎಂದು ವರದಿಯಾಗಿದೆ. ಉತ್ತರಪ್ರದೇಶದ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಹಾಗೂ ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರು ಜಿಲ್ಲೆಯಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಬೇಕಿತ್ತು. ಈ ಉದ್ದೇಶಿತ ಭೇಟಿಯನ್ನು ವಿರೋಧಿಸುವುದು ಕೂಡ ರೈತರ ಪ್ರತಿಭಟನೆಯ ಒಂದು ಭಾಗವಾಗಿತ್ತು ಎಂದು ಹೇಳಲಾಗಿದೆ. ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಬೆಂಗಾವಲು ಪಡೆಯ ವಾಹನ ಚಲಿಸಿದ್ದರಿಂದ ನಾಲ್ವರು ರೈತರು ಮೃತಪಟ್ಟಿದ್ದಾರೆ ಎಂದು ಪ್ರತಿಭಟನಾನಿರತರು ಆರೋಪಿಸಿದ್ದಾರೆ. ಮೂವರು ಬಿಜೆಪಿ ಕಾರ್ಯಕರ್ತರು ಮತ್ತು ಒಬ್ಬ ವಾಹನ ಚಾಲಕನನ್ನು ರೈತರು ಥಳಿಸಿ ಕೊಂದಿದ್ದಾರೆ ಎಂದು ಸಚಿವರು ದೂರಿದ್ದಾರೆ. ರೈತರ ಮೇಲೆ ಹರಿದ ಒಂದು ವಾಹನವನ್ನು ಸಚಿವ ಅಜಯ್ ಮಿಶ್ರಾ ಅವರ ಮಗನೇ ಚಲಾಯಿಸುತ್ತಿದ್ದ ಎನ್ನುವ ಆರೋಪವೂ ಇದೆ. ಈ ಘಟನೆಯು ಉತ್ತರಪ್ರದೇಶದ ಹಲವೆಡೆ ಉದ್ರಿಕ್ತ ವಾತಾವರಣವನ್ನು ಉಂಟುಮಾಡಿದೆ. ಮೃತ ರೈತರ ಕುಟುಂಬದವರನ್ನು ಭೇಟಿ ಮಾಡಲು ಲಖಿಂಪುರಕ್ಕೆ ಹೊರಟ ವಿರೋಧ ಪಕ್ಷಗಳ ಮುಖಂಡರಾದ ಅಖಿಲೇಶ್ ಯಾದವ್, ಪ್ರಿಯಾಂಕಾ ಗಾಂಧಿ ಮತ್ತಿತರರನ್ನು ಪೊಲೀಸರು ತಡೆದು, ವಶಕ್ಕೆ ಪಡೆದಿದ್ದಾರೆ. ಉತ್ತರಪ್ರದೇಶದಲ್ಲಿ ನಡೆದಿರುವ ಈ ಘಟನೆಯು ಪಂಜಾಬ್ ಮತ್ತು ದೆಹಲಿಯ ಗಡಿಯಲ್ಲಿ ಹತ್ತು ತಿಂಗಳಿಂದ ಕೃಷಿ ಕಾಯ್ದೆಯ ವಿರುದ್ಧ ನಿರಂತರ ನಡೆಯುತ್ತಿರುವ ರೈತರ ಹೋರಾಟವನ್ನು ಇನ್ನಷ್ಟು ಕಾವೇರಿಸಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಿಂಸೆಗೆ ತಾವಿಲ್ಲ. ಇದನ್ನು ಅಧಿಕಾರಸ್ಥರೂ ಅರಿಯಬೇಕು. ಪ್ರತಿಭಟನಾನಿರತರೂ ಪಾಲಿಸಬೇಕು

ಹಿಂಸಾಚಾರವನ್ನು ಯಾರೇ ಮಾಡಿರಲಿ, ಅದನ್ನು ಸಮರ್ಥಿಸಲು ಸಾಧ್ಯವಿಲ್ಲ. ತಾವು ನಡೆಸುತ್ತಿರುವ ಪ್ರತಿಭಟನೆ ಶಾಂತಿಯುತವಾಗಿ ಇರುವಂತೆ ರೈತರು ನೋಡಿಕೊಳ್ಳಬೇಕು. ಕಾನೂನು- ಸುವ್ಯವಸ್ಥೆ ಪರಿಸ್ಥಿತಿ ಕೈಮೀರದಂತೆ ಸರ್ಕಾರವೂ ಎಚ್ಚರ ವಹಿಸಬೇಕು. ಲಖಿಂಪುರ-ಖೇರಿ ಜಿಲ್ಲೆಯಲ್ಲಿ ನಡೆದ ದುರ್ಘಟನೆಯಲ್ಲಿ ಎರಡೂ ಕಡೆಯವರ ಆವೇಶ ಮತ್ತು ಎಚ್ಚರಗೇಡಿತನ ವರ್ತನೆಯನ್ನು ಕಾಣಬಹುದಾಗಿದೆ. ಕಪ್ಪುಬಾವುಟ ಹಿಡಿದು ಪ್ರತಿಭಟನೆ ನಡೆಸುತ್ತಿದ್ದ ರೈತರ ಗುಂಪಿನ ಮಧ್ಯೆಯೇ ಸಚಿವರ ಬೆಂಗಾವಲಿನ ವಾಹನಗಳು ಅಪಾಯಕಾರಿಯಾಗಿ ಚಲಿಸುತ್ತಿರುವುದು ವಿಡಿಯೊ ಚಿತ್ರಗಳಲ್ಲಿ ಸ್ಪಷ್ಟವಾಗಿದೆ. ತಾವು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಕಪ್ಪು ಬಾವುಟ ಪ್ರದರ್ಶಿಸಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಕೇಂದ್ರ ಸಚಿವ ಅಜಯ್ ಮಿಶ್ರಾ ಎಚ್ಚರಿಕೆ ಕೊಟ್ಟಿದ್ದುದು ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅಧಿಕಾರದಲ್ಲಿ ಇರುವವರು ನಡೆ-ನುಡಿಯಲ್ಲಿ ಸಂಯಮ ಕಾಯ್ದುಕೊಳ್ಳುವುದು ಅಗತ್ಯ. ಸಚಿವರ ಈ ಹೇಳಿಕೆಯು ರೈತರನ್ನು ಪ್ರಚೋದಿಸಿರಬಹುದು ಎಂಬ ಮಾತಿದೆ. ಹಾಗೆಂದು ಹಿಂಸಾಚಾರ ಮತ್ತು ವಾಹನಕ್ಕೆ ಬೆಂಕಿ ಹಚ್ಚಿ ಜನರ ಕೊಲೆಗೆ ಕಾರಣರಾಗುವುದರ ಕೃತ್ಯವನ್ನು ಸಮರ್ಥಿಸಲು ಸಾಧ್ಯವೇ ಇಲ್ಲ. ಇದು ತೀವ್ರ ಖಂಡನೀಯ. ಘಟನೆಯ ಬಳಿಕ ಪರಿಸ್ಥಿತಿ ಕೈಮೀರದಂತೆ ತಡೆಯಲು ಪ್ರಯತ್ನಿಸಿರುವ ಉತ್ತರಪ್ರದೇಶ ಸರ್ಕಾರವು ಮೃತಪಟ್ಟ ನಾಲ್ವರು ರೈತರ ಕುಟುಂಬಗಳಿಗೆ ತಲಾ ₹ 45 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹ 10 ಲಕ್ಷ ಪರಿಹಾರವನ್ನು ಪ್ರಕಟಿಸಿದೆ. ಘಟನೆಯ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸುವುದಾಗಿಯೂ ಸರ್ಕಾರ ಭರವಸೆ ನೀಡಿದೆ. ಈ ಹಿಂಸಾಕೃತ್ಯದ ಬಗ್ಗೆ ಸಮಗ್ರ ತನಿಖೆಯಾಗಬೇಕು. ನಿಜಾಂಶ ಆದಷ್ಟು ಬೇಗ ಹೊರಬರಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ಪೂರ್ಣ ರದ್ದುಪಡಿಸಬೇಕೆಂಬ ಒತ್ತಾಯದೊಂದಿಗೆ ಪಂಜಾಬ್- ದೆಹಲಿ ಗಡಿಯಲ್ಲಿ ಸಾವಿರಾರು ರೈತರು ನಡೆಸುತ್ತಿರುವ ಧರಣಿ, ಪ್ರತಿಭಟನೆಯು ಹತ್ತು ತಿಂಗಳನ್ನೂ ದಾಟಿ ಮುಂದುವರಿದಿದೆ. ಈ ಕಾಯ್ದೆಗಳು ತಮ್ಮ ಹಿತಾಸಕ್ತಿಗೆ ವಿರುದ್ಧವಾಗಿವೆ ಎಂದು ರೈತರು ದೃಢ ನಿಲುವು ತಳೆದಿದ್ದಾರೆ. ಇಂತಹ ಕಾಯ್ದೆಗಳ ಕುರಿತು ಸಂಸತ್ತಿನಲ್ಲಿ ಕೂಲಂಕಷವಾಗಿ ಚರ್ಚಿಸದೆ, ತುರ್ತಾಗಿ ಅಂಗೀಕರಿಸಬೇಕಾದ ಅಗತ್ಯ ಸರ್ಕಾರಕ್ಕೆ ಏನಿತ್ತು? ತಾತ್ಕಾಲಿಕವಾಗಿ ತಡೆಹಿಡಿದಿರುವ ಈ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ ಎಂದಾದಲ್ಲಿ, ಅವುಗಳಿಂದ ಆಗುವ ಪ್ರಯೋಜನದ ಕುರಿತು ರೈತರಿಗೆ ಮನದಟ್ಟು ಮಾಡಿಕೊಡುವ ಹೊಣೆಗಾರಿಕೆಯನ್ನು ಸರ್ಕಾರ ಸಮರ್ಥವಾಗಿ ನಿರ್ವಹಿಸಬೇಕು. ಈ ದಿಸೆಯಲ್ಲಿ ರೈತರ ಮನವೊಲಿಸಿ ಪ್ರತಿಭಟನೆ ಹಿಂತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವು ಮಾತುಕತೆಯನ್ನು ಪುನಃ ಆರಂಭಿಸಬೇಕಿದೆ. ಮಾತುಕತೆಯ ಮೂಲಕ ಪರಿಹರಿಸಲಾಗದ ಸಮಸ್ಯೆ ಯಾವುದೂ ಇಲ್ಲ ಎನ್ನುವುದನ್ನು ಸರ್ಕಾರ ಅರಿತುಕೊಳ್ಳಬೇಕು. ಇದನ್ನು ಪ್ರತಿಷ್ಠೆಯ ವಿಷಯವಾಗಿ ಸರ್ಕಾರವೂ ಪರಿಗಣಿಸಬಾರದು, ಪ್ರತಿಭಟನೆನಿರತ ರೈತರೂ ಪರಿಗಣಿಸಬಾರದು. ಎರಡೂ ಕಡೆಯವರು ಪ್ರತಿಷ್ಠೆ ಬಿಟ್ಟು ಮತ್ತೆ ಪರಸ್ಪರ ಕುಳಿತು ಮಾತನಾಡಿ ಸೌಹಾರ್ದದಿಂದ ಪರಿಹಾರ ಸೂತ್ರವೊಂದನ್ನು ಕಂಡುಕೊಳ್ಳಬೇಕು. ರೈತರ ಮತ್ತು ದೇಶದ ಹಿತಾಸಕ್ತಿ ರಕ್ಷಣೆಯ ಹಿನ್ನೆಲೆಯಲ್ಲಿ ಇದು ತುರ್ತಾಗಿ ಆಗಬೇಕಾದ ಕೆಲಸ.

ದಿನದ ಟ್ವೀಟ್

ಸಿದ್ಧಾಂತ ಕಡೆಗಣನೆ ತರವಲ್ಲ

ಗಾಂಧಿ ಜಯಂತಿಯನ್ನು ಮಾತ್ರ ಆಚರಿಸುತ್ತೇವೆ. ಆದರೆ ಅವರ ತತ್ವ, ಸಿದ್ಧಾಂತಗಳನ್ನು ಮರೆಗೆ ಸರಿಸುತ್ತಿದ್ದೇವೆ. ಅವರ ಆದರ್ಶಗಳನ್ನು ಪಾಲಿಸುವ ಕೆಲವರನ್ನು ಅಪಹಾಸ್ಯಕ್ಕೆ ಗುರಿಪಡಿಸುತ್ತೇವೆ. ಗಾಂಧೀಜಿ, ಡಾ. ಅಂಬೇಡ್ಕರ್, ಅಬ್ದುಲ್ ಕಲಾಂ, ನೆಲ್ಸನ್ ಮಂಡೇಲಾ ಅವರಂತಹ ಮಹಾನ್ ವ್ಯಕ್ತಿಗಳ ರೂಪದಲ್ಲಿ ಇತರರನ್ನು ಈ ಜಗತ್ತು ನೋಡಬಯಸುತ್ತದೆ.

ಚಲುವರಾಜು ಕೆ., ನಾಗರಿಕ

ಕಿಡಿನುಡಿ

ಬಿಜೆಪಿ ಹೈಕಮಾಂಡ್ ನಾಗಪುರದಲ್ಲಿ ಇದೆ. ಕಾಂಗ್ರೆಸ್ ಹೈಕಮಾಂಡ್ ದೆಹಲಿಯಲ್ಲಿ ಇದೆ. ಜೆಡಿಎಸ್ ಹೈಕಮಾಂಡ್ ಬಿಡದಿಯಲ್ಲಿದೆ. ನಮ್ಮ ಕಾರ್ಯಕರ್ತರು ಹೈಕಮಾಂಡ್ ನೋಡಲು ವಿಮಾನ ಹತ್ತಿ ದೆಹಲಿಗೆ ಹೋಗಬೇಕಿಲ್ಲ. ಸಾವಿರಾರು ರೂಪಾಯಿ ಖರ್ಚು ಮಾಡಬೇಕಿಲ್ಲ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 5-10-1996

• **ನರಸಿಂಹ ರಾವ್ ಬಂಧನದ ಆಜ್ಞೆಗೆ ಹೈಕೋರ್ಟ್ ತಡೆ**

ನವದೆಹಲಿ, ಅ. 4 (ಯುಎನ್‌ಐ, ಪಿಟಿಐ)– ಸೇಂಟ್ ಕಿಟ್ಸ್ ಫೋರ್ಜರಿ ಹಗರಣಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ಸೇರಿದಂತೆ ನಾಲ್ವರ ಬಂಧನಕ್ಕೆ ದೆಹಲಿ ನ್ಯಾಯಾಲಯ ಇಂದು ಜಾಮೀನುರಹಿತ ವಾರಂಟ್ ಹೊರಡಿಸಿತು. ಆದರೆ, ರಾವ್ ಅವರ ವಿರುದ್ಧ ಅ. 7ರವರೆಗೆ ಈ ಆದೇಶ ಜಾರಿಗೊಳಿಸದಂತೆ ದೆಹಲಿ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಬಂಧನದ ಶಂಕೆಯಿಂದ ನರಸಿಂಹ ರಾವ್ ಅವರು ದೆಹಲಿ ಹೈಕೋರ್ಟಿಗೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಇಂದು ಸಂಜೆ ಈ ಅರ್ಜಿಯನ್ನು ವಿಚಾರಣೆಗೆ ಸ್ವೀಕರಿಸಿದ ನ್ಯಾಯಮೂರ್ತಿ ಎಸ್.ಕೆ. ಮಹಾಜನ್ ಅವರು ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅವರು ಜಾರಿಗೊಳಿಸಿದ್ದ ಜಾಮೀನುರಹಿತ ವಾರಂಟ್‌ಗೆ ಸೋಮವಾರದವರೆಗೆ ತಡೆಯಾಜ್ಞೆ ನೀಡಿದರು. ಸಿಬಿಐಗೆ ನೋಟಿಸ್ ಜಾರಿಗೊಳಿಸಿ ಅರ್ಜಿಯ ವಿಚಾರಣೆಯನ್ನು ಅ. 7ಕ್ಕೆ ಮುಂದೂಡಿದರು.

• **ಉಗ್ರಗಾಮಿಗಳ ವಶದಲ್ಲಿದ್ದ ಪಾಲಕ್ಕಾಡ್ ಜಿಲ್ಲಾಧಿಕಾರಿ ಬಿಡುಗಡೆ**

ಪಾಲಕ್ಕಾಡ್, ಅ. 4 (ಪಿಟಿಐ)– ಪಾಲಕ್ಕಾಡ್ ಜಿಲ್ಲಾಧಿಕಾರಿ ಡಬ್ಲ್ಯು.ಆರ್. ರೆಡ್ಡಿ ಅವರನ್ನು ಬೆಳಿಗ್ಗೆ 11 ಗಂಟೆಯಿಂದ ದಿಗ್ಬಂಧನದಲ್ಲಿರಿಸಿದ್ದ ನಾಲ್ವರು ಸಶಸ್ತ್ರ ಶಂಕಿತ ಉಗ್ರಗಾಮಿಗಳ ಗುಂಪು ರಾತ್ರಿ ಅವರನ್ನು ಬಿಡುಗಡೆ ಮಾಡಿತು.

ಉಗ್ರರ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವ ಆಶ್ವಾಸನೆಯನ್ನು ರೆಡ್ಡಿ ಅವರು ನೀಡಿದ ನಂತರ, ಅವರನ್ನು ಉಗ್ರರು ಬಿಡುಗಡೆ ಮಾಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 5-10-1971

• **ತಾಂತ್ರಿಕ ಶಿಕ್ಷಣ: ವೈವಿಧ್ಯಗೊಳಿಸಲು ಯೋಚನೆ**

ಬೆಂಗಳೂರು, ಅ. 4– ತಾಂತ್ರಿಕ ಶಿಕ್ಷಣದಲ್ಲಿ ವಿವಿಧ ರೀತಿಯ ವಿಚಾರಗಳನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದ್ದು, ಮುಂದಿನ ಸಾಲಿನಲ್ಲಿ ಪ್ರಥಮ ಬಾರಿಗೆ ಆಯವ್ಯಯದಲ್ಲಿ 60 ಲಕ್ಷ ರೂಪಾಯಿಗಳನ್ನು ತಾಂತ್ರಿಕ ಶಿಕ್ಷಣರಂಗಕ್ಕೆ ನೀಡಲು ಯೋಚಿಸಲಾಗಿದೆ.

ಸ್ನಾತಕೋತ್ತರ ಶಿಕ್ಷಣದಲ್ಲೂ ಬಗೆಬಗೆಯ ಹೊಸ ಅಧ್ಯಯನ ವಿಚಾರಗಳನ್ನು ಅಳವಡಿಸಲು ಯೋಚಿಸಲಾಗಿದೆ.

• **ಕಲ್ಬುರ್ಗಿ ಜಿಲ್ಲೆಯಲ್ಲಿ ಹಸಿವಿನಿಂದ ಜನ ಸತ್ತ ವರದಿ 'ನಿರಾಧಾರ'**

ಬೆಂಗಳೂರು, ಅ. 4– ಕಲ್ಬುರ್ಗಿ ಜಿಲ್ಲೆಯ ಅಫ್ಜಲ್‌ಪುರ ಮತ್ತು ಚಿಂಚೋಳಿ ತಾಲ್ಲೂಕಿನಲ್ಲಿ ಹೊಟ್ಟೆಗಿಲ್ಲದೆ ಜನ ಸತ್ತರೆಂದು ಕೆಲವು ಪತ್ರಿಕೆಗಳಲ್ಲಿ ಬಂದಿರುವ ವರದಿ ನಿರಾಧಾರವೆಂದೂ ಅಭಾವಪೀಡಿತ ಪ್ರದೇಶದಲ್ಲಿ ಹಸಿವಿನಿಂದ ಮರಣ ಸಂಭವಿಸಿಲ್ಲ ಎಂದು ತನಿಖೆಯಿಂದ ವ್ಯಕ್ತಪಟ್ಟಿದೆ ಎಂದೂ ಸರ್ಕಾರಿ ಪ್ರಕಟಣೆಯೊಂದು ತಿಳಿಸಿದೆ.

ಮುಕ್ತ ಚರ್ಚೆಯ ಆಶ್ವಾಸನೆ ನೀಡಿದ ಮುಖ್ಯಮಂತ್ರಿ ಈ ಸರಳ ಪ್ರಶ್ನೆಗಳನ್ನು ಪರಿಶೀಲಿಸುತ್ತಾರೆಯೇ?

ಶಿಕ್ಷಣ ನೀತಿ: ಕೆಲವು ಪ್ರಶ್ನೆಗಳು

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ 'ಮುಕ್ತ ಚರ್ಚೆಗೆ ಸಿದ್ಧ; ವಿವಿಧ ಆಯಾಮಗಳಲ್ಲಿ ಚರ್ಚೆ ನಡೆಯಬೇಕಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನ ಪರಿಷತ್ತಿನಲ್ಲಿ ಇತ್ತೀಚೆಗೆ ಸಮಚಿತ್ತದಿಂದ ಹೇಳಿದಾಗ, ಕಿರು ಕಿರಣವೊಂದು ಕಾಣಿಸಿತ್ತು. ಆದರೆ ಮರುದಿನ ವಿಧಾನಸಭೆಯಲ್ಲಿ 'ನಾಗಪುರ ಶಿಕ್ಷಣ ನೀತಿ', 'ಇಟಲಿ ಶಿಕ್ಷಣ ನೀತಿ' ಎಂಬ ವೈಪರೀತ್ಯದ ಘೋಷಣೆಗಳಲ್ಲಿ ಜಿದ್ದಾಜಿದ್ದಿಯ ಮಾತೇ ಮುಖ್ಯವಾಗಿ ಶಿಕ್ಷಣ ಮತ್ತು ನೀತಿ- ಎರಡೂ ಕಾಣೆಯಾದವು.

ಅದೇನೇ ಇರಲಿ, ಮುಖ್ಯಮಂತ್ರಿಯವರು ಮುಕ್ತ ಚರ್ಚೆಯ ಮಾತಾಡಿರುವುದರಿಂದ ಕೆಲವು ಸರಳ ಪ್ರಶ್ನೆಗಳನ್ನು ಮುಂದಿಡಬಯಸುತ್ತೇನೆ. ಸಮಗ್ರ ಬದಲಾವಣೆಯ ನೀತಿಯೆಂದು ಬಿಂಬಿತವಾಗುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನವನ್ನು ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಿಸಬೇಕೊ? ಉನ್ನತ ಶಿಕ್ಷಣದಿಂದ ಆರಂಭಿಸಬೇಕೊ? ಶಿಕ್ಷಣ ನೀತಿಯಲ್ಲಿ ಮೊದಲ ಎರಡು ವರ್ಷದ ಪೂರ್ವ ಪ್ರಾಥಮಿಕವನ್ನು 'ತಳಹದಿಯ ಹಂತ'ವೆಂದೂ ಆನಂತರದ ಮೂರು ವರ್ಷಗಳು 'ಸಿದ್ಧತಾ ಹಂತ'ವೆಂದೂ ಕರೆಯಲಾಗಿದೆ. ಆದರೆ ಪ್ರಾಥಮಿಕ ಹಂತದ ಬದಲು ಉನ್ನತ ಶಿಕ್ಷಣದಲ್ಲಿ ಅನುಷ್ಠಾನ ಮಾಡುತ್ತಿದ್ದು, ತಳಹದಿಯೇ ಇಲ್ಲದೆ, ಕಟ್ಟಡ ಕಟ್ಟಲು ಹೊರಟಂತೆ ಅಲ್ಲವೇ?

ಹೊಸ ಶಿಕ್ಷಣ ನೀತಿಯ ಪೀಠಿಕೆ, ಮೂಲತತ್ವಗಳು, ದೂರದರ್ಶಿತ್ವದ ಭಾಗಗಳಲ್ಲಿರುವ ಅನೇಕ ಆದರ್ಶದ ನುಡಿಗಟ್ಟುಗಳನ್ನು ನಿರಾಕರಿಸಲಾಗದು. ಪೀಠಿಕೆಯಲ್ಲಿ ವೈವಿಧ್ಯತೆಯ ಪ್ರಸ್ತಾಪವಿದೆ. ಮೂಲತತ್ವಗಳಲ್ಲಿ ಪ್ರಜಾಪ್ರಭುತ್ವ ಮನೋಧರ್ಮ, ವೈಜ್ಞಾನಿಕ ಮನೋಭಾವ ಮತ್ತು ಸಂವಿಧಾನಾತ್ಮಕ ಮೌಲ್ಯಗಳಿಗೆ ಮಹತ್ವ ನೀಡುವ ಮಾತುಗಳಿವೆ. ಭಾಗ ಎರಡರಲ್ಲಿ ನೈತಿಕತೆ, ಸಮಾನತೆ, ಮಾನವೀಯತೆ ಮತ್ತು ಬಹುತ್ವದ ಪ್ರಸ್ತಾಪವಿದೆ. ದೂರದರ್ಶಿತ್ವ ಭಾಗದಲ್ಲಿ 'ಭಾರತ ದೇಶವನ್ನು ಸುಸ್ಥಿರವಾಗಿ ಸಮಾನತಾ ಮನೋಧರ್ಮ ಹಾಗೂ ಸೃಜನಶೀಲ ಜ್ಞಾನ ಸಮಾಜವಾಗಿ ಪರಿವರ್ತಿಸುವ ದಿಸೆಯಲ್ಲಿ ಭಾರತೀಯ ಅಸ್ಮಿತೆಯ ಮೇಲೆ ಆಧಾರಗೊಂಡ ಶಿಕ್ಷಣ ವ್ಯವಸ್ಥೆಯನ್ನು ಸಾಕಾರಗೊಳಿಸುವುದು ಈ ರಾಷ್ಟ್ರೀಯ ಶಿಕ್ಷಣ ನೀತಿಯ ಮಹಾನ್ ಉದ್ದೇಶವಾಗಿದೆ' ಎಂದು ಘೋಷಿಸಲಾಗಿದೆ.

ಪರಿಚ್ಛೇದ 6.1ರಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಶಿಕ್ಷಣವು ಮಹತ್ವಪೂರ್ಣ ಸಾಧನ ಎಂದು ಪ್ರತಿಪಾದಿಸಲಾಗಿದೆ. ಇಲ್ಲಿರುವ ಆಶಯಗಳು ಸ್ವಾಗತಾರ್ಹವಾಗಿವೆ. ಆದರೆ 'ಭಾರತೀಯ ಅಸ್ಮಿತೆ'ಯನ್ನು ಹೇಗೆ ವ್ಯಾಖ್ಯಾನಿಸುತ್ತಾರೆಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಚಲನಶೀಲ ಪರಂಪರೆಯಾಗಿ ಪರಭಾವಿಸುವುದು ಅಸ್ಮಿತೆಯ ಸಕಾರಾತ್ಮಕ ನೆಲೆಯಾದರೆ, ಜಡ ಜನವಿರೋಧಿ ಸಂಪ್ರದಾಯಗಳ ನೆಲೆ ನಕಾರಾತ್ಮಕವಾದುದು. ಇಷ್ಟೆಲ್ಲ ಪ್ರಶಂಸಾತ್ಮಕ ಪರಿಕಲ್ಪನೆಗಳ ಪ್ರಸ್ತಾಪ ಮಾಡಿರುವ ಶಿಕ್ಷಣ ನೀತಿಯ 11.1ನೇ ಪರಿಚ್ಛೇದದಲ್ಲಿ 'ಭಾರತೀಯ ಶಿಕ್ಷಣ ನೀತಿಯನ್ನು ಮರಳಿ ತರುವ' ಮಾತನ್ನೂ ಆಡಿರುವುದು ಅನುಮಾನಗಳಿಗೆ ಕಾರಣವಾಗಿದೆ.

ಇಲ್ಲೀವರೆಗೆ ಇದ್ದದ್ದು ಭಾರತೀಯವಲ್ಲವೆ? ಆರಂಭಿಕ ಮೆಕಾಲೆ ಮಾದರಿ ಬದಲಾಗುತ್ತ ಬಂದದ್ದು ಕಾಣಿಸುತ್ತಿಲ್ಲವೆ? ಇಲ್ಲೀವರೆಗಿನ ಶಿಕ್ಷಣ ನೀತಿಯಲ್ಲೇ ವ್ಯಾಸಂಗ ಮಾಡಿ ಭಾರತವನ್ನು ಬೆಳಗಿದ ವಿಜ್ಞಾನಿಗಳೂ ವಿವಿಧ ತಜ್ಞರೂ ಕಲಾಕಾರರೂ ಇತಿಹಾಸಕಾರರೂ ದೇಶಭಕ್ತರೂ ಸಾಕಷ್ಟು ಜನರಿಲ್ಲವೆ? ಭಾರತಕ್ಕೆ ಅಂತರರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿಲ್ಲವೆ? ವಾಸ್ತವ ಹೀಗಿದ್ದರೂ ಭಾರತೀಯ ಶಿಕ್ಷಣ ನೀತಿಯನ್ನು ಮರಳಿ ತರುವ ಮಾತಿನ ಒಳಾರ್ಥವೇನು?

ಆದರ್ಶದ ಮಾತುಗಳು ಒಂದು ಕಡೆಗಾದರೆ, ಅನುಷ್ಠಾನದ ಮಾದರಿಗಳು ಇನ್ನೊಂದು ಕಡೆಗಿದ್ದು, ಕೆಲವು ಪ್ರಶ್ನೆಗಳಿಗೆ ಕಾರಣವಾಗಿವೆ. ಪೂರ್ವ ಪ್ರಾಥಮಿಕ ಹಂತವನ್ನು ಆರಂಭಿಸುವ ಪ್ರಸ್ತಾಪವನ್ನು ಸ್ವಾಗತಿಸುತ್ತಲೇ ನನ್ನದೊಂದು ಪ್ರಶ್ನೆಯಿದೆ. ಈ ಹಂತಕ್ಕೆ ಸೇರುವ ಮಕ್ಕಳ ವಯಸ್ಸು ಮತ್ತು ಅಂಗನವಾಡಿಗೆ ಹೋಗುವ ಮಕ್ಕಳ ವಯಸ್ಸಿನಲ್ಲಿ ಕೆಲವೇ ತಿಂಗಳ ಅಂತರವಿದೆ. ಮಕ್ಕಳು ಪೂರ್ವ ಪ್ರಾಥಮಿಕಕ್ಕೆ ಸೇರಿದರೆ ಅಂಗನವಾಡಿಗಳ ಗತಿ ಏನು? ಈ ಶಿಕ್ಷಣ ನೀತಿಯಲ್ಲಿ ಅಂಗನವಾಡಿಗಳನ್ನು ಶಕ್ತಿಶಾಲಿಯಾಗಿಸುವ ಮಾತನ್ನು ಆಡಿರುವುದು ನಿಜವಾದರೂ (1, 5, 6ನೇ ಅಂಶ) ಪೂರ್ವ ಪ್ರಾಥಮಿಕ ಮತ್ತು ಅಂಗನವಾಡಿಗಳನ್ನು ಒಟ್ಟಿಗೇ ನಿಭಾಯಿಸುವ ಪರಿಹಾರ ಮಾರ್ಗಗಳನ್ನು ಸೂಚಿಸಿಲ್ಲ.

ಇನ್ನು ಸಣ್ಣ ಶಾಲೆಗಳ ಬಗ್ಗೆ ಈ ಶಿಕ್ಷಣ ನೀತಿಯು ಆಕ್ಷೇಪಾರ್ಹ ನಿಲುವು ತಾಳಿದೆ. ಪರಿಚ್ಛೇದ 7.3ರಲ್ಲಿ ಸಣ್ಣ ಶಾಲೆಗಳು ಶಿಕ್ಷಣ ಕ್ಷೇತ್ರದಲ್ಲಿ ನಕಾರಾತ್ಮಕ ಪರಿಣಾಮ ಬೀರುತ್ತವೆಯೆಂದು ಹೇಳಲಾಗಿದೆ. ಇದು ಹಳ್ಳಿಹಳ್ಳಿಗಳಿಗೆ ಶಿಕ್ಷಣವನ್ನು ತಲುಪಿಸುವ ಉದ್ದೇಶಕ್ಕೆ ವಿರುದ್ಧವಾದ ನಿಲುವು; ಮಕ್ಕಳ ಶೈಕ್ಷಣಿಕ ಹಕ್ಕಿನ ಉಲ್ಲಂಘನೆ. ಅಂಗನವಾಡಿಯಿಂದ ಸೆಕೆಂಡರಿವರೆಗೆ ಸುಸಜ್ಜಿತವಾದ ಶಾಲಾ ಸಂಕೀರ್ಣಗಳನ್ನು 5ರಿಂದ 10 ಕಿಲೊ ಮೀಟರಿಗೆ ಒಂದರಂತೆ ಸ್ಥಾಪಿಸುವ ಪ್ರಸ್ತಾಪ ಮಾಡಿರುವುದು (7.6) ಸ್ವಾಗತಾರ್ಹ. ಆದರೆ ಇದು ಸಣ್ಣ ಶಾಲೆಗಳನ್ನು ನಾಶ ಮಾಡಬಾರದು, ಅಲ್ಲವೆ?



ರಾಜ್ಯಗಳ ಶೈಕ್ಷಣಿಕ ಸ್ವಾಯತ್ತತೆಗೆ ಧಕ್ಕೆ ತರುವ ಅಂಶಗಳು ಈ ಶಿಕ್ಷಣ ನೀತಿಯಲ್ಲಿರುವುದನ್ನು ಈಗ ಗಮನಿಸೋಣ. 8ನೇ ತರಗತಿಯವರೆಗಿನ ಪಠ್ಯಕ್ರಮವನ್ನು ಕೇಂದ್ರ ಸರ್ಕಾರದ ಎನ್‌ಸಿಇಆರ್‌ಟಿಯೇ ನಿರ್ಧರಿಸುತ್ತದೆ (1.3). ಶಿಕ್ಷಣದ ಕಲಿಕಾ ಕೌಶಲ, ಮೌಲ್ಯಮಾರ್ಗಗಳನ್ನೂ ಎನ್‌ಸಿಇಆರ್‌ಟಿಯೇ ಸೂಚಿಸುತ್ತದೆಯಲ್ಲದೆ (4.4) ತನ್ನದೇ ಪಠ್ಯಪುಸ್ತಕಗಳ ಸಾಮಗ್ರಿಯನ್ನೇ ರಾಜ್ಯಗಳು ಬಳಸಬೇಕೆಂದೂ ನಿರ್ಬಂಧಿಸಿ, ಸ್ಥಳೀಯವಾದದ್ದನ್ನು ತನ್ನ ಸಾಮಗ್ರಿಯ ಜೊತೆಗೆ ಸೇರಿಸಬಹುದೆಂದು 'ರಿಯಾಯಿತಿ' ನೀಡಲಾಗಿದೆ (4.3). ಹಾಗಾದರೆ ಇದೇ ಕೆಲಸಕ್ಕಾಗಿ ಇರುವ ರಾಜ್ಯದ ಡಿಎಸ್‌ಇಆರ್‌ಟಿಯ ಅಸ್ತಿತ್ವವನ್ನೇ ಗೌಣ ಮಾಡಿದಂತಲ್ಲವೆ? ಇದು ರಾಜ್ಯದ ಶೈಕ್ಷಣಿಕ ಸ್ವಾಯತ್ತತೆಯನ್ನು ಹತ್ತಿಕ್ಕುವ ಕ್ರಮವಲ್ಲವೆ?

ಪದವಿ ಶಿಕ್ಷಣದಲ್ಲಿ ಆಗಮನ (ಎಂಟ್ರಿ) ಮತ್ತು ನಿರ್ಗಮನ (ಎಕ್ಸಿಟ್) ಪದ್ಧತಿ ತಂದಿರುವುದು ಯಾವ ಸಾರ್ಥಕತೆಗೆಂದು ಅರ್ಥವಾಗುವುದಿಲ್ಲ. ಒಂದು ವರ್ಷಕ್ಕೆ ನಿರ್ಗಮಿಸಿದರೆ ಒಂದು ಪ್ರಮಾಣಪತ್ರ, ಎರಡು ವರ್ಷಕ್ಕೆ ನಿರ್ಗಮಿಸಿದರೆ ಇನ್ನೊಂದು ಡಿಪ್ಲೊಮಾ ಪ್ರಮಾಣಪತ್ರ ಪಡೆದು ಯಾವ ಕೆಲಸಕ್ಕೆ ಹೋಗುತ್ತಾರೆ? ಪದವಿಯನ್ನು ಪೂರ್ಣಗೊಳಿಸಲು ಪ್ರೋತ್ಸಾಹಿಸುವ ಬದಲು, ಬಿಡಲು ಉತ್ತೇಜಿಸುವುದು ಶಿಕ್ಷಣ ವಿರೋಧಿ ನೀತಿಯಾಗುವುದಿಲ್ಲವೆ?

ಈ ನೀತಿಗೆ ಕಳಶವಿಟ್ಟಂತೆ ಪರಿಚ್ಛೇದ 10.4ರಲ್ಲಿ ಶಿಕ್ಷಣ ಕ್ಷೇತ್ರವನ್ನು ಹಂತ ಹಂತವಾಗಿ ಸ್ವಾಯತ್ತಗೊಳಿಸುವ ಉದ್ದೇಶವನ್ನು ವ್ಯಕ್ತಪಡಿಸಿದ್ದು, ಇದು ಖಾಸಗಿಯವರ ಕೈಗೆ ಕೊಡುವ ಕ್ರಮವಾಗಿದೆ. ಆಗ ಬಡವರಿಗೆ ಉನ್ನತ ಶಿಕ್ಷಣದ ವಂಚನೆ ಮತ್ತು ಸಂವಿಧಾನಾತ್ಮಕ ಸಾಮಾಜಿಕ ನ್ಯಾಯದ ನಿರಾಕರಣೆ ಆಗುತ್ತದೆ. ಇದು 6.1ರಲ್ಲಿ ಹೇಳಿರುವ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಆದರ್ಶಕ್ಕೆ ಮಾರಕವಲ್ಲವೆ? ಈ ಮಾರಕ ಮಾದರಿಗೆ ಪೂರಕವಾಗಿ 7-8-2021ರಂದು ಹೊರಡಿಸಿರುವ ಸರ್ಕಾರಿ ಆದೇಶವನ್ನು ನೋಡಬಹುದು. ಪದವಿ ಕಾಲೇಜುಗಳಲ್ಲಿ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿಯುಳ್ಳ ಈ ಆದೇಶವು ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳು, ಸರ್ಕಾರಿ ಕಾಲೇಜುಗಳು ಮತ್ತು ಸಂಯೋಜಿತ ಕಾಲೇಜುಗಳಿಗೆ ಮಾತ್ರ ಅನ್ವಯಿಸುತ್ತದೆ. ಅಂದರೆ ಡೀಮ್ಡ್ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಿಗೆ, ಭಾಗಶಃ ಸ್ವಾಯತ್ತ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ. ಇದು ಶಿಕ್ಷಣದ ಕಾರ್ಪೊರೇಟೀಕರಣಕ್ಕೆ ಅವಕಾಶ ನೀಡುತ್ತದೆ. ಅವಕಾಶವಂಚಿತ ಸಮುದಾಯಗಳಿಗೆ ಮತ್ತಷ್ಟು ವಂಚನೆಯಾಗುತ್ತದೆಯಲ್ಲವೆ? ಈ ನಡುವೆ ಶೇ 40ರಷ್ಟು ಆನ್‌ಲೈನ್ ಶಿಕ್ಷಣಕ್ಕೆ ಅವಕಾಶ ನೀಡಿರುವುದು ಶೈಕ್ಷಣಿಕ ಅಸಮಾನತೆಯನ್ನು ಅಧಿಕಗೊಳಿಸುತ್ತದೆ. ಉದ್ಯಮ ಪರ ನೀತಿಯಾಗುತ್ತದೆ. ಬಡವರ ವಿರೋಧಿಯಾಗುತ್ತದೆ.

ವಿದ್ಯಾರ್ಥಿಗಳಿಗೆ ಬಹುಶಿಸ್ತೀಯ ವಿಷಯಗಳ ಆಯ್ಕೆಗೆ ಅವಕಾಶವಿದೆಯೆಂಬುದು ಶಿಕ್ಷಣ ನೀತಿಯ ಒಂದು ಮುಖ್ಯಾಂಶವಾಗಿದ್ದರೂ 'ಬಹುಪಾಲು' ಕಾಲೇಜುಗಳಲ್ಲಿ ಬಹುಶಿಸ್ತಿನ ವಿಷಯಗಳಿಲ್ಲ, ಕೊಠಡಿಗಳಿಲ್ಲ, ಬೋಧಿಸುವ ಅಧ್ಯಾಪಕರೂ ಸಾಕಷ್ಟಿಲ್ಲ. ಇಷ್ಟಾದರೂ ಶಿಕ್ಷಣ ನೀತಿಯನ್ನು ತರಾತುರಿಯಲ್ಲಿ ಜಾರಿ ಮಾಡುವುದೇಕೆ? ಮುಕ್ತ ಚರ್ಚೆಯ ಆಶ್ವಾಸನೆ ನೀಡಿದ ಮುಖ್ಯಮಂತ್ರಿಯವರು ಈ ಸರಳ ಪ್ರಶ್ನೆಗಳನ್ನು ಪರಿಶೀಲಿಸುತ್ತಾರೆಯೆ?

ಚುರುಮುರಿ



ಖಾದಿ ಪುರಾಣ

• ಲಿಂಗರಾಜು ಡಿ.ಎಸ್.

ತುರೇಮಣೆ ಮನೇಲಿ ನವರಾತ್ರಿ ಆರಂಭದೇಲೆ ಮಾತೃಪಕ್ಷ ರಾಂಗಾಗಿತ್ತು! ನಾನು ತಡಿನಾರದೆ ಕ್ವಾಣೆ ಒಳಿಕ್ಕೆ ಇಣುಕಿ ನೋಡಿದೆ. ಶ್ರೀಮತಿ ತುರೇಮಣೆ ಕೋಪಾಮುದ್ರೇಲಿದ್ರು. ಪಾತ್ರೆ, ತಟ್ಟೆ, ಲೋಟಗಳು ಮಾತಾಡ್ತಿದ್ದೋ! ತುರೇಮಣೆ ಅಧಿಕಾರ ಇಲ್ಲದ ರಾಜಕಾರಣಿ ಥರಾ ಮೆಲ್ಲಗೆ ಈಚೆಗೆ ಕಡದ್ರು.

'ಎಲ್ಲಾ ಬಸಣ್ಣನ ಕೃಪೆ ಕನೋ. ಮೊನ್ನೆ ಗಾಂಧಿ ಜಯಂತಿ ದಿನ ಖಾದಿ ಭಂಡಾರಕೋಗಿ ಅವರೆಂಡ್ರಿಗೆ ಹದಿನಾರು ಸಾವಿರದ ಸೀರೆ ಕೊಡಿಸಿದ್ದು ಕಂಡು ನಮ್ಮೋಳು, 'ಮೂಗಿಗೆ ಕವಣೆ ಕಟ್ಟಿಕ್ಯಂದು ದುಡಿಯದೇ ಆಯ್ತು. ಬಸಣ್ಣನ ನೋಡಿ ಕಲೀರಿ. ಕೊರೊನಾ ಬಂದ ಮ್ಯಾಲೆ ಅಂಗ್ಯ ಅಗಲ ಬಟ್ಟೇನೂ ಕೊಡಿಸಿಲ್ಲ ನಿಮ್ಮ ಯೇಗ್ತೆಗೆ' ಅಂತ ಮಕ್ಕುಗಿದಳು ಕಲಾ. ಅವರು ಸಿಎಂ ಕನಮ್ಮಿ, ನಾಗಣ್ಣ, ಇಜಿಯಣ್ಣನೇನು ಯಂಡ್ರಿಗೆ ಸೀರೆ ತಕ್ಕಂದಿಲ್ಲವಲ್ಲಾ ಅಂದ್ರೂ ಕೇಳಂಗಿಲ್ಲ ರಾಂಗಾಗ್ಯವಳೆ' ವ್ಯಥೆ ತೋಡಿಕ್ಯಂಡರು.

'ಈಗೇನು ಮಾಡೀರಿ?' ಅಂತಂದೆ.

'ನವರಾತ್ರೀಲಿ ಸ್ತ್ರೀಶಕ್ತಿ ಜೋರಾಗಿರತದೆ ಕನೋ. ಈಗ ಸೀರೆ ತರದೇ ಹೋದ್ರೆ ಮೂರೊತ್ತು ಬೂವಕ್ಕೆ ಕಷ್ಟಾಯ್ತದೆ' ಅಂತ ನಿಟ್ಟುಸಿರುಬುಟ್ಟರು.

'ರಾಜಕಾರಣಿಗಳು ಗಾಂಧಿ ಜಯಂತಿ ದಿನ ಹಿಂಗೇ ಆಟ ಕಟ್ಟ ನಮಗೆಲ್ಲಾ ಓಂಕಾರ ಹತ್ತಿಸಿಬುಡ್ತರೆ ಕನ್ರೋ! ಖಾದಿ ಉದ್ಧಾರುಕ್ಕೆ ಸರ್ಕಾರ ಏನು ಮಾಡ್ಯದೆ?' ಯಂಟಪ್ಪಣ್ಣ ಕೇಳಿತು.

'ಸರ್ಕಾರ ವರ್ಸೊಪ್ಪತ್ತೂ ಮಿನಿಸ್ಟ್ರಿಗೆ, ಸರ್ಕಾರಿ ಆಪೀಸುಗಳಿಗೆ ಕರ್ಟನ್ನು, ಗೆಸ್ಟ್‌ಸುಗಳಿಗೆ ಹಾಸಕೆ, ಹೊದಿಯಕೆ ಪಾಲಿಯೆಸ್ಟರ್, ಲಿನನ್ ಬಟ್ಟೆಗಳನ್ನ ಕೋಟಿಗಟ್ಲೆ ಖರ್ಚು ಮಾಡಿ ಅಂಗಡಿಗಳಿಂದ ಖರೀದಿ ಮಾಡ್ತದೆ. ಬಸಣ್ಣ 'ಇನ್ನು ಮೇಲೆ ಸರ್ಕಾರ ಖರೀದಿ ಮಾಡೋ ಎಲ್ಲಾ ಬಟ್ಟೆ ಖಾದಿ ಭಂಡಾರದ್ದೇ ಆಗಬೇಕು' ಅಂತ ಖಟ್‌ನಿಟ್ ಆದೇಸ ಹೊಂಡುಸಿದ್ರೆ ಖಾದಿ ಉದ್ಯಮ ಉದ್ಧಾರಾಯ್ತದೆ. ಗಾಂಧೀಜಿ ತತ್ವ ಪಾಲನೇನೂ ಆಯ್ತದೆ' ಅಂತ ಭಾಷಣ ಕೊಟ್ಟೆ.

'ನಿನ್ನ ಇಚಾರ ಪಾಲಿಸಿದ್ರೆ ಪರ್ಸೆಂಟೇಜ್ ಯಾರು ಕೊಡ್ತರ್ಲಾ?' ತುರೇಮಣೆಯ ಈ ಪ್ರಶ್ನೆಗೆ ಉತ್ತರ ನನಗೂ ಗೊತ್ತಿಲ್ಲ. ನಿಮಗೆ?

ಸಂಗತ

ಹುಲಿಗಾಗಿ ಭಾರತ- ಮೂಡುವುದೇ ಸಹಮತ?

ದೇಶದಾದ್ಯಂತ ವನ್ಯಜೀವಿ ಸಪ್ತಾಹ ನಡೆಯುತ್ತಿರುವ ಈ ಸಂದರ್ಭ, ಹುಲಿಗಳ ಆವಾಸ ಮತ್ತು ಸ್ಥಿತಿಗತಿ ಹೇಗಿದೆ ಎಂಬುದರ ಬಗ್ಗೆ ಗಮನಹರಿಸಲು ಸಕಾಲ

• ಗುರುರಾಜ್ ಎಸ್. ದಾವಣಗೆರೆ

ಭಾರತದಲ್ಲಿ ಹುಲಿಗಳ ಸಂಖ್ಯೆ ಗಣನೀಯ ಏರಿಕೆ ಕಂಡಿದ್ದು, ವಿಶ್ವದ ವನ್ಯದಲ್ಲಿರುವ ಒಟ್ಟು ಹುಲಿಗಳ ಪೈಕಿ ಶೇ 75ರಷ್ಟು ನಮ್ಮ ಕಾಡುಗಳಲ್ಲೇ ಇವೆ ಎಂಬ ಸಿಹಿ ಸುದ್ದಿಯನ್ನು ಪ್ರಧಾನಿ ಕಳೆದ ವರ್ಷ ನೀಡಿದ್ದರು. 2022ರ ವೇಳೆಗೆ ಹುಲಿಗಳ ಸಂಖ್ಯೆಯನ್ನು ದುಪ್ಪಟ್ಟು ಮಾಡುತ್ತೇವೆ ಎಂದು, ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನ 2010ರ ಹುಲಿ ಶೃಂಗಸಭೆಯಲ್ಲಿ ಪಣ ತೊಟ್ಟಿದ್ದೆವು, ಅದನ್ನು ನಾಲ್ಕು ವರ್ಷಗಳ ಮುಂಚೆಯೇ ಸಾಧಿಸಿದ್ದೇವೆ ಎಂದು ಹೇಳಿದ್ದರು.

2018ರ ಹುಲಿ ಅಂದಾಜು ಗಣತಿಯಲ್ಲಿ ನಲವತ್ನಾಲ್ಕು ಸಾವಿರ ಜನ, ಹದಿನೈದು ತಿಂಗಳು, ಐದುನೂರಕ್ಕೂ ಹೆಚ್ಚು ಅಧಿಕಾರಿಗಳ ನೇತೃತ್ವದಲ್ಲಿ ಸುಮಾರು ನಾಲ್ಕು ಲಕ್ಷ ಚದರ ಕಿ.ಮೀ. ವ್ಯಾಪ್ತಿಯ ಕಾಡುಗಳಲ್ಲಿ ಐದೂವರೆ ಲಕ್ಷ ಕಿ.ಮೀ.ನಷ್ಟು ಕಾಲ್ನಡಿಗೆಯಲ್ಲೇ ಕ್ರಮಿಸಿ, 27,000 ಕ್ಯಾಮೆರಾ ಅಳವಡಿಸಿ 2,400 ಹುಲಿಗಳ ಚಿತ್ರ ತೆಗೆದಿದ್ದರು. ಸಂಖ್ಯೆಯ ಹೆಚ್ಚಳ ಎಲ್ಲರಲ್ಲೂ ಸಮಾಧಾನ ಉಂಟುಮಾಡಿತ್ತಾದರೂ, ಸ್ವತಂತ್ರ ತಜ್ಞರು ಗಣತಿಯ ಕ್ರಮದಲ್ಲಿ ದೋಷವಿದೆ ಎಂದು ಆರೋಪಿಸಿದ್ದರು.

ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಸಹಯೋಗದಲ್ಲಿ ನಡೆದ ನ್ಯಾಷನಲ್ ಟೈಗರ್ ಎಸ್ಟಿಮೇಶನ್ (ಎನ್‌ಟಿಇ) ಪ್ರಕಾರ, ದೇಶದ ಕಾಡುಗಳಲ್ಲಿ ಒಟ್ಟು 2,967 ಹುಲಿಗಳಿವೆ ಎಂದು ಕೇಂದ್ರ ಪರಿಸರ ಸಚಿವಾಲಯ ದೃಢಪಡಿಸಿತ್ತು. ವಿಶ್ವದ ವನ್ಯದಲ್ಲಿರುವ ಒಟ್ಟು ಹುಲಿಗಳ ಸಂಖ್ಯೆ ಕೇವಲ 3,900. ಮುಕ್ಕಾಲುಪಾಲು ಹುಲಿಗಳು ನಮ್ಮಲ್ಲಿಯೇ ಇವೆ ಎಂಬುದು ಹೆಮ್ಮೆಯ ವಿಷಯವಾದರೂ ಹುಲಿಗಳ ಸಂಖ್ಯೆ ಏರಿದೆ ಎಂದು ಬಿಂಬಿಸುವುದರ ಹಿಂದೆ ಬೇರೆಯದೇ ಒತ್ತಡಗಳಿವೆ ಎಂದಿದ್ದಾರೆ ಸಂರಕ್ಷಣಾ ತಜ್ಞರು. '2010ರ ವಿಶ್ವ ಹುಲಿ ಶೃಂಗಸಭೆಯಲ್ಲಿ ಹುಲಿ ಸಂರಕ್ಷಣೆ ಮತ್ತು ಸಂಖ್ಯಾವೃದ್ಧಿಗೆಂದೇ ಕೋಟ್ಯಂತರ ಡಾಲರ್‌ಗಳ ನಿಧಿ ಮೀಸಲಿಡಲಾಗಿತ್ತು, ಅದರ ಸದ್ಬಳಕೆ ಆಗಿಲ್ಲವೆಂಬ ಅನುಮಾನ ಬರದಿರಲೆಂದು ಈ ರೀತಿಯ ಸಂಖ್ಯೆ ಹೆಚ್ಚಳವನ್ನು ತೋರಿಸಲಾಗುತ್ತಿದೆ' ಎಂಬರ್ಥದ ಮಾತುಗಳನ್ನಾಡಿದ್ದರು.

ಅಭಿವೃದ್ಧಿ ಯೋಜನೆಗಳಿಗೆ ಕಾಡು ಕಡಿಯಲಾಗುತ್ತಿದೆ, ಒತ್ತುವರಿ ನಡೆಯುತ್ತಿದೆ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮುಂದೆ ಕೇಸಿನ ಮೇಲೆ ಕೇಸು ಬೀಳುತ್ತಿದ್ದರೂ, ಹುಲಿಗಳ ಸಂಖ್ಯೆ ಏರಿದೆ ಎಂದು ದಾಖಲೆ ನೀಡಿದರೆ, ಅಭಿವೃದ್ಧಿಗೆ ಅಡ್ಡ ನಿಂತಿರುವ ಪರಿಸರವಾದಿಗಳ ಬಾಯಿಯನ್ನು ಸುಲಭವಾಗಿ ಮುಚ್ಚಿಸಬಹುದು ಎಂಬುದು ಸರ್ಕಾರದ ತರ್ಕ ಎನ್ನಲಾಗುತ್ತಿದೆ. ಕಳೆದ 12 ವರ್ಷಗಳಲ್ಲಿ ಹುಲಿಗಳ ಸಂಖ್ಯೆ ಶೇ 33ರಷ್ಟು ವೃದ್ಧಿಸಿದೆ ಎಂದಿರುವುದಕ್ಕೆ ವೈಜ್ಞಾನಿಕ ಆಧಾರ ಇಲ್ಲ ಎಂದಿರುವ ತಜ್ಞರು, ಗಣತಿ ಮಾಡುವಾಗ ಹುಲಿಗೆ ಮೂರು ವರ್ಷ ತುಂಬಿದ್ದರೆ ಮಾತ್ರ ಅದನ್ನು ವಯಸ್ಕ ಹುಲಿ ಎಂದು ಪರಿಗಣಿಸಬೇಕು, ಸಮೀಕ್ಷೆ ನಡೆಸಿರುವವರು ಒಂದು ವರ್ಷ ಪ್ರಾಯದ ಮರಿಯನ್ನೂ ಪರಿಗಣಿಸಿರುವುದು ಸರಿಯಲ್ಲ ಎಂದಿದ್ದಾರೆ. ಸಂಖ್ಯೆ ಹೆಚ್ಚಳವಾಗಿದೆ ಎಂದು ಬಿಂಬಿಸಿ ಅಪಾರ ಧನಸಹಾಯ ಪಡೆಯಬಹುದೇ ಹೊರತು, ದೂರಗಾಮಿ ಯೋಜನೆಗಳಿಗೆ ಇದರಿಂದ ಯಾವ ಪ್ರಯೋಜನವೂ ಇಲ್ಲ, ಸಂರಕ್ಷಣೆಯ ನಿಜವಾದ ಅರ್ಥವೇ ಮರೆಯಾಗುತ್ತದೆ ಎನ್ನುತ್ತಾರೆ.

2004ರಲ್ಲೂ ಹೀಗೆಯೇ ಆಗಿತ್ತು. ಹೆಜ್ಜೆ ಗುರುತನ್ನು ಆಧರಿಸಿ, ದೇಶದಲ್ಲಿ 3,642 ಹುಲಿಗಳಿವೆ ಎಂದು ಸರ್ಕಾರ ಹೇಳಿತ್ತು. ಎರಡು ವರ್ಷಗಳ ನಂತರ, ಇರುವುದು ಕೇವಲ 1,411, ಎಲ್ಲೋ ತಪ್ಪಾಗಿದೆ ಎಂದು ವಿವರಣೆ ನೀಡಿತ್ತು. ಈಗ ತೆಗೆಯಲಾಗಿರುವ ಚಿತ್ರಗಳಲ್ಲಿ ಹಲವು ರಿಪೀಟ್ ಆಗಿವೆ ಎಂದಿರುವ ತಜ್ಞರು, ಪ್ರತೀ ಏಳು ಹುಲಿಗಳಲ್ಲಿ ಒಂದು ಹಾಳೆಯ ಮೇಲಿನ ಅಂಕಿಯಾಗಿದೆ. ಹಾಗಾಗಿ ಸಮೀಕ್ಷೆಯ ಮಾದರಿಯಲ್ಲೇ ದೋಷವಿದೆ, ಇದನ್ನು ತೀವ್ರವಾಗಿ ಪರಾಮರ್ಶಿಸಬೇಕು ಎಂದಿದ್ದಾರೆ.



ಕಳ್ಳಬೇಟೆ, ಆವಾಸ ಒತ್ತುವರಿ, ಮಾನವ- ಪ್ರಾಣಿ ಸಂಘರ್ಷ, ಆಂತರಿಕ ಹೋರಾಟಗಳಿಂದಾಗಿ ವಯಸ್ಕ ಹುಲಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕಳೆದ ವರ್ಷ ಲಾಕ್‌ಡೌನ್ ಆಗಿ ಮಾಂಸ ಮಾರಾಟಕ್ಕೆ ನಿರ್ಬಂಧ ಹೇರಿದಾಗ, ಹುಲಿಯ ಬಲಿಪ್ರಾಣಿಯಾದ ಜಿಂಕೆಯನ್ನು ಬೇಟೆಯಾಡಿದ ಹಲವು ಪ್ರಕರಣಗಳು ದೇಶದಾದ್ಯಂತ ವರದಿಯಾಗಿದ್ದವು. ಶಿವಮೊಗ್ಗ, ಕೊಡಗು ಜಿಲ್ಲೆಯ ಹುಲಿ ಕಾಡುಗಳಲ್ಲಿ ಜಿಂಕೆ ಬೇಟೆಯಾಡಿದ್ದ ಪ್ರಕರಣಗಳು ಬೆಳಕಿಗೆ ಬಂದಿದ್ದವು. ಹುಲಿಗಳ ಸ್ವರ್ಗ ಎಂದೇ ಖ್ಯಾತವಾಗಿದ್ದ ರಣಥಂಬೋರ್‌ನ ಕಾಡಿನಲ್ಲಿ ಕಳೆದ ಹತ್ತು ವರ್ಷಗಳಲ್ಲಿ 46 ವಯಸ್ಕ ಹುಲಿಗಳು ಕಾಣೆಯಾಗಿವೆ.

ಸ್ವಾಯತ್ತ ಸಂಸ್ಥೆಯಾದ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಅನುದಾನ ನಿಲ್ಲಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಹುಲಿ ಸಂರಕ್ಷಣೆಯ ಕೆಲಸಗಳಿಗೆ ಹಿನ್ನಡೆಯಾಗಲಿದೆ. ಜೀವಜಾಲದಲ್ಲೇ ಅಪರೂಪದ ಹಾಗೂ ಅನಿವಾರ್ಯ ಸ್ಥಾನ ಹೊಂದಿರುವ ಹುಲಿ ವಿನಾಶದ ಅಂಚಿಗೆ ಬಂದು ನಿಂತಿರುವುದು ಮಾನವನ ದಾಳಿಯ ಸಂಕೇತವೆನಿಸಿದೆ.

ಸಂರಕ್ಷಿತ ಅರಣ್ಯ ವ್ಯಾಪ್ತಿಯಲ್ಲಿ ಹೆದ್ದಾರಿ, ಐಷಾರಾಮಿ ಪ್ರವಾಸೋದ್ಯಮ, ಹುಲಿ ಆಹಾರವಾದ ಜಿಂಕೆ, ಕಡವೆ, ಕಾಡುಹಂದಿಗಳ ನಿರಂತರ ಬೇಟೆ ನಿಂತಾಗ ನಮ್ಮಲ್ಲಿ ಹುಲಿಗಳ ಸಂಖ್ಯೆ ತಾನೇ ತಾನಾಗಿ ಹೆಚ್ಚುತ್ತದೆ. ತುರ್ತು ವೈಜ್ಞಾನಿಕ ವಿಧಾನಗಳನ್ನು ಬಳಸಿ ಹುಲಿ- ಮಾನವ ಸಂಘರ್ಷ ತಡೆಯಬೇಕಿದೆ.

ವಾಚಕರ ವಾಣಿ

ಲಂಗುಲಗಾಮಿಲ್ಲದ ಪ್ರವಾಸಿಗರು

ರಾಜ್ಯದ ಧಾರ್ಮಿಕ ಕ್ಷೇತ್ರಗಳಾದ ಧರ್ಮಸ್ಥಳ ಮತ್ತು ಕುಕ್ಕೆ ಸುಬ್ರಹ್ಮಣ್ಯಕ್ಕೆ ಪ್ರವಾಸಕ್ಕೆಂದು ಸ್ನೇಹಿತರ ಜೊತೆ ಇತ್ತೀಚೆಗೆ ನಾನು ಚಾರ್ಮಾಡಿ ಘಾಟಿಯ ಮೂಲಕ ಕಾರ್‌ನಲ್ಲಿ ತೆರಳಿದ್ದೆ. ಚಾರ್ಮಾಡಿ ಗ್ರಾಮದ ಬಳಿ ಬರುವ ಫಾಲ್ಸ್ ಹತ್ತಿರ ತುಂಬಾ ಕಿರಿಕಿರಿ ಎನಿಸಿತು. ಯಾಕೆಂದರೆ ಈ ರಸ್ತೆಯ ಮೂಲಕ ಬರುವ ಪ್ರವಾಸಿಗರು ಫಾಲ್ಸ್ ಜೊತೆಗೆ ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ರಸ್ತೆಬದಿಯಲ್ಲಿಯೇ ವಾಹನಗಳನ್ನು ನಿಲ್ಲಿಸಿ, ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದರು ಮತ್ತು ಹಾಡು ಹಾಕಿಕೊಂಡು ರಸ್ತೆ ನಡುವೆಯೇ ಡಾನ್ಸ್ ಮಾಡುತ್ತಿದ್ದರು. ಇದರಿಂದ ಟ್ರಾಫಿಕ್ ಜಾಮ್ ಆಗಿ ರಸ್ತೆಯಲ್ಲಿ ಸಂಚರಿಸುವವರಿಗೆ ತೊಂದರೆಯಾಯಿತು. ರಸ್ತೆಯು ಕಿರಿದಾಗಿರುವುದರಿಂದ ಮತ್ತು ಅಪಾಯಕಾರಿ ತಿರುವುಗಳಿರುವುದರಿಂದ, ಇಂತಹ ಕೃತ್ಯಗಳಿಂದ ಅಪಘಾತಗಳಾಗುವ ಸಂಭವವೂ ಉಂಟು.

ಮೂರು ತಿಂಗಳ ಹಿಂದೆ ಪ್ರವಾಸಿಗರ ಹುಚ್ಚಾಟವು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾದ ಪರಿಣಾಮ ಕೆಲ ದಿನಗಳ ಕಾಲ ಪೊಲೀಸ್ ಕಾವಲು ಹಾಕಲಾಗಿತ್ತು. ಈಗ ಅಂತಹ ವ್ಯವಸ್ಥೆ ಇಲ್ಲದ್ದರಿಂದ ಪ್ರವಾಸಿಗರಿಗೆ ಲಂಗುಲಗಾಮು ಇಲ್ಲದಂತಾಗಿದೆ. ಇಲ್ಲಿ ಮುಂದೆ ಯಾವುದೇ ರೀತಿಯ ದೊಡ್ಡ ಅನಾಹುತ ಸಂಭವಿಸುವ ಮುನ್ನ ಜಿಲ್ಲಾಡಳಿತ ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

'ಆ್ಯಕ್ಸಿಡೆಂಟ್' ನೆನಪಿಸಿದ ಹೇಯ ಕೃತ್ಯ

ಉತ್ತರಪ್ರದೇಶದಲ್ಲಿ ಪ್ರತಿಭಟನಾನಿರತರ ಮೇಲೆ ಸಚಿವರೊಬ್ಬರ ಬೆಂಗಾವಲು ಪಡೆಯ ವಾಹನಗಳು ಹರಿದು ರೈತರು ಸಾವಿಗೀಡಾಗಿರುವುದು ಶಂಕರ್‌ನಾಗ್ ಅವರ 'ಆ್ಯಕ್ಸಿಡೆಂಟ್' ಚಲನಚಿತ್ರವನ್ನು ನೆನಪಿಸುವಂತಿದೆ. ಈ ಹೇಯ ಕೃತ್ಯದ ವಿರುದ್ಧ ದನಿ ಎತ್ತಬೇಕಾದ ಜನಪ್ರತಿನಿಧಿಗಳು ಪಕ್ಷನಿಷ್ಠೆ, ವ್ಯಕ್ತಿನಿಷ್ಠೆ, ಅಧಿಕಾರ ವ್ಯಾಮೋಹ, ಕುರ್ಚಿಯ ಪ್ರೀತಿಗೆ ತಮ್ಮ ಸಂವೇದನೆ, ಸೂಕ್ಷ್ಮತೆಗಳನ್ನು ಮಾರಿಕೊಂಡು ಬೆತ್ತಲಾಗಿ ನಿಲ್ಲುತ್ತಾರೆ. ಕೊಲೆ, ಹತ್ಯೆ, ಅತ್ಯಾಚಾರ, ದೌರ್ಜನ್ಯಗಳನ್ನು ಸಂಭ್ರಮಿಸುವ ಸಂಸ್ಕೃತಿಯನ್ನು ಪೋಷಿಸಲಾಗುತ್ತಿದೆ. ಕನಿಷ್ಠ ಮಾನವಪ್ರಜ್ಞೆ ಇರುವ ಪ್ರತಿಯೊಬ್ಬ ಪ್ರಜೆಯೂ ಈ ಹತ್ಯೆಯ ವಿರುದ್ಧ ದನಿ ಎತ್ತಬೇಕಿದೆ. ದನಿ ಎತ್ತೋಣ, ಕ್ಷೀಣವಾದರೂ ಸರಿ ಈ ದನಿ ಕ್ರೂರ ವ್ಯವಸ್ಥೆಯನ್ನು ಎಚ್ಚರಿಸಲಿದೆ.

ನಾ.ದಿವಾಕರ, ಮೈಸೂರು

ಫ್ಲೆಕ್ಸ್ ಹಾವಳಿ: ಅನಾಹುತಕ್ಕೆ ಮುನ್ನ ಎಚ್ಚೆತ್ತುಕೊಳ್ಳಿ

ಬೆಂಗಳೂರಿನಲ್ಲಿ ಫ್ಲೆಕ್ಸ್ ನಿಯಂತ್ರಣಕ್ಕೆ ಕೋರ್ಟ್ ಆದೇಶ ನೀಡಿತ್ತು. ರಾಜಧಾನಿಯ ಅಂದ ಹಾಳಾಗುತ್ತಿದ್ದುದನ್ನು ಮನಗಂಡ ನ್ಯಾಯಾಲಯದ ಈ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು (ಬಿಬಿಎಂಪಿ) ಒಂದೆರಡು ವರ್ಷಗಳ ಕಾಲ ಕಟ್ಟುನಿಟ್ಟಾಗಿ ಪಾಲಿಸಿದರು. ಇತ್ತೀಚೆಗೆ ಹಲವಾರು ಕಾರಣಗಳ ನೆಪವೊಡ್ಡಿ ಮತ್ತೆ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ. ಇಂತಹದ್ದೇ ಕಾರಣ ಎನ್ನುವಂತಿಲ್ಲ. ಕೊರೊನಾ ಪ್ರಚಾರ, ಸರ್ಕಾರದ ಕೆಲಸಗಳ ಶಂಕುಸ್ಥಾಪನೆ, ಉದ್ಘಾಟನೆ, ಜನ್ಮದಿನ ಈ ರೀತಿಯ ಕಾರಣಗಳಿಗಾಗಿ ಜನಪ್ರತಿನಿಧಿಗಳ ಫೋಟೊ ಸಮೇತ ಫ್ಲೆಕ್ಸ್‌ಗಳು ಎಲ್ಲೆಡೆ ಕಂಡುಬರುತ್ತಿವೆ. ಜನಪ್ರತಿನಿಧಿಗಳ ಹಿಂಬಾಲಕರು ಹಟಕ್ಕೆ ಬಿದ್ದವರಂತೆ, ಫ್ಲೆಕ್ಸ್ ಮಾಡಿಸಿದರೆ ತಮ್ಮ ನಾಯಕರ ಕೃಪೆಗೆ ಪಾತ್ರರಾಗುತ್ತೇವೆ ಎಂಬ ಭ್ರಮೆಯಲ್ಲಿ ಲಕ್ಷಾಂತರ ರೂಪಾಯಿ ವ್ಯಯ ಮಾಡುತ್ತಿದ್ದಾರೆ. ಎಷ್ಟೋ ದಿನಗಳಾದರೂ ತೆಗೆಯದ ಫ್ಲೆಕ್ಸ್, ಬ್ಯಾನರ್‌ಗಳಿಂದ ಮಳೆಗಾಲದಲ್ಲಿ, ಹೆಚ್ಚು ಗಾಳಿ ಬಂದಾಗ ಅವು ಮೋರಿಗೋ ಒಳಚರಂಡಿಗೋ ಬಿದ್ದು ನೀರು ನಿಂತು ಅನಾಹುತಗಳಾಗುತ್ತವೆ. ಕಾರ್ಯಕ್ರಮ ಆದಮೇಲೆ ಅವುಗಳನ್ನು ತೆಗೆಸಲು ಆಯೋಜಕರು ಮನಸ್ಸು ಮಾಡುವುದಿಲ್ಲ. ಕಾರ್ಯಕ್ರಮ ಮುಗಿದ ಮಾರನೇ ದಿನ ಅವುಗಳನ್ನು ತೆಗೆಯುವಂತೆ ಬಿಬಿಎಂಪಿ ನೋಡಿಕೊಳ್ಳಬೇಕು.

ಡಾ. ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಸ್ಮಾರಕ ಭವನ: ನೈಜ ಮೌಲ್ಯ ಮರೆಯಾಗದಿರಲಿ

ಕನ್ನಡ ಸಣ್ಣಕಥೆಗಳಿಗೆ ಆಕಾರ ಸಾಕಾರವನ್ನು ನೀಡಿದ ಗೌರವಾನ್ವಿತ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸ್ಮಾರಕ 'ಮಾಸ್ತಿ ಭವನ' ನಿರ್ಮಾಣದ ಬಗ್ಗೆ ಪತ್ರಿಕೆ ಕಳಕಳಿ ಹೊಂದಿರುವುದನ್ನು (ಪ್ರ.ವಾ., ಅ. 2) ಸ್ವಾಗತಿಸುತ್ತಾ, ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಸಾಮಾಜಿಕ, ಸಾಹಿತ್ಯ, ಸಾಂಸ್ಕೃತಿಕ, ರಾಜಕೀಯ, ವಿಜ್ಞಾನ, ಕ್ರೀಡೆ ಈ ಮುಂತಾದ ಕ್ಷೇತ್ರಗಳಲ್ಲಿ ಗಣನೀಯವಾಗಿ, ಜನಪರ ಕಾಳಜಿ ಹೊಂದಿ ಸೇವೆ ಸಲ್ಲಿಸಿದವರಿಗೆ ಕೃತಜ್ಞತಾಪೂರ್ವಕವಾಗಿ ಗೌರವ ಸಲ್ಲಿಸುವ ಕುರುಹಾಗಿ ಇಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಜಗತ್ತಿನಾದ್ಯಂತ ಇರುವ ಒಂದು ವಾಡಿಕೆಯಾಗಿದೆ. ಇದೇನೋ ಸರಿ. ಹಾಗೆಂದು ಗತಿಸಿದ ಸಾಧಕರಿಗೆಲ್ಲ ಕಟ್ಟಡ ಕಟ್ಟಿಯೇ ಗೌರವ ಸೂಚಿಸಬೇಕೆಂದೇನೂ ಇಲ್ಲ. ಮುಖ್ಯವಾಗಿ, ಸ್ಮರಣೀಯರಾದವರ ಸಾಮಾಜಿಕ ಕೊಡುಗೆಗಳನ್ನು ಕಾಲದಿಂದ ಕಾಲಕ್ಕೆ ಚಿರಂತನವಾಗಿ ನಡೆನುಡಿಗಳಲ್ಲಿ ಉಳಿಸಿಕೊಂಡು ಹೋಗುವುದೇ ಆಗಿದೆ. ವಾಸ್ತವಿಕವಾಗಿ, ಅಂಥವರು ಮುಂದಿನ ಜನಾಂಗಕ್ಕೆ ಸ್ಫೂರ್ತಿದಾಯಕ. ಅದಿಲ್ಲದೆ ಬರೀ ಕಟ್ಟಡಗಳನ್ನೇ ಕಟ್ಟುತ್ತಾಹೋದರೆ, ಅವುಗಳ ನೈಜ ಮೌಲ್ಯಗಳು ನಾಪತ್ತೆಯಾಗಿ ಜನರಿಂದ ಅವಜ್ಞೆಗೆ ಒಳಗಾಗಬಹುದು. ಆದಕಾರಣ, ಹಿರಿಯ ಕಥೆಗಾರರಾದ ಮಾಸ್ತಿಯವರ ಹೆಸರಿನಲ್ಲಿ ಕಟ್ಟಬೇಕೆಂದಿರುವ ಭವನವನ್ನು 'ಸಾಹಿತ್ಯ ಸಂಕೀರ್ಣ ಭವನ' ಎಂದು ಪರಿವರ್ತಿಸಿ, ಅದನ್ನು ಕೋಲಾರ ಜಿಲ್ಲೆಯಲ್ಲಿ ಸ್ಥಾಪಿಸಲಿ. ಅಲ್ಲಿಯೇ ಎಲ್ಲ ಸಾಹಿತಿಗಳ ಸ್ಮರಣೆಗೂ ಅವಕಾಶವೀಯುವಂತೆ ಮಾಡಲಿ. ಮುಖ್ಯವಾಗಿ, ಆ ಸಾಹಿತಿಗಳ ಕೃತಿಗಳು ಅಲ್ಲಿ ಲಭ್ಯವಾಗಲಿ ಮತ್ತು ಅವರ ಸಿದ್ಧಿಸಾಧನೆಗಳನ್ನು ಕುರಿತು ವಿಚಾರ ಸಂಕಿರಣವೇ ಮೊದಲಾದುವನ್ನು ಅಲ್ಲಿ ನಡೆಸಲಿ.

ಇದೇ ರೀತಿ, ಪ್ರತೀ ಜಿಲ್ಲಾ ಕೇಂದ್ರದಲ್ಲೂ ಇಂಥ ಭವನ ನಿರ್ಮಾಣಗೊಳ್ಳಲಿ. ಅದು, ಇಡೀ ರಾಜ್ಯದ ಸಾಹಿತಿಗಳ ಸ್ಮಾರಕ ಭವನವಾಗಿ ರೂಪುಗೊಳ್ಳಲಿ. ಹಾಗಾದಾಗ, ಆಗಾಗ್ಗೆ ಸ್ಮಾರಕ ಭವನಗಳನ್ನು ಕಟ್ಟುವುದು ತಪ್ಪಿದಂತಾಗುತ್ತದೆ. ಆರ್ಥಿಕ ಹೊರೆ ತಗ್ಗುತ್ತದೆ. ಇದು, ಮಾಸ್ತಿಯವರಿಂದ ಹಿಡಿದು ಎಲ್ಲ ಸಾಹಿತ್ಯ ಶ್ರೇಷ್ಠರಿಗೆ ಸಲ್ಲಿಸುವ ನಿಜವಾದ ಗೌರವವಾಗುತ್ತದೆ. ಹಾಗೆಯೇ, ಉಳಿದ ಕ್ಷೇತ್ರಗಳ ಸಾಧಕರನ್ನೂ ಇದೇ ಮಾದರಿಯಲ್ಲಿ ಸ್ಮರಿಸಿದರಾಯಿತು. ಆಗ, ಅವರೆಲ್ಲರ ಸಿದ್ಧಿಸಾಧನೆಗಳು ಇಡೀ ನಾಡಿಗೆ ಪರಿಚಯವಾಗುತ್ತವೆ. ಮಾಸ್ತಿಯವರ ನೆನಪಿನಿಂದಲೇ ಈ ಕಾರ್ಯಕ್ರಮ ರೂಪುಗೊಳ್ಳಲಿ.

ಹೊರೆಯಾಲ ದೊರೆಸ್ವಾಮಿ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಂಡೋರ ಪೇಪರ್ಸ್

ಜಾಗತಿಕ ನಾಯಕರ 'ಭಂಡಾರ' ಬಯಲು

ಜಗತ್ತಿನ ಶ್ರೀಮಂತರು, ಖ್ಯಾತನಾಮರು, ರಾಜಕೀಯ ನಾಯಕರು ಮತ್ತು ಅತ್ಯಂತ ಪ್ರಭಾವಿ ನಾಯಕರ ರಹಸ್ಯ ವಹಿವಾಟುಗಳು, ಮುಚ್ಚಿಟ್ಟ ಆಸ್ತಿಗಳ ವಿವರ ಈಗ ಬಯಲಾಗಿದೆ. ದಾಖಲೆಗಳ ಸೋರಿಕೆ ಇತಿಹಾಸದಲ್ಲಿಯೇ ಇದು ಅತ್ಯಂತ ದೊಡ್ಡ ಮಟ್ಟದ ಸೋರಿಕೆ ಎನ್ನಲಾಗಿದೆ. ಪಂಡೋರ ಪೇಪರ್ಸ್ ಎಂಬ ಹೆಸರಿನಲ್ಲಿ 119 ಕೋಟಿ ಕಡತಗಳು ಬೆಳಕಿಗೆ ಬಂದಿವೆ.

ಪನಾಮಾ, ದುಬೈ, ಮೊನಾಕೊ, ಸ್ವಿಟ್ಜರ್‌ಲೆಂಡ್, ಕೇಮನ್ ಐಲ್ಯಾಂಡ್ಸ್‌ನಂತಹ ತೆರಿಗೆಮುಕ್ತ ಪ್ರದೇಶಗಳಲ್ಲಿ ಕಂಪನಿಗಳನ್ನು ಸ್ಥಾಪಿಸಲು ಸಲ್ಲಿಸಲಾದ ದಾಖಲೆಗಳನ್ನು ಅಂತರರಾಷ್ಟ್ರೀಯ ತನಿಖಾ ಪತ್ರಕರ್ತರ ಒಕ್ಕೂಟವು ಬಹಿರಂಗಪಡಿಸಿದೆ.

ಈ ಬೃಹತ್ ಪಟ್ಟಿಯಲ್ಲಿ 35 ದೇಶಗಳ ನಾಯಕರಿದ್ದಾರೆ. ಅವರಲ್ಲಿ ಹಲವರು ಈಗ ಅಧ್ಯಕ್ಷ, ಪ್ರಧಾನಿಯಾಗಿ ಅಧಿಕಾರದಲ್ಲಿ ಇರುವವರು. ಹಲವರು ಈ ಹಿಂದೆ ಅಧಿಕಾರದಲ್ಲಿ ಇದ್ದವರು. ತೆರಿಗೆ ಇಲ್ಲದ ದೇಶಗಳಲ್ಲಿ ಗುಟ್ಟಾಗಿ ಕಂಪನಿಗಳನ್ನು ಸ್ಥಾಪಿಸಿದವರಲ್ಲಿ ಸಚಿವರು, ನ್ಯಾಯಮೂರ್ತಿಗಳು, ಮೇಯರ್‌ಗಳು, ಸೇನಾಧಿಕಾರಿಗಳು ಮುಂತಾದವರ ಸಂಖ್ಯೆ 300ಕ್ಕೂ ಹೆಚ್ಚು.

ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷಕ್ಕೆ ದೇಣಿಗೆ ನೀಡಿದ್ದ ಪ್ರಮುಖರ ಹೆಸರುಗಳು ಕೂಡ ಈಗ ಬಯಲಾಗಿದೆ.

ನೂರಕ್ಕೂ ಹೆಚ್ಚು ಕೋಟ್ಯಧಿಪತಿಗಳ ಹೆಸರು ಪಟ್ಟಿಯಲ್ಲಿ ಇದೆ. ತಮ್ಮ ಆಸ್ತಿ ಅಥವಾ ವಿಹಾರ ನೌಕೆಗಳಂತಹ ಐಷಾರಾಮಿ ಸಾಧನಗಳನ್ನು ಇರಿಸಲು ಕೆಲವರು 'ಹುಸಿ' ಕಂಪನಿಗಳನ್ನು ತೆರೆದಿದ್ದಾರೆ. ದೊಡ್ಡ ಮೊತ್ತದ ಹಣವನ್ನು ಇರಿಸುವುದಕ್ಕೆ ಕಂಪನಿ ಸ್ಥಾಪಿಸಿದವರೂ ಇದ್ದಾರೆ. ಕೆಲವು ಕಂಪನಿಗಳಲ್ಲಿ ಪ್ರಾಚೀನ ವಸ್ತುಗಳು ಮತ್ತು ಕಲಾಕೃತಿಗಳೂ ಇವೆ. ಖ್ಯಾತ ಕಲಾವಿದ ಪಿಕಾಸೊನ ಕಲಾಕೃತಿ ಹೊಂದಿರುವ ಕಂಪನಿಯೂ ಇದೆ.

ಗಾಯಕಿ ಶಕೀರಾ

ಕೊಲಂಬಿಯಾದ ಖ್ಯಾತ ಪಾಪ್ ಗಾಯಕಿ ಶಕೀರಾ ಹೆಸರನ್ನು ವರದಿ ಉಲ್ಲೇಖಿಸಿದೆ. ವಿದೇಶದಲ್ಲಿ ಶಕೀರಾ ಹೊಂದಿರುವ ಸ್ವತ್ತುಗಳ ಮಾಹಿತಿಯನ್ನು ಬಹಿರಂಗಪಡಿಸಲಾಗಿದ್ದು, ಅವರು ಯಾವುದೇ ತೆರಿಗೆ ವಂಚನೆ ಎಸಗಿಲ್ಲ ಎಂದು ಅವರ ವಕೀಲರು ತಿಳಿಸಿದ್ದಾರೆ. 2012ರಿಂದ 2014ರ ಅವಧಿಯಲ್ಲಿ ₹108 ಕೋಟಿ ತೆರಿಗೆ ಪಾವತಿಸಲು ವಿಫಲವಾದ ಕಾರಣ ಶಕೀರಾ ವಿಚಾರಣೆಯನ್ನು ಎದುರಿಸಬೇಕು ಎಂದು ಸ್ಪೇನ್‌ನ ನ್ಯಾಯಾಧೀಶರು ಜುಲೈನಲ್ಲಿ ಶಿಫಾರಸು ಮಾಡಿದ್ದರು. ಹೀಗಾಗಿ ಶಕೀರಾ ತೆರಿಗೆ ವಂಚನೆ ಪ್ರಕರಣ ಎದುರಿಸುತ್ತಿದ್ದಾರೆ.

ಜೋರ್ಡನ್ ರಾಜ 2ನೇ ಅಬ್ದುಲ್ಲಾ

ಅಬ್ದುಲ್ಲಾ ಅವರು 1995ರಿಂದ 2017ರ ಅವಧಿಯಲ್ಲಿ ಕನಿಷ್ಠ 35 'ಹುಸಿ' ಕಂಪನಿಗಳನ್ನು ತೆರೆದಿದ್ದಾರೆ. ಅವರು ಅಮೆರಿಕ ಹಾಗೂ ಬ್ರಿಟನ್‌ನಲ್ಲಿ ಸುಮಾರು ₹800 ಕೋಟಿ ಮೌಲ್ಯದ 14 ಐಷಾರಾಮಿ ಮನೆಗಳನ್ನು ಖರೀದಿಸಿದ್ದಾರೆ. ಈ ಪೈಕಿ ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್‌ನ ₹170 ಕೋಟಿ ಮೌಲ್ಯದ ಓಷನ್ ವ್ಯೂ ಆಸ್ತಿಯೂ ಒಂದು.

ತಮ್ಮ ದೇಶದ ಕಾನೂನಿನ ಪ್ರಕಾರ, ಅಬ್ದುಲ್ಲಾ ಅವರು ತೆರಿಗೆ ಪಾವತಿಸಬೇಕಿಲ್ಲ ಎಂದು ಅವರ ವಕೀಲರು ಹೇಳಿದ್ದಾರೆ. ಹುಸಿ ಕಂಪನಿಗಳು ಅವರಿಗೆ ಸಂಬಂಧಿಸಿದವಲ್ಲ ಹಾಗೂ ಅವರು ಸಾರ್ವಜನಿಕ ಹಣವನ್ನು ದುರುಪಯೋಗ ಮಾಡಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.ಹಗರಣದಲ್ಲಿ ಮುಳುಗಿರುವ ಸರ್ಕಾರಕ್ಕೆ ಇದು ದೊಡ್ಡ ಹೊಡೆತವಾಗಿದೆ. ಅವರ ಸಹೋದರ ಹಮ್ಜಾ ಅವರು ಆಡಳಿತ ವ್ಯವಸ್ಥೆ ಅಸಮರ್ಥವಾಗಿದೆ ಎಂದು ಆರೋಪಿಸಿದ್ದರು. ಆದರೆ ತಾನು ದುರುದ್ದೇಶಪೂರಿತ ಸಂಚಿಗೆ ಬಲಿಯಾಗಿದ್ದೇನೆ ಎಂದು ಪ್ರತಿಪಾದಿಸಿದ್ದ ಅಬ್ದುಲ್ಲಾ, ಸೋದರನನ್ನು ಗೃಹಬಂಧನದಲ್ಲಿಟ್ಟರು.

ರಷ್ಯಾ ಅಧ್ಯಕ್ಷ ಪುಟಿನ್

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮೊನಾಕೊದಲ್ಲಿ ಆಸ್ತಿ ಹೊಂದಿದ್ದಾರೆ ಎಂದು ವರದಿಯಾಗಿದೆ. ದಾಖಲೆಗಳಲ್ಲಿ ಪುಟಿನ್ ಅವರನ್ನು ನೇರವಾಗಿ ಉಲ್ಲೇಖಿಸಲಾಗಿಲ್ಲವಾದರೂ, ಬಾಲ್ಯದ ಗೆಳೆಯ ಮತ್ತು ಮಾಜಿ ಪ್ರಿಯತಮೆ ಸೇರಿದಂತೆ ಅವರ ಹಲವಾರು ಆಪ್ತ ಸ್ನೇಹಿತರ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಲಾಗಿದೆ ಎಂದು ವರದಿಯಲ್ಲಿ ಇದೆ.

2003ರ ಸೆಪ್ಟೆಂಬರ್‌ನಲ್ಲಿ ಮೊನಾಕೊದಲ್ಲಿ ರಹಸ್ಯ ವಹಿವಾಟು ನಡೆದಿದೆ ಎಂದು ಹೇಳಲಾಗಿದೆ. ಒಂದು ಫ್ಲ್ಯಾಟ್ ಅನ್ನು ₹31 ಕೋಟಿಗೆ ಖರೀದಿಸಲಾಗಿದೆ. ಆದಾಗ್ಯೂ, ಫ್ಲ್ಯಾಟ್ ಖರೀದಿದಾರನ ಗುರುತು ರಹಸ್ಯವಾಗಿಯೇ ಇತ್ತು. ಖರೀದಿಸಿದವರು ಸ್ವೆಟ್ಲಾನಾ ಕ್ರಿವೊನೋಗಿಕ್ ಎಂದು ವರದಿ ಹೇಳಿದ್ದು, ಇವರು ಪುಟಿನ್ ಜತೆ ಸಂಬಂಧ ಹೊಂದಿದ್ದರು ಎಂದು ತಿಳಿಸಿದೆ.

ತೆರಿಗೆಮುಕ್ತ ಪ್ರದೇಶಗಳಲ್ಲಿ ಹೂಡಿಕೆ ಕಾನೂನು ಬಾಹಿರವೇ?

ವಾಣಿಜ್ಯ ವ್ಯವಹಾರ ನಡೆಸುವ ಉದ್ದೇಶದಿಂದ ಬೇರೆ ದೇಶಗಳಲ್ಲಿ ಸಂಸ್ಥೆಗಳನ್ನು ತೆರೆಯುವುದು ಕಾನೂನು ಬಾಹಿರವಲ್ಲ. ಆದರೆ ಅಂಥ ಕಂಪನಿಗಳು ತೆರಿಗೆ ಕಳ್ಳತನ ಅಥವಾ ಹಣ ಅಕ್ರಮ ವರ್ಗಾವಣೆಯಂತಹ ಕೆಲಸಗಳಿಗೆ ನೆರವು ನೀಡುತ್ತವೆ ಎಂದು ಐಸಿಐಜೆ ಹೇಳಿದೆ.

ಹೊರದೇಶಗಳಲ್ಲಿ ಅಥವಾ ಭಿನ್ನ ರೀತಿಯ ತೆರಿಗೆ ಪದ್ಧತಿ ಇರುವ ದೇಶಗಳಲ್ಲಿ ಹಣ ಹೂಡಲು ಭಾರತದ ಕಾನೂನು ಅವಕಾಶ ಕೊಡುತ್ತದೆ. ಆದರೆ ಅದರ ಕುರಿತು ಸರ್ಕಾರಕ್ಕೆ ವರದಿ ನೀಡಬೇಕಾಗುತ್ತದೆ. ತೆರಿಗೆ ತಪ್ಪಿಸಿಕೊಳ್ಳಲು ಅಕ್ರಮವಾಗಿ ಹಣ ಹೂಡುವುದು ಕಾನೂನು ಬಾಹಿರವಾಗಿದೆ.

ಸೋರಿಕೆ ಮಾಡಿದವರು ಯಾರು?

ಜಗತ್ತಿನ ನೂರಾರು ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳ ಒಕ್ಕೂಟವಾದ ತನಿಖಾ ಪತ್ರಕರ್ತರ ಅಂತರರಾಷ್ಟ್ರೀಯ ಒಕ್ಕೂಟ (ಐಸಿಐಜೆ) ಈ ತನಿಖೆಯನ್ನು ನಡೆಸಿದೆ. ಸುಮಾರು 150 ಮಾಧ್ಯಮ ಸಂಸ್ಥೆಗಳ 600 ಪತ್ರಕರ್ತರು ಈ ತನಿಖೆಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. 1970ರಿಂದ ಸೃಷ್ಟಿಯಾಗಿರುವ ಖಾತೆಗಳ ದಾಖಲೆಗಳನ್ನು ಕಲೆಹಾಕಲಾಗಿದೆ. ದಾಖಲೆಯ ಪ್ರಮಾಣ 3 ಟೆರಾಬೈಟ್‌ಗಳಷ್ಟು ಇದೆ ಎನ್ನಲಾಗಿದೆ. ಅಲ್ಲದೇ, ಆಯಾ ದೇಶಗಳ ಅಧಿಕೃತ ದಾಖಲೆಗಳ ಜೊತೆ ಹೋಲಿಸಿ ಮಾಹಿತಿಗಳನ್ನು ಖಚಿತಪಡಿಸಿಕೊಳ್ಳಲಾಗಿದೆ.

ಈ ಹಿಂದಿನ ಸೋರಿಕೆ...

2016ರ ಏ.3ರಂದು ಪನಾಮಾ ದಾಖಲೆ ಸೋರಿಕೆ ಆಗಿತ್ತು. ಹಲವಾರು ದೇಶಗಳ ತನಿಖಾ ಪತ್ರಕರ್ತರ ತಂಡ ಈ ಕುರಿತು ವರದಿ ಮಾಡಿತ್ತು. ಸಂಪೂರ್ಣ ವರದಿಯನ್ನು ಐಸಿಐಜೆ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿತ್ತು.

ತೆರಿಗೆ ವಂಚಿಸುವವರ ಸ್ವರ್ಗ ಎಂದೇ ಕರೆಸಿಕೊಳ್ಳುವ ಪನಾಮಾದ ಕಾನೂನು ಮತ್ತು ಕಾರ್ಪೊರೇಟ್ ಸೇವಾದಾರ ಸಂಸ್ಥೆ ಮೊಸಾಕ್ ಫಾನ್ಸಿಕ್ ಈ ಖಾತೆಗಳನ್ನು ರಚಿಸಿತ್ತು. ಅಕ್ರಮವಾಗಿ ಹಣ ಹೂಡಿಕೆ ಮಾಡಿದ್ದ ಭಾರತ, ಪಾಕಿಸ್ತಾನ ಸೇರಿ ಹಲವು ರಾಷ್ಟ್ರಗಳ ರಾಜಕೀಯ ಮುಖಂಡರು, ನಟ, ನಟಿಯರು ಹೆಸರುಗಳು ಈ ಸಂಸ್ಥೆಯ ಮೇಲೆ ನಡೆಸಿದ್ದ ತನಿಖೆಯಿಂದ ಬಯಲಾಗಿದ್ದವು. 2.14 ಲಕ್ಷ ಸಾಗರೋತ್ತರ ಹೂಡಿಕೆದಾರರ ಹೆಸರುಗಳು ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದವು. ಸುಮಾರು 2.6 ಟೆರಾಬೈಟ್‌ಗಳಷ್ಟು ಮಾಹಿತಿ ಸಂಗ್ರಹಿಸಲಾಗಿತ್ತು.

ಈ ವರದಿ ಹೊರಬಂದ ಬಳಿಕ ಹಲವಾರು ದೇಶಗಳಲ್ಲಿ ನಾಯಕತ್ವ ಬದಲಾವಣೆ ಆಗಿತ್ತು. ಐಸ್‌ಲೆಂಡ್ ಪ್ರಧಾನಿ ಹೆಸರೂ ಆ ಪಟ್ಟಿಯಲ್ಲಿ ಇದ್ದ ಕಾರಣ, ಐಸ್‌ಲೆಂಡ್‌ನಲ್ಲಿ ಪ್ರತಿಭಟನೆಗಳು ನಡೆದು ಪ್ರಧಾನಿ ರಾಜಿನಾಮೆ ನೀಡಿದ್ದರು. ಪಾಕಿಸ್ತಾನ ಮಾಜಿ ಪ್ರಧಾನಿ ನವಾಜ್ ಷರೀಫ್ ಕೂಡಾ ತಮ್ಮ ಪದವಿ ಕಳೆದುಕೊಳ್ಳಬೇಕಾಯಿತು. ಭಾರತದ 50ಕ್ಕೂ ಹೆಚ್ಚು ಖ್ಯಾತನಾಮರ ಹೆಸರು ಆ ಪಟ್ಟಿಯಲ್ಲಿ ಇತ್ತು. ನಟರಾದ ಅಮಿತಾಭ್ ಬಚ್ಚನ್, ಐಶ್ವರ್ಯಾ ಬಚ್ಚನ್ ಅವರ ಹೆಸರೂ ಇತ್ತು.

ಲಕ್ಸಂಬರ್ ಲೀಕ್ಸ್: ಲಕ್ಸ್‌ಲೀಕ್ಸ್ ಎಂದು ಕರೆಸಿಕೊಳ್ಳುವ ಈ ಹಗರಣವನ್ನು 2014ರಲ್ಲಿ ಐಸಿಐಜೆ ಬಯಲಿಗೆಳೆದಿತ್ತು. ಲಕ್ಸಂಬರ್ಗ್‌ನ ಸುಮಾರು 300 ಕಂಪನಿಗಳು ಸರ್ಕಾರಕ್ಕೆ ತೆರಿಗೆ ವಂಚಿಸಿದ ಮಾಹಿತಿ ಇದರಲ್ಲಿ ಒಳಗೊಂಡಿತ್ತು.

ಪ್ಯಾರಡೈಸ್ ಪೇಪರ್ಸ್: 2017ರಲ್ಲಿ ಜರ್ಮನಿಯ ಪತ್ರಕರ್ತರು ಈ ಹಗರಣ ಬಯಲಿಗೆಳೆದಿದ್ದರು. ಸಾಗರೋತ್ತರ ಹೂಡಿಕೆಗೆ ಸಂಬಂಧಿಸಿದ 1.34 ಕೋಟಿ ದಾಖಲೆಗಳನ್ನು ಪತ್ರಕರ್ತರು ಬಿಚ್ಚಿಟ್ಟಿದ್ದರು. ಭಾರತದ ಹಲವರ ಹೆಸರುಗಳೂ ಈ ಪಟ್ಟಿಯಲ್ಲಿ ಇದ್ದವು.

ಆಂಡ್ರೆಜ್ ಬಾಬಿಸ್



2009ರಲ್ಲಿ ಜೆಕ್ ಪ್ರಧಾನಿ ಆಂಡ್ರೆಜ್ ಬಾಬಿಸ್ ಅವರು ಫ್ರಾನ್ಸ್‌ನ ಕಾನ್ಸ್ ಬಳಿಯ ಮೌಗಿನ್ಸ್ ಬೆಟ್ಟದ ಮೇಲಿನ ಹಳ್ಳಿಯಲ್ಲಿ ಆಸ್ತಿ ಖರೀದಿಸಲು ನಕಲಿ ಕಂಪನಿಗಳಿಗೆ ₹1650 ಕೋಟಿ ಪಾವತಿಸಿದ್ದಾರೆ ಎಂದು ತನಿಖೆಯಿಂದ ತಿಳಿದುಬಂದಿದೆ. ನಕಲಿ ಕಂಪನಿಗಳಿಗೆ ಹಣ ಪಾವತಿಸಿದ್ದನ್ನು ಮತ್ತು ಆಸ್ತಿ ಖರೀದಿಸಿದ ಬಗ್ಗೆ ಬಾಬಿಸ್ ಅವರು ತಮ್ಮ ಆಸ್ತಿ ಘೋಷಣೆ ವೇಳೆ ಬಹಿರಂಗಪಡಿಸಿಲ್ಲ. ಬಾಬಿಸ್ ಅವರ ಪರೋಕ್ಷ ಒಡೆತನದ ರಿಯಲ್ ಎಸ್ಟೇಟ್ ಸಮೂಹ ಸಂಸ್ಥೆಯು 2018ರಲ್ಲಿ ಮೊನಾಕೊ ಕಂಪನಿಯನ್ನು ಖರೀದಿಸಿತ್ತು.

ಇದೇ ಶುಕ್ರವಾರ ಮತ್ತು ಶನಿವಾರ ನಡೆಯಲಿರುವ ಚುನಾವಣೆಯಲ್ಲಿ ತಮಗೆ ಸೋಲುಣಿಸಲು ಈ ಯತ್ನ ಮಾಡಲಾಗಿದೆ ಎಂದು ಬಾಬಿಸ್ ಅವರು ಟ್ವೀಟ್ ಮಾಡಿದ್ದಾರೆ. ತಾವೇನೂ ತಪ್ಪು ಮಾಡಿಲ್ಲ ಎಂದಿದ್ದಾರೆ.

ಟೋನಿ ಬ್ಲೇರ್ ದಂಪತಿ

1997ರಿಂದ 2007ರವರೆಗೆ ಬ್ರಿಟನ್‌ನ ಪ್ರಧಾನಿಯಾಗಿದ್ದ ಟೋನಿ ಬ್ಲೇರ್ ಅವರು ₹65 ಕೋಟಿ ಮೌಲ್ಯದ ವಿಕ್ಟೋರಿಯನ್ ಕಟ್ಟಡವನ್ನು ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್‌ನಲ್ಲಿ 2017ರಲ್ಲಿ ಖರೀದಿಸಿದ್ದರು. ಬ್ಲೇರ್ ಅವರ ಪತ್ನಿ ಚೆರ್ರಿ ಬ್ಲೇರ್ ಅವರ ಕಾನೂನು ಸಂಸ್ಥೆಯ ಕಚೇರಿಯು ಈ ಕಟ್ಟಡದಲ್ಲಿ ಇದೆ. ಬಹರೇನ್ ಉದ್ಯಮ ಮತ್ತು ಪ್ರವಾಸೋದ್ಯಮ ಸಚಿವ ಜಾಯೆದ್ ಬಿನ್ ರಶೀದ್ ಅಲ್-ಜಯಾನಿ ಅವರ ಕುಟುಂಬದಿಂದ ಬ್ಲೇರ್ ದಂಪತಿ ಕಂಪನಿ ಖರೀದಿಸಿದ್ದರು. ಕಟ್ಟಡದ ಬದಲಾಗಿ ಕಂಪನಿಯ ಷೇರುಗಳನ್ನು ಖರೀದಿಸಿದ್ದರಿಂದ ಇವರು ಸುಮಾರು ₹3 ಕೋಟಿ ಆಸ್ತಿ ತೆರಿಗೆ ಉಳಿಸಿದ್ದಾರೆ. ಆದರೆ ಇದರಲ್ಲಿ ತಮ್ಮ ತಪ್ಪೇನೂ ಇಲ್ಲ ಎಂದು ಚೆರ್ರಿ ಬ್ಲೇರ್ ಸಮಜಾಯಿಷಿ ನೀಡಿದ್ದಾರೆ.



ಕೀನ್ಯಾದ ಅಧ್ಯಕ್ಷ ಉಹುರು ಕೆನ್ಯಟ್ಟಾ

ಕೀನ್ಯಾದ ಅಧ್ಯಕ್ಷ ಉಹುರು ಕೆನ್ಯಟ್ಟಾ ಅವರ ಸಹೋದರರು ಸೇರಿದಂತೆ ಕುಟುಂಬದ ಆರು ಜನರು ಸೇರಿ, ವಿದೇಶದಲ್ಲಿ ₹225 ಕೋಟಿ ಮೌಲ್ಯದ 11 ಕಂಪನಿಗಳನ್ನು ಹೊಂದಿದ್ದಾರೆ ಎಂದು ಸೋರಿಕೆಯಾದ ದಾಖಲೆ ತೋರಿಸಿದೆ.

ಪಾಕ್ ಪ್ರಧಾನಿ ಇಮ್ರಾನ್ ಖಾನ್

ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರ ಹೆಸರು ನೇರವಾಗಿ ಪ್ರಸ್ತಾಪವಾಗಿಲ್ಲವಾದರೂ, ಅವರ ಸಂಪುಟದ ಸಚಿವರು, ಕುಟುಂಬ ಸದಸ್ಯರು ಹಾಗೂ ಆಪ್ತ ವಲಯದ ಹಲವಾರು ಸದಸ್ಯರು ರಹಸ್ಯ ಮಾಲೀಕತ್ವದ ಸಂಸ್ಥೆಗಳು ಮತ್ತು ಲಕ್ಷಾಂತರ ಡಾಲರ್ ಮೌಲ್ಯದ ಟ್ರಸ್ಟ್‌ಗಳನ್ನು ಹೊಂದಿದ್ದಾರೆ. ಹಣಕಾಸು ಸಚಿವ ಶೌಕತ್ ಫಯಾಜ್ ಮತ್ತು ಕುಟುಂಬ, ಇಮ್ರಾನ್ ಖಾನ್ ಅವರ ಹಿಂದಿನ ಹಣಕಾಸು ಮತ್ತು ಕಂದಾಯ ಸಲಹೆಗಾರನ ಪುತ್ರ ವಕಾರ್ ಮಸೂದ್ ಖಾನ್ ಈ ಪೈಕಿ ಕೆಲವರು. ಪಾಕಿಸ್ತಾನದ ಒಟ್ಟು 700 ಮಂದಿಯ ಹೆಸರು ವರದಿಯಲ್ಲಿದೆ.



ಅನಿಲ್ ಅಂಬಾನಿ, ಸಚಿನ್ ತೆಂಡೂಲ್ಕರ್ 'ಬಂಡವಾಳ'

ವಿದೇಶಗಳಲ್ಲಿ ರಹಸ್ಯವಾಗಿ ಹೂಡಿಕೆ ಮಾಡಿದ ಭಾರತೀಯರ ಪೈಕಿ ರಿಲಯನ್ಸ್ ಉದ್ಯಮ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ, ಕ್ರಿಕೆಟ್ ದಂತಕಥೆ ಎನಿಸಿದ ಭಾರತದ ಸಚಿನ್ ತೆಂಡೂಲ್ಕರ್, ವಜ್ರದ ವ್ಯಾಪಾರಿ ನೀರವ್ ಮೋದಿ ಅವರ ಸೋದರಿ ಪೂರ್ವಿ ಮೋದಿ, ಬಯೊಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ ಅವರ ಪತಿ ಜಾನ್ ಷಾ ಹೆಸರು ಇರುವುದು 'ಪಂಡೋರ ಪೇಪರ್ಸ್' ದಾಖಲೆಗಳಿಂದ ಬಹಿರಂಗವಾಗಿದೆ.

'ದಿವಾಳಿ' ಉದ್ಯಮಿಯಾಗಿ ಸಾಲದ ಸುಳಿಯಲ್ಲಿ ಸಿಕ್ಕ ಅನಿಲ್ ಅಂಬಾನಿ ಹಾಗೂ ಅವರ ಪ್ರತಿನಿಧಿಗಳು ವಿದೇಶಗಳಲ್ಲಿ 18 ಕಂಪನಿಗಳ ಒಡೆತನ ಹೊಂದಿದ್ದು ಹೇಗೆ ಎಂಬುದರ ವಿವರವನ್ನು 'ಪಂಡೋರ ಪೇಪರ್ಸ್' ವಿವರಿಸಿದೆ.

ಆದರೆ, ವಿದೇಶಗಳಲ್ಲಿ ಕಾನೂನುಬದ್ಧವಾಗಿಯೇ ನಿವೇಶನ ಖರೀದಿಸಿದ್ದಾಗಿ ಅಥವಾ ಹೂಡಿಕೆ ಮಾಡಿದ್ದಾಗಿ ಅಂಬಾನಿ ಮತ್ತು ಸಚಿನ್ ತೆಂಡೂಲ್ಕರ್ ಅವರ ವಕೀಲರು ಸ್ಪಷ್ಟಪಡಿಸಿದ್ದಾರೆ.

ಅನಿಲ್ ಅಂಬಾನಿ
ಹೂಡಿಕೆ ಎಲ್ಲಿ?: ಜೆರ್ಸಿ, ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್ (ಬಿವಿಐ), ಸಿಪ್ರಸ್
ಕಂಪನಿ: ಮೂರೂ ಕಡೆಯ 18 ಕಂಪನಿಗಳಲ್ಲಿ ಒಟ್ಟು 130 ಕೋಟಿ ಡಾಲರ್ ಹೂಡಿಕೆ (ಸುಮಾರು ₹9,620 ಕೋಟಿ)

ಜೆರ್ಸಿಯಲ್ಲಿ ಅಂಬಾನಿ ಒಡೆತನದ ಮೂರು ಕಂಪನಿಗಳಿದ್ದು ಅವು 2007 ಡಿಸೆಂಬರ್‌ನಿಂದ ಜನವರಿ 2008ರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಂಥವು. 2008 ಜನವರಿಯಲ್ಲಿಯೇ ಜೆರ್ಸಿಯಲ್ಲಿ ಮತ್ತೆರಡು ಕಂಪನಿಗಳು ಅಸ್ತಿತ್ವಕ್ಕೆ ಬಂದಿದ್ದು, ಅವುಗಳು 'ಅನಿಲ್ ಅಂಬಾನಿ ಪ್ರತಿನಿಧಿ' ಎನ್ನಲಾದ ಅನೂಪ್ ದಲಾಲ್ ಹೆಸರಿನಲ್ಲಿವೆ ಎಂಬುದನ್ನೂ ದಾಖಲೆಗಳು ಬಹಿರಂಗಪಡಿಸಿವೆ. ಇದರೊಂದಿಗೆ ದಲಾಲ್ ಹೆಸರಿನಲ್ಲಿ ಬಿವಿಐ ನಲ್ಲಿಯೂ ಬಂಡವಾಳ ನಿರ್ವಹಣೆಗಾಗಿಯೇ ಮತ್ತೊಂದು ಕಂಪನಿ ಇದೆ ಎಂಬುದು ತಿಳಿದುಬಂದಿದೆ.

ಸಚಿನ್ ತೆಂಡೂಲ್ಕರ್
ಕಂಪನಿ: ಸಾಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಹೂಡಿಕೆ ಎಲ್ಲಿ?: ಬ್ರಿಟಿಷ್ ಓರ್ಜಿನ್ ಐಲ್ಯಾಂಡ್ಸ್ (ಬಿವಿಐ)
ಸೇವೆ ಒದಗಿಸಿದ ಕಂಪನಿ: ಅಲ್ಕೋಗಲ್

ಹೂಡಿಕೆ ಮಾಡಲು ಸೇವೆ ಒದಗಿಸಿದ ಅಲ್ಕೋಗಲ್ ಕಂಪನಿಯ ದಾಖಲೆಗಳಲ್ಲಿ ಸಚಿನ್ ತೆಂಡೂಲ್ಕರ್, ಅವರ ಪತ್ನಿ ಅಂಜಲಿ ತೆಂಡೂಲ್ಕರ್ ಹಾಗೂ ಮಾವ ಆನಂದ್ ಮೆಹ್ತಾ ಅವರ ಹೆಸರಿನಲ್ಲಿ ಹೂಡಿಕೆ ಇರುವ ಮಾಹಿತಿ ಬಹಿರಂಗವಾಗಿದೆ. ಸಾಸ್ ಕಂಪನಿಯು 2016 ಜುಲೈನಲ್ಲಿ ದಿವಾಳಿಯಾದಾಗ, ತೆಂಡೂಲ್ಕರ್ ಕುಟುಂಬವು ₹ 19.90 ಕೋಟಿ ಮೌಲ್ಯದ ಷೇರುಗಳನ್ನು ವಾಪಸ್ ಪಡೆಯುತ್ತದೆ. ಅಂಜಲಿ ತೆಂಡೂಲ್ಕರ್ ಅವರು ಮೊದಲಿಗೆ 60 ಷೇರುಗಳನ್ನು ಖರೀದಿಸುತ್ತಾರೆ. 30 ಷೇರುಗಳನ್ನು ಖರೀದಿಸಿದ ಎರಡನೇ ಪ್ರಮಾಣಪತ್ರವು ಅವರ ತಂದೆಯ ಹೆಸರಿನಲ್ಲಿದೆ. ಉಳಿದ ಷೇರುಗಳನ್ನು ವಾಪಸ್ ಪಡೆದ ಬಗೆಗಿನ ಮಾಹಿತಿ ಇಲ್ಲ. ಆದರೆ, ಒಟ್ಟು 90 ಷೇರುಗಳ ಮೌಲ್ಯ ಅಂದಾಜು ₹ 60 ಕೋಟಿ ಎನ್ನಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ಭಾರಿ ಮಳೆ ಸುರಿದಿದೆ. ಜಲಾವೃತಗೊಂಡ ರಸ್ತೆಯಲ್ಲಿ ರಿಕ್ಷಾವೊಂದು ಪ್ರಯಾಸದಿಂದಲೇ ಸಂಚರಿಸುತ್ತಾ ಮಗುಚಿ ಬೀಳುವ ವಿಡಿಯೊವೊಂದು ವೈರಲ್ ಆಗಿದೆ. ರಿಕ್ಷಾದಲ್ಲಿ ರಾಜ್ಯದ ಪೊಲೀಸರು ಇರುವುದನ್ನು ದೃಶ್ಯಗಳಲ್ಲಿ ಕಾಣಬಹುದು. 'ಮುಖ್ಯಮಂತ್ರಿ ಯೋಗಿ ಆಡಳಿತದ ಅಭಿವೃದ್ಧಿ ಹೀಗಿದೆ ನೋಡಿ' ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಸೇವಾದಳ ಲೇವಡಿ ಮಾಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಭಾರಿ ಚರ್ಚೆಯೂ ಆಗಿತ್ತು.

ಈ ವಿಡಿಯೊ ರಾಜಸ್ಥಾನದ ದೌಸಾಗೆ ಸಂಬಂಧಿಸಿದ್ದು ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿರುವ ಉತ್ತರ ಪ್ರದೇಶ ಪೊಲೀಸ್ ಇಲಾಖೆ, ಇದು ರಾಜ್ಯಕ್ಕೆ ಸಂಬಂಧಿಸಿದ್ದ ವಿಡಿಯೊ ಅಲ್ಲ ಎಂದು ಸ್ಪಷ್ಟಪಡಿಸಿದೆ. ಕೊಲಾನ ಜೈಲಿನ ಕಡೆಗೆ ಹೊರಟಿದ್ದ ರಿಕ್ಷಾದ ಚಾಲಕನು ನೀರು ತುಂಬಿದ ರಸ್ತೆಯಲ್ಲೇ ವಾಹನ ಓಡಿಸಿದ್ದಾನೆ. ಆದರೆ ಗುಂಡಿ ಇದ್ದಿದ್ದರಿಂದ ರಿಕ್ಷಾ ಪಲ್ಟಿಯಾಗಿದೆ. ಅಕ್ಟೋಬರ್ 1ರಂದು ಈ ಘಟನೆ ನಡೆದಿದೆ ಎಂದು ದೈನಿಕ್ ಭಾಸ್ಕರ್, ಪಂಜಾಬ್ ಕೇಸರಿ ಮೊದಲಾದ ಮಾಧ್ಯಮಗಳು ವರದಿ ಮಾಡಿವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸೌಂದರ್ಯದ ಅರಿವು

ಸೌಂದರ್ಯವೊಂದು ದೈವರಹಸ್ಯ, ಸೃಷ್ಟಿವೊಲು|
ನಿಂದಿರ್ಪುದದರಾಶೆಯಿನೆ ಜೀವಿತಾಶೆ||
ಅಂದುವುದು ಕಣ್ಣಿಗದು ಸಂಸ್ಕೃತಿಗೆ ತಕ್ಕಂತೆ |
ಚೆಂದದರಿವೆ ತಪಸ್ಸೊ – ಮಂಕುತಿಮ್ಮ ||469||

ಪದ-ಅರ್ಥ: ಸೃಷ್ಟಿವೊಲು = ಸೃಷ್ಟಿಯಂತೆ, ನಿಂದಿರ್ಪುದದರಾಶೆಯಿನೆ = ನಿಂದಿರ್ಪುದು (ನಿಂತಿರುವುದು) + ಅದರ + ಆಶೆಯಿನೆ (ಆಸೆಯಿಂದ), ಅಂದುವುದು = ಹೊಂದಿಕೊಳ್ಳುವುದು, ಚೆಂದದರಿವೆ = ಚೆಂದದ + ಅರಿವೆ (ತಿಳಿವೆ)

ವಾಚ್ಯಾರ್ಥ: ಸೃಷ್ಟಿಯಂತೆ ಸೌಂದರ್ಯವೂ ಒಂದು ದೈವರಹಸ್ಯ. ಆ ಸೌಂದರ್ಯವನ್ನು ಪಡೆಯುವುದೇ ಜೀವಿತದ ಆಸೆ. ಸಂಸ್ಕೃತಿಗೆ ತಕ್ಕಂತೆ ಅದು ನಮ್ಮ ಕಣ್ಣಿಗೆ ಹೊಂದಿಕೊಳ್ಳುತ್ತದೆ. ಸೌಂದರ್ಯದ ಸರಿಯಾದ ಅರಿವನ್ನು ಪಡೆಯುವುದೇ ತಪಸ್ಸು.

ವಿವರಣೆ: ಸೌಂದರ್ಯವೆಂಬುದು ಒಂದು ಅನುಭವ. ಎಲ್ಲರ ಅನುಭವಗಳೂ ಒಂದೇ ರೀತಿ ಆಗಿರುವುದು ಸಾಧ್ಯವಿಲ್ಲ. ಕೆಲವರಿಗೆ ಮನೆಯಲ್ಲಿ ಸಾಕಿದ ನಾಯಿಯೋ, ಬೆಕ್ಕೋ ತುಂಬ ಸುಂದರ. ಅದನ್ನು ಬಿಟ್ಟಿರುವುದು ಸಾಧ್ಯವಿಲ್ಲ. ಅದನ್ನು ಅಪ್ಪಿ ಮುದ್ದಾಡುವುದೇನು, ಹಾಸಿಗೆಯಲ್ಲಿಯೇ ಮಲಗಿಸಿಕೊಳ್ಳುವುದೇನು! ಆದರೆ ಕೆಲವರಿಗೆ ಆ ಪ್ರಾಣಿಗಳು ಮನೆಯೊಳಗೆ ಬಂದರೆ ಅಸಹ್ಯ! ಅದಕ್ಕೇ ಕವಿ, ಸೌಂದರ್ಯವೆಂಬುದು ನೋಡುವವನ ಕಣ್ಣಿನಲ್ಲಿದೆ ಎನ್ನುತ್ತಾನೆ. ಸೌಂದರ್ಯವಿರುವುದು ಪ್ರಪಂಚದಲ್ಲಿ. ಅಲ್ಲಿ ಚೆಲುವಿನ ವಸ್ತುಗಳಿವೆ. ಆದರೆ ಅದನ್ನು ಸವಿಯುವ ಶಕ್ತಿ ಇರುವುದು ನಮ್ಮ ಮನಸ್ಸಿನಲ್ಲಿ. ಇವೆರಡರ ಸಂಗಮದಿಂದ ದೊರೆಯುವ ಆನಂದದ ಮರ್ಮವೇನು? ಪ್ರತಿಯೊಬ್ಬ ವ್ಯಕ್ತಿಗೂ ಬೇರೆಬೇರೆಯಾಗಿಯೇ ಕಾಣಿಸುವ, ಪ್ರಚೋದಿಸುವ, ಒಳಜಗತ್ತನ್ನು ಹೊರಜಗತ್ತಿಗೆ ಹೆಣೆಯುವ ಶಕ್ತಿ ಯಾವುದು? ಇದು ರಹಸ್ಯವೇ? ಬೇಂದ್ರೆಯವರ ಉತ್ತರ ಹೀಗಿದೆ.

ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ
ಕಣ್ಣಿಗೂ ಕಣ್ಣಾಗಿ ಒಳಗಿಹುದು
ರೂಪ ಲಾವಣ್ಯಕೆ ಅಳೆಯಲು ಬಾರದು
ಅವುಗಳೆ ಇದರೊಂದು ಕಣವಿಹವು

ಕಣ್ಣಿಗೆ ಕಾಣುವುದು ಸೌಂದರ್ಯವಲ್ಲ. ಅದು ವಿಶ್ವಚೈತನ್ಯದ ಸ್ಪಂದನ. ನಮ್ಮ ಬದುಕಿಗೆ ಅದೇ ಮೂಲ. ಸೌಂದರ್ಯದಿಂದ ದೊರಕುವ ಬಂಧುರತೆ ದೈವದ್ದು. ಆ ಬಂಧುರತೆಗಾಗಿ ಜೀವಗಳು ಕಾತರಿಸುತ್ತವೆ. ಆ ಸೌಂದರ್ಯವನ್ನು ಪಡೆಯುವುದೇ ಜೀವಿತದ ಆಸೆ. ಆದರೆ ಸೌಂದರ್ಯ ನಮಗೆ ಇಷ್ಟವಾಗುವುದು, ಇಷ್ಟವಾಗದೆ ಇರುವುದು ಅವರ ಸಂಸ್ಕೃತಿಗೆ ಬಿಟ್ಟ ವಿಷಯ. ಬೇರೆ ದೇಶದ ಜನರಿಗೆ ಸುಂದರವೆಂದು ತೋರುವುದು ಭಾರತೀಯರಿಗೆ ಅಶ್ಲೀಲವೆನ್ನಿಸಬಹುದು. ಖಜುರಾಹೋದ ಶಿಲ್ಪಗಳು ಕಲಾವಿದರಿಗೆ, ಶಿಲ್ಪಿಗಳಿಗೆ ಸೌಂದರ್ಯದ ಪ್ರತೀಕಗಳೆನಿಸಿದರೆ ರಸಿಕನಲ್ಲದವನಿಗೆ ಅವು ಕಾಮ ಪ್ರಚೋದಕ. ಹಾಗಾದರೆ ನಿಜವಾದ ಸೌಂದರ್ಯ ಯಾವುದು ಎಂಬುದನ್ನು ತಿಳಿಯುವುದು ಹೇಗೆ? ಅದು ದೇಹದಲ್ಲಿಲ್ಲ. ನಿಜವಾದ ಸೌಂದರ್ಯವು ಹೃದಯದ ಬೆಳಕು. ಆತ್ಮದ ವಿಕಾರತೆ ದೇಹದ ಸೌಂದರ್ಯವನ್ನು ಮರೆಮಾಚುವಂತೆ, ಆತ್ಮದ ಸೌಂದರ್ಯ ದೇಹದ ವಿಕಾರತೆಯನ್ನು ಮುಚ್ಚಿ ಮೋಡಿಮಾಡುತ್ತದೆ. ಮನಸ್ಸನ್ನು ಎಲ್ಲ ಭೌತಿಕ ಪ್ರಲೋಭನೆಗಳಿಂದ ಮುಕ್ತಗೊಳಿಸುವುದು ಆಂತರಿಕ ಸೌಂದರ್ಯವನ್ನು ಸವಿಯಲು ಸಜ್ಜುಗೊಳ್ಳುವ ಒಂದು ವಿಧಾನ. ಎಲ್ಲ ಚಂಚಲತೆಗಳಿಂದ ಮುಕ್ತವಾದಾಗ, ಭೌತಿಕ ಅಸ್ತಿತ್ವ ಲಯವಾಗುತ್ತದೆ. ಇದುವೆ ಅಧ್ಯಾತ್ಮದ ಅನುಭೂತಿ. ಅದನ್ನು ಸಾಧಿಸುವುದನ್ನೇ ಕಗ್ಗ 'ಚೆಂದದ ಅರಿವಿನ ತಪಸ್ಸು' ಎನ್ನುತ್ತದೆ. ❖

ದಿನ ಭವಿಷ್ಯ

ಮಂಗಳವಾರ ಅಕ್ಟೋಬರ್ 5, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಹಸ್ತೆ ಚತುರ್ದಶೀ ಗಂ. 29-51 (ಸಾ. 6-11) ಮಂಗಳವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 48-36 (ರಾ. 1-41) ಶುಕ್ಲ ನಾಮ ಯೋಗ ಗಂ. 15-33 ಭದ್ರೆ ಕರಣ ಗಂ. 0-57 ಉಪರಿ ಶಕುನಿ ಕರಣ ಗಂ. 28-54 ವಿಷ ಗಂ. 7-5 ಅಮೃತ ಗಂ 30-33 :
ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-12 ಸೂರ್ಯಾಸ್ತ: 6-04 ಅದೃಷ್ಟ ಸಂಖ್ಯೆ 7 9

ಮೇಷ: ಬೇರೆಯವರ ವಿವಾದಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾದೀತು. ಅಡ್ಡಿ ಆತಂಕಗಳಿಲ್ಲದ ಜೀವನದಿಂದಾಗಿ ಉಲ್ಲಾಸ ಮೂಡುವುದು. ಸ್ನೇಹಿತರಿಂದಾಗಿ ಸಂತೋಷ.

ವೃಷಭ: ಭಿನ್ನಾಭಿಪ್ರಾಯದಿಂದಾಗಿ ನಿಂತುಹೋದ ಕಾರ್ಯಗಳು ಒಮ್ಮತದಿಂದ ಸಾಧಿಸಲ್ಪಡುವವು. ಮದುವೆ ಮುಂತಾದ ಮಂಗಲ ಕಾರ್ಯಗಳ ನಿಶ್ಚಯ ಸಾಧ್ಯತೆ.

ಮಿಥುನ: ಬಿಚ್ಚು ಮನಸ್ಸಿನ ಸ್ಪಷ್ಟ ಹೇಳಿಕೆಯಿಂದಾಗಿ ಸಹೋದ್ಯೋಗಿಗಳಿಗೆ ಇರುಸುಮುರುಸು. ಸತ್ಯ ದರ್ಶನದಿಂದ ಎಲ್ಲವೂ ನಿರಾಳ. ಸಂತೋಷದ ವಾತಾವರಣ ಮೂಡುವುದು.

ಕರ್ಕಾಟಕ: ಕೆಲಸ ಕಾರ್ಯಗಳಲ್ಲಿ ಉತ್ತಮ ಪ್ರಗತಿ. ನಿಕಟವರ್ತಿಗಳಿಂದ ಅನುಕೂಲಕರ ಸಹಾಯ. ಆತ್ಮಸ್ಥೈರ್ಯ ಮೂಡುವುದು. ವ್ಯಾಪಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಗಣ್ಯರ ಭೇಟಿ ಸಂಭವ.

ಸಿಂಹ: ಆತ್ಮೀಯತೆಯಿಂದಾಗಿ ಶುಭ ಸಂದರ್ಭ ನಿರ್ಮಾಣ. ಹೊಣೆಗಾರಿಕೆಯ ವಿಷಯದಲ್ಲಿ ಸಮರ್ಥ ನಿರ್ವಹಣೆ. ವಿಷಯಗಳ ಸ್ಪಷ್ಟ ಅರಿವು ಉಂಟಾಗಿ ವಿಶ್ವಾಸ ಮೂಡುವುದು.

ಕನ್ಯಾ: ಮುಕ್ತ ಭಾವನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಪ್ರಯಾಣದ ಸಾಧ್ಯತೆ ಕಂಡುಬರುವುದು. ಆಶ್ಚರ್ಯಕರ ರೀತಿಯಲ್ಲಿ ಕೆಲಸ ಕಾರ್ಯಗಳು ಕೂಡಿಬರುವವು.

ತುಲಾ: ಆತ್ಮಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳು ನಿವಾರಣೆಯಾಗುವವು. ನಿಷ್ಕಲ್ಮಷ ಭಾವನೆಯಿಂದ ಸಮಾಧಾನ. ಸ್ನೇಹಿತರಿಂದ ಪ್ರಶಂಸೆ, ಸಂಗಾತಿಯಿಂದ ಉತ್ತಮ ಸಹಕಾರ.

ವೃಶ್ಚಿಕ: ಸ್ನೇಹಿತರೊಂದಿಗೆ ವಿಷಯಗಳ ವಿನಿಮಯದಿಂದಾಗಿ ವಾತಾವರಣ ತಿಳಿಗೊಂಡು ಮನಸ್ಸಿಗೆ ನೆಮ್ಮದಿ. ವಿಶೇಷ ಭೋಜನ ಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಂಗಾತಿಯಿಂದ ಸಹಕಾರ.

ಧನು: ಗಂಡಾಂತರಕ್ಕೆ ಬಲಿಯಾಗದಂತೆ ಹಿರಿಯರಿಂದ ಸಕಾಲಿಕ ಸಲಹೆಗಳು. ವೈಮನಸ್ಯ ನಿವಾರಣೆಯಾಗಿ ದೃಢ ಸಂಕಲ್ಪ. ಆರೋಗ್ಯದಲ್ಲಿ ಪ್ರಗತಿ. ಬಂಧುಗಳ ಆಗಮನ ಸಾಧ್ಯತೆ.

ಮಕರ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿರಿ. ಅಚ್ಚರಿಯ ಸುದ್ದಿಯನ್ನು ಕೇಳುವ ಸಾಧ್ಯತೆ. ಸ್ವಯಂಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ. ಸಾಮಾಜಿಕ ಮನ್ನಣೆ ನಿಮ್ಮದಾಗಲಿದೆ.

ಕುಂಭ: ನಿಮ್ಮ ನಿಲುವಿನಲ್ಲಿ ಆಕಸ್ಮಿಕ ತಿರುವು ಕಂಡಬರುವುದು. ದೈಹಿಕ ಮತ್ತು ಮಾನಸಿಕ ಶ್ರಮ ಕಡಿಮೆಯಾಗಿ ನಿರಾಳ ಭಾವ. ಕಾರ್ಯನಿರ್ವಹಣೆಯಲ್ಲಿ ಯಶಸ್ಸನ್ನು ಕಾಣುವಿರಿ.

ಮೀನ: ಕುಟುಂಬದಲ್ಲಿ ಹೊಂದಾಣಿಕೆಯಿಂದ ಬೆಂಬಲ ಗಳಿಸುವಿರಿ. ವ್ಯಕ್ತಿಗಳ ಸಂಪರ್ಕದಿಂದಾಗಿ ಉತ್ತಮ ಲಾಭದ ನಿರೀಕ್ಷೆ. ಸಂಘರ್ಷದಿಂದ ದೂರ. ಗೆಳೆಯರಿಂದ ನೆಮ್ಮದಿ.

ನಿಮ್ಮ ಜನ್ಮದಿನ 5-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಸಂಕಷ್ಟಗಳು ನಿವಾರಣೆಯಾಗಿ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳಲ್ಲಿ ಯಶಸ್ಸನ್ನು ಸಾಧಿಸುವಿರಿ. ಮಹಿಳಾ ನೌಕರಸ್ಥರಿಗೆ ಉದ್ಯೋಗ ಕ್ಷೇತ್ರದಲ್ಲಿ ಸಹೋದ್ಯೋಗಿಗಳ ಸಹಾಯದಿಂದ ಯಶಸ್ಸು. ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚಿನ ಅನುಕೂಲ ಹೊಂದುವಿರಿ.

ಪದಬಂಧ 4739

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜೀವವನ್ನು ಕೊಡುವುದು (4)
3.ಅಪ್ಪನ ಈ ರೂಪ ಬಲು ವಿರಳ! (4)
5.ನಡುವಿನಿಂದ ಶುರುವಾದ ಕಂಪನ (3)
8.ಮಿಥ್ಯವಲ್ಲ! ಇದು ಜೋಡಿ! (3)
9.ಪ್ರಮಾಣ ಪತ್ರವನ್ನು ಹೀಗೂ ಹೇಳುವರು (5)
10. ತಲೆಯಲ್ಲಿರುವ ಅನ್ನದ ಪಾತ್ರೆ (3)
11.ಎಲೆ ಅಡಿಕೆ ಚೀಲ (3)
15.ಕನ್ನಡಿಗನಿಗೆ ನೀಡಿದ ರಿಬೇಟ್! (4)
16.ಆಸೆ ಅಥವಾ ಬಯಕೆ (4)

ಮೇಲಿಂದ ಕೆಳಕ್ಕೆ
1.ಚೀನದಲ್ಲಿ ಕಂಡದ್ದೆಲ್ಲಾ ಹಳೆಯದು ಬಿಡಿ! (3)
2.ನಡುಗುತ್ತಿರುವ ಸೊಂಟ! (2)
3.ಮಾವನ ಹೆಂಡತಿ (2)
4.ಇದು ಬೇರೆಯವರ ಹಣ (4)
6.ಕಲೆಯಲ್ಲಿರುವ ಆಹ್ವಾನ! (4)
7.ತಾಪದ ಹೊತ್ತಿನಲ್ಲಿ ವ್ಯಕ್ತವಾದ ಅತೀ ದುಃಖ (3)
8.ಗೆಳೆಯನಿಂದ ಆಗಿರುವ ವಂಚನೆ (4)
10.ತರತರದ ಕಾಯಿಪಲ್ಲೆ (4)
12.ಜಾತ್ರೆಯಲ್ಲಿ ಕೂಡಿದ ಜನ ಸಂದಣಿ (3)
13. ದಾಯದಿಯನ್ನು ಹೀಗೂ ಕರೆಯುವರು (2)
14.ಹಿರಿಯ ಸಹೋದರಿಯಿಲ್ಲಿ ತಿರುಗಿದ್ದಾಳೆ (2)



4738ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ತಪೋಲ 5.ನಗದು 6.ಮಾವಟಿಗ 8.ಗಡಿಪಾರು 12.ಪ್ರಕರಣ 14.ಅನುವಾದ 15.ವಲಯ 16.ವಿದ್ಯಮಾನ

ಮೇಲಿಂದ ಕೆಳಕ್ಕೆ: 1.ಸ್ಥಾನಬದ್ಧತೆ 2.ಮದುಮಗ 3.ತಲೆಮಾರು 4.ಲವಂಗ 7.ಟಿಕ್ಕೆ 9.ಪಾಚಕ 10.ಜನನಾಯಕ 11.ಜೇನು 12.ಪ್ರದರ್ಶನ 13.ಣಗುವಲ 14.ಅಡವಿ

ಸುಡೊಕು 5125

		5		8		4		
	8		7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5124 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,532
ಇಂದಿನ ಅಂತ್ಯ	17,691
▲	159
ದಿನದ ಗರಿಷ್ಠ	17,750

ವಿನಿಮಯ ದರ

$ ಡಾಲರ್	74.31
£ ಪೌಂಡ್	100.78
€ ಯುರೊ	86.29
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1455 (1455)
ಸೋಯಾ (ರಿಫೈನ್ಡ್)	₹1332 (1335)
ಸೂರ್ಯಕಾಂತಿ (ರಿಫೈನ್ಡ್)	₹1385(1380)
ಪಾಮೋಲಿನ್	₹1218 (1218)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹2000-2500
ಮಧ್ಯಮ	₹1500-2000
ಸಣ್ಣ	₹500-1500

ಟಾಟಾ ಪಂಚ್ ಅನಾವರಣ: ₹ 21 ಸಾವಿರಕ್ಕೆ ಬುಕಿಂಗ್

ಪ್ರಜಾವಾಣಿ ವಾರ್ತೆ

ಟಾಟಾ ಪಂಚ್

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ತನ್ನ ಸಬ್ ಕಾಂಪ್ಯಾಕ್ಟ್ ಎಸ್‌ಯುವಿ 'ಪಂಚ್'ಅನ್ನು ಸೋಮವಾರ ಅನಾವರಣಗೊಳಿಸಿದೆ.

ಕಂಪನಿಯ ಜಾಲತಾಣ ಮತ್ತು ಮಾರಾಟ ಕೇಂದ್ರಗಳಲ್ಲಿ ₹ 21 ಸಾವಿರ ಪಾವತಿಸಿ ಈ ಕಾರು ಬುಕ್ ಮಾಡಬಹುದು. ಬುಕಿಂಗ್ ಸೋಮವಾರದಿಂದಲೇ ಆರಂಭ ಆಗಿದೆ. ಇದೇ ತಿಂಗಳ 20ರಂದು ಕಾರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಯೋಜನೆಯನ್ನು ಹೊಂದಲಾಗಿದೆ ಎಂದು ಕಂಪನಿಯ ಉಪಾಧ್ಯಕ್ಷ ಆನಂದ್ ಕುಲಕರ್ಣಿ ಅವರು ತಿಳಿಸಿದ್ದಾರೆ.

1.2 ಲೀಟರ್ ಪೆಟ್ರೋಲ್ ಎಂಜಿನ್ ಮ್ಯಾನುಯಲ್ ಮತ್ತು ಆಟೊಮೆಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಲಭ್ಯವಿದೆ. ಗ್ರಾಹಕರ ಜೀವನಶೈಲಿಯ ಅಗತ್ಯಗಳನ್ನು ಪೂರೈಸಲು ನಾಲ್ಕು ವಿಧಗಳಲ್ಲಿ ಈ ಕಾರು ಲಭ್ಯವಿದೆ ಎಂದು ಅವರು ಹೇಳಿದರು.

ಆಲ್ಫಾ (ಅಜೈಲ್ ಲೈಟ್ ಫ್ಲೆಕ್ಸಿಬಲ್ ಅಡ್ವಾನ್ಸ್ಡ್) ಆರ್ಕಿಟೆಕ್ಚರ್‌ನಿಂದ ಸಿದ್ಧಪಡಿಸಿರುವ ಕಂಪನಿಯ ಮೊದಲ ಸಬ್ ಕಾಂಪ್ಯಾಕ್ಟ್ ಎಸ್‌ಯುವಿ ಇದಾಗಿದೆ. ಮಾರುಕಟ್ಟೆಯ ಬೇಡಿಕೆಯನ್ನು ಆಧರಿಸಿ ಮುಂಬರುವ ಹಂತಗಳಲ್ಲಿ ಈ ಮಾದರಿಯನ್ನು ವಿದ್ಯುತ್ ಚಾಲಿತ ಆವೃತ್ತಿಯಾಗಿ ಪರಿವರ್ತಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

ಹೆಚ್ಚಿನ ಗ್ರೌಂಡ್ ಕ್ಲಿಯರೆನ್ಸ್, 366 ಲೀಟರ್ ಬೂಟ್ ಸ್ಪೇಸ್, ಹರ್ಮಾನ್ ಇನ್ಫೊಟೇನ್ಮೆಂಟ್ ಸಿಸ್ಟಂ, ಸಂಪೂರ್ಣ ಸ್ವಯಂಚಾಲಿತ ತಾಪಮಾನ ನಿಯಂತ್ರಣ ಸೇರಿದಂತೆ ಇನ್ನೂ ಹಲವು ವೈಶಿಷ್ಟ್ಯಗಳನ್ನು ಇದು ಒಳಗೊಂಡಿದೆ ಎಂದು ಕಂಪನಿಯು ತಿಳಿಸಿದೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಎಂಎಸ್‌ಎಂಇ: ಸಾಲ ಖಾತರಿ ಯೋಜನೆ ವಿಸ್ತರಣೆ

ನವದೆಹಲಿ (ಪಿಟಿಐ): ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳಿಗೆ ಯಾವುದೇ ಅಡಮಾನ ಇಲ್ಲದೆ ನೀಡಿದ ಸಾಲಕ್ಕೆ ಸರ್ಕಾರವೇ ಖಾತರಿದಾರ ಆಗುವ ಯೋಜನೆಯ (ಸಿಜಿಎಸ್‌ಎಸ್‌ಡಿ) ಅವಧಿಯನ್ನು ಕೇಂದ್ರ ಸರ್ಕಾರವು ಮಾರ್ಚ್ 31ರವರೆಗೆ ವಿಸ್ತರಣೆ ಮಾಡಿದೆ.

ಈ ಯೋಜನೆಗೆ ಕೇಂದ್ರ ಸರ್ಕಾರವು 2020ರ ಜೂನ್ 1ರಂದು ಅನುಮೋದನೆ ನೀಡಿತ್ತು. ಜೂನ್ 24ರಂದು ಯೋಜನೆಗೆ ಚಾಲನೆ ನೀಡಲಾಗಿತ್ತು. 'ಯೋಜನೆಯ ಅವಧಿಯನ್ನು ವಿಸ್ತರಿಸಬೇಕು ಎಂದು ಬೇಡಿಕೆಗಳು ಬಂದಿವೆ. ಅದರ ಆಧಾರದಲ್ಲಿ ಸರ್ಕಾರವು ಈ ತೀರ್ಮಾನ ಕೈಗೊಂಡಿದೆ' ಎಂಎಸ್‌ಎಂಇ ಸಚಿವಾಲಯವು ಹೇಳಿದೆ.

ಗಾಂಧಿ ಜಯಂತಿಯ ದಿನ ದೆಹಲಿಯ ಖಾದಿ ಇಂಡಿಯಾ ಮಳಿಗೆಯಲ್ಲಿ ನಡೆದ ಖಾದಿ ಉತ್ಪನ್ನಗಳ ಮಾರಾಟವು ಮೊತ್ತವು ₹ 1 ಕೋಟಿಯನ್ನು ದಾಟಿದೆ ಎಂದು ಇನ್ನೊಂದು ಹೇಳಿಕೆಯಲ್ಲಿ ಸಚಿವಾಲಯವು ತಿಳಿಸಿದೆ.

ಕೋವಿಡ್ ಸಂದರ್ಭದಲ್ಲಿ ಪರಿಸರ ಸ್ನೇಹಿ ಉತ್ಪನ್ನಗಳಿಗೆ, ಗಿಡಮೂಲಿಕೆಗಳ ಉತ್ಪನ್ನಗಳಿಗೆ ಬೇಡಿಕೆಯು ಹಲವು ಪಟ್ಟು ಹೆಚ್ಚಾಗಿದೆ. ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗವು (ಕೆವಿಐಸಿ) ಹೊಸ ಉತ್ಪನ್ನಗಳನ್ನು ಸಿದ್ಧಪಡಿಸುತ್ತ ಇರುತ್ತದೆ ಎಂದು ಅದು ಹೇಳಿದೆ.

ಖಾದಿ ಉತ್ಪನ್ನಗಳನ್ನು ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೆ ಮತ್ತೆ ಮಾಡಿದ ಮನವಿ ಮತ್ತು ಜನರಲ್ಲಿ ಖಾದಿ ಬಗ್ಗೆ ಒಲವು ಹೆಚ್ಚುತ್ತಿರುವುದು ಈ ಮಟ್ಟದ ಬೇಡಿಕೆಗೆ ಕಾರಣ ಎಂದು ಕೆವಿಐಸಿ ಅಧ್ಯಕ್ಷ ವಿನಯ್ ಕುಮಾರ್ ಸಕ್ಸೇನಾ ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಜುಲೈ–ಸೆಪ್ಟೆಂಬರ್ ಅವಧಿ: ನೈಟ್ ಫ್ರ್ಯಾಂಕ್ ಇಂಡಿಯಾ ವರದಿ

ಕೋವಿಡ್ ಪೂರ್ವದ ಮಟ್ಟ ದಾಟಿದ ಮನೆಗಳ ಮಾರಾಟ

ನವದೆಹಲಿ (ಪಿಟಿಐ): ಮನೆಗಳ ಮಾರಾಟವು ದೇಶದಲ್ಲಿ ಕೋವಿಡ್ ಪೂರ್ವದ ಮಟ್ಟವನ್ನು ಮೀರಿದೆ. ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ದೇಶದ ಎಂಟು ಪ್ರಮುಖ ನಗರಗಳಲ್ಲಿ ಮನೆಗಳ ಮಾರಾಟವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡ 92ರಷ್ಟು ಏರಿಕೆ ಕಂಡಿದೆ.

ನೈಟ್ ಫ್ರ್ಯಾಂಕ್ ಇಂಡಿಯಾ ವರದಿಯಲ್ಲಿ ಈ ಅಂಶ ಉಲ್ಲೇಖವಾಗಿದೆ. ಹಿಂದಿನ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಒಟ್ಟು 33,404 ಮನೆಗಳ ಮಾರಾಟ ಆಗಿತ್ತು. ಇದು ಈ ವರ್ಷದ ಇದೇ ಅವಧಿಯಲ್ಲಿ 64,010ಕ್ಕೆ ಏರಿಕೆ ಆಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

'ಎಂಟು ನಗರಗಳಲ್ಲಿ 2019ರ ಇದೇ ಅವಧಿಯಲ್ಲಿ ಆದ ಮಾರಾಟಕ್ಕೆ ಹೋಲಿಸಿದರೆ, ಈ ವರ್ಷದ ಮಾರಾಟವು ಶೇ 104ರಷ್ಟು ಹೆಚ್ಚು' ಎಂದು ವರದಿಯು ಹೇಳಿದೆ. 'ಮನೆಗಳ ಬೆಲೆಯಲ್ಲಿ ಸ್ಥಿರತೆ ಇದ್ದುದು, ಗೃಹಸಾಲದ ಮೇಲಿನ ಬಡ್ಡಿ ದರವು ಕಡಿಮೆ ಮಟ್ಟದಲ್ಲಿ ಇದ್ದು ಹಾಗೂ ಸ್ವಂತ ಮನೆ ಹೊಂದಬೇಕು ಎಂಬ ವಿಚಾರದಲ್ಲಿ ಗ್ರಾಹಕರ ಧೋರಣೆ ಬದಲಾಗಿದ್ದು ಈ ಬೆಳವಣಿಗೆಗೆ ಕಾರಣ' ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶಿಶಿರ್ ಬೈಜಲ್ ತಿಳಿಸಿದರು.

ಹಲವು ರಾಜ್ಯಗಳು ಮುದ್ರಾಂಕ ಶುಲ್ಕ ಕಡಿಮೆ ಮಾಡಿದ್ದು ಕೂಡ ಮಾರಾಟ ಹೆಚ್ಚಲು ಒಂದು ಕಾರಣ ಎಂದು ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ರಜನಿ ಸಿನ್ಹಾ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮನೆಗಳ ಮಾರಾಟವು ಈ ಅವಧಿಯಲ್ಲಿ ಎರಡು ಪಟ್ಟಿಗಿಂತ ಹೆಚ್ಚಾಗಿದ್ದು, 11,337ಕ್ಕೆ ತಲುಪಿದೆ.

ಕೋವಿಡ್‌ನಿಂದಾಗಿ ಎದುರಾಗಿದ್ದ ಪರಿಸ್ಥಿತಿ ತಿಳಿಯಾಗುತ್ತಿರುವುದು ಮಾತ್ರವಲ್ಲದೆ, ಬೆಂಗಳೂರಿನಲ್ಲಿ ಐ.ಟಿ. ವೃತ್ತಿಪರರ ಆದಾಯದಲ್ಲಿ ಹೆಚ್ಚಳ ಆಗಿದ್ದು ಕೂಡ, ಈ ನಗರದಲ್ಲಿ ಮನೆಗಳ ಮಾರಾಟ ಪ್ರಮಾಣ ಜಾಸ್ತಿ ಆಗಲು ಒಂದು ಕಾರಣ ಎಂದು ರಜನಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕಚೇರಿ ಸ್ಥಳ ಕೋರಿ ನಡೆಯುವ ವಹಿವಾಟಿನಲ್ಲಿ ಬೆಂಗಳೂರು ದೇಶದಲ್ಲಿ ಮುಂಚೂಣಿ ಸ್ಥಾನದಲ್ಲಿ ಇದೆ' ಎಂದು ಶಿಶಿರ್ ಅವರು ಹೇಳಿದ್ದಾರೆ.

ಹೆಚ್ಚಳಕ್ಕೆ ಕಾರಣಗಳು

- ಮನೆಗಳ ಬೆಲೆಯಲ್ಲಿ ಸ್ಥಿರತೆ
- ಐ.ಟಿ. ವೃತ್ತಿಪರರ ಆದಾಯ ಏರಿಕೆ
- ಗೃಹಸಾಲದ ಬಡ್ಡಿದರ ಕಡಿಮೆ ಇರುವುದು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೈಕುಂಠ ಸಮಾರಾಧನೆ



ಶ್ರೀ ಎಂ. ಚೆಲುವರಾಜು
ದಿನಾಂಕ: 26–09–2021ನೇ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ಸಂಬಂಧವಾದ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ದಿನಾಂಕ: 6–10–2021ನೇ ಬುಧವಾರ ಬೆಳಿಗ್ಗೆ 9.30 ಗಂಟೆಗೆ ವಿಳಾಸ: ಮೃತರ ಸ್ವಗೃಹ ಮಾಕನಹಳ್ಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಮ್ಯಾಕಲಪ್ಪನವರ ಕುಟುಂಬದವರು
ಮಾಕನಹಳ್ಳಿ, ಹೊಸಕೋಟೆ (ತಾ॥)

ಸಂಕ್ಷಿಪ್ತ ಸುದ್ದಿ

ಅದಾನಿ ತೆಕ್ಕೆಗೆ ಎಸ್‌ಬಿ ಎನರ್ಜಿ

ನವದೆಹಲಿ (ಪಿಟಿಐ): ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ (ಎಜಿಇಎಲ್) ಕಂಪನಿಯು ₹26 ಸಾವಿರ ಕೋಟಿಗೆ (3.5 ಶತಕೋಟಿ ಡಾಲರ್) ಎಸ್‌ಬಿ ಎನರ್ಜಿ ಇಂಡಿಯಾ ಕಂಪನಿಯನ್ನು ತನ್ನ ತೆಕ್ಕೆಗೆ ಪಡೆದುಕೊಂಡಿದೆ.

'ಜಗತ್ತಿನ ಅತಿದೊಡ್ಡ ಸೌರ ವಿದ್ಯುತ್ ಅಭಿವೃದ್ಧಿ ಕಂಪನಿಯಾದ ಎಜಿಇಎಲ್ ಯಶಸ್ವಿಯಾಗಿ ಎಸ್‌ಬಿ ಎನರ್ಜಿ ಹೋಲ್ಡಿಂಗ್ಸ್ ಲಿಮಿಟೆಡ್ (ಎಸ್‌ಬಿ ಎನರ್ಜಿ ಇಂಡಿಯಾ) ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿದೆ. ಎಲ್ಲಾ ನಗದು ವ್ಯವಹಾರವನ್ನೇ ಒಳಗೊಂಡ ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಳೆದ ಮೇ 8ರಂದೇ ಖಚಿತಗೊಳಿಸುವ ಒಪ್ಪಂದ ಮಾಡಿಕೊಳ್ಳಲಾಗಿತ್ತು' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಈ ವ್ಯವಹಾರದಿಂದಾಗಿ ಎಸ್‌ಬಿ ಎನರ್ಜಿ ಇಂಡಿಯಾ ಕಂಪನಿಯು ಅದಾನಿ ಕಂಪನಿಯ ಶೇ 100ರಷ್ಟು ಅಂಗಸಂಸ್ಥೆ ಆಗಿದೆ. ಈ ಹಿಂದೆ ಇದು ಜಪಾನ್ ಮೂಲದ ಸಾಫ್ಟ್‌ಬ್ಯಾಂಕ್ ಗ್ರೂಪ್ ಕಾರ್ಪ್ ಮತ್ತು ಭಾರ್ತಿ ಗ್ರೂಪ್‌ಗಳ 80:20 ಪಾಲುದಾರಿಕೆಯ ಕಂಪನಿಯಾಗಿತ್ತು.

ಮುಂದಿನ ಹತ್ತು ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ₹ 1.48 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ಕಳೆದ ವಾರ ಪ್ರಕಟಿಸಿದ್ದರು.

ಬುಲ್ ಮತ್ತು ಬೇರ್ ಮಾರ್ಕೆಟ್ ಎಂದರೇನು?

ಷೇರು ಮಾತು

ಶರತ್ ಎಂ.ಎಸ್.

ಷೇರುಪೇಟೆಯಲ್ಲಿ ಗೂಳಿ ಓಟ, ದಾಖಲೆ ಬರೆದ ಸೂಚ್ಯಂಕಗಳು, ಕರಡಿ ಹಿಡಿತಕ್ಕೆ ಸೆನ್ಸೆಕ್ಸ್- ನಿಫ್ಟಿ ಭಾರೀ ಕುಸಿತ... ಹೀಗೆ ಷೇರುಪೇಟೆಯ ಸ್ಥಿತಿಗತಿಗಳನ್ನು ಸುದ್ದಿ ಮಾಧ್ಯಮಗಳಲ್ಲಿ ವಿಶ್ಲೇಷಣೆ ಮಾಡುವುದನ್ನು ಗಮನಿಸಿರುತ್ತೀರಿ. ಆದರೆ, ವಾಸ್ತವದಲ್ಲಿ 'ಗೂಳಿ ಓಟ' ಮತ್ತು 'ಕರಡಿ ಹಿಡಿತ' ಎಂದರೇನು?

ಷೇರು ಮಾರುಕಟ್ಟೆಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ದಿನನಿತ್ಯ ಬಳಕೆಯಾಗುವ ಈ ಪದಗಳ ಮಹತ್ವವೇನು? ಗೂಳಿ ಓಟ ಅಥವಾ ಕರಡಿ ಹಿಡಿತದಿಂದ ಹೂಡಿಕೆದಾರನಿಗೆ ಉಂಟಾಗುವ ಲಾಭ-ನಷ್ಟವೇನು?

ಏನಿದು ಗೂಳಿ ಓಟ, ಕರಡಿ ಹಿಡಿತ?: ಷೇರುಪೇಟೆ ಬಗ್ಗೆ ಮಾತನಾಡುವಾಗ 'ಬುಲ್ ಮಾರ್ಕೆಟ್' ಮತ್ತು 'ಬೇರ್ ಮಾರ್ಕೆಟ್' ಎನ್ನುವ ಪದ ಸಾಮಾನ್ಯವಾಗಿ ಬಳಕೆಯಾಗುತ್ತದೆ. ಷೇರು ಮಾರುಕಟ್ಟೆ ಸಕಾರಾತ್ಮಕ ಹಾದಿಯಲ್ಲಿದೆಯೋ ನಕಾರಾತ್ಮಕ ಹಾದಿ ತುಳಿದಿದೆಯೋ ಎನ್ನುವುದನ್ನು ಬುಲ್ ಮತ್ತು ಬೇರ್ ಮಾರ್ಕೆಟ್ ಪದಗಳು ಸೂಚಿಸುತ್ತವೆ. ಬುಲ್ (ಗೂಳಿ) ಎನ್ನುವುದು ಷೇರು ಮಾರುಕಟ್ಟೆಯಲ್ಲಿನ ಆಶಾವಾದದ ಸಂಕೇತ. ಕರಡಿ (ಬೇರ್) ಷೇರುಪೇಟೆಯಲ್ಲಿ ಆವರಿಸಿದ ನಿರಾಶಾವಾದದ ಸೂಚಕ.

ಷೇರು ಬೆಲೆಗಳು ನಿರಂತರವಾಗಿ ಏರಿಕೆ ಕಂಡರೆ ಅದನ್ನು ಗೂಳಿ ಪಥ (ಬುಲ್ ಪೇಸ್) ಎಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದೊಂದಿಗೆ ಹೆಚ್ಚೆಚ್ಚು ಷೇರುಗಳನ್ನು ಖರೀದಿಸುತ್ತಾರೆ. ಸಾಮಾನ್ಯವಾಗಿ, ಅರ್ಥ ವ್ಯವಸ್ಥೆ ಉತ್ತಮ ಸ್ಥಿತಿಯಲ್ಲಿದ್ದಾಗ ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟ ಇರುತ್ತದೆ. ಆರ್ಥಿಕ ಹಿಂಜರಿತವಿದೆ, ನಿರುದ್ಯೋಗ ಸಮಸ್ಯೆಯಿದೆ, ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳು ಬೆಳವಣಿಗೆ ಸಾಧಿಸುವ ಸಾಧ್ಯತೆ ಕಮ್ಮಿ ಎನ್ನುವ ಮುಂದಾಲೋಚನೆಯೊಂದಿಗೆ ಷೇರುಗಳ ಮಾರಾಟದ ಒತ್ತಡ ಹೆಚ್ಚಾದರೆ ಅದನ್ನು ಕರಡಿ ಪಥ (ಬೇರ್ ಪೇಸ್) ಎನ್ನುತ್ತಾರೆ. ಈ ವೇಳೆ ಷೇರುಗಳ ಬೆಲೆಯಲ್ಲಿ ಗಣನೀಯ ಕುಸಿತ ಕಂಡುಬರುತ್ತದೆ.

ಏರಿಳಿತಕ್ಕೆ ಹೆದರಬೇಡಿ: ಷೇರು ಮಾರುಕಟ್ಟೆಯಲ್ಲಿ ಏರಿಳಿತ ಎನ್ನುವುದು ತೀರಾ ಸಾಮಾನ್ಯ ಸಂಗತಿ. ಇತ್ತೀಚಿನ ಉದಾಹರಣೆಯನ್ನು ತೆಗೆದುಕೊಂಡರೆ, 2020ರ ಮಾರ್ಚ್‌ನಲ್ಲಿ ಕೋವಿಡ್ ಪ್ರಕರಣಗಳು ಜಾಗತಿಕವಾಗಿ ಹೆಚ್ಚಳವಾದಾಗ ಮುಂಬೈ ಷೇರು ಮಾರುಕಟ್ಟೆ ಸೂಚ್ಯಂಕ ಸೆನ್ಸೆಕ್ಸ್ ಕರಡಿ ಪಥ ಹಿಡಿದು, 25,000 ಅಂಶಗಳಿಗೆ ಕುಸಿದಿತ್ತು. ಆದರೆ ಕೋವಿಡ್ ಪ್ರಕರಣಗಳು ಇಳಿಕೆಯಾಗುವ ಜತೆಗೆ ಲಸಿಕೆ ಲಭ್ಯತೆ ಹೆಚ್ಚಾದಾಗ ಸೆನ್ಸೆಕ್ಸ್ ಗಣನೀಯವಾಗಿ ಏರಿಕೆ ಕಂಡು 60,000 ಅಂಶಗಳ ಗಡಿ ಮುಟ್ಟಿ ಹೊಸ ದಾಖಲೆ ಬರೆಯಿತು.

ಸರಳವಾಗಿ ಹೇಳುವುದಾದರೆ ಹಣದ ಒಳಹರಿವು ಹೆಚ್ಚಿದಾಗ ಷೇರು ಪೇಟೆ ಗೂಳಿ ಪಥದಲ್ಲಿರುತ್ತದೆ, ಹಣದ ಹೊರಹರಿವು ಹೆಚ್ಚಾದಾಗ ಪೇಟೆ ಕರಡಿ ಪಥದಲ್ಲಿರುತ್ತದೆ. ಸಣ್ಣ ಹೂಡಿಕೆದಾರರು ವಿಶ್ಲೇಷಣೆಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಒಳ್ಳೆಯ ಕಂಪನಿಗಳಲ್ಲಿ ಹೂಡಿಕೆ ಮಾಡುವತ್ತ ಗಮನಹರಿಸಬೇಕು.

ಆಗ ಹೂಡಿಕೆದಾರನಿಗೆ ಬಂಡವಾಳ ನಷ್ಟ ಉಂಟಾಗುವುದಿಲ್ಲ. ಷೇರು ಮಾರುಕಟ್ಟೆ ಹೂಡಿಕೆ ಮಾಡುವಾಗ ಖ್ಯಾತ ಹೂಡಿಕೆದಾರ ವಾರನ್ ಬಫೆಟ್ ಅವರ ಈ ಎರಡು ನಿಯಮಗಳನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಿ. 'ಒಂದನೆಯ ನಿಯಮ: ಎಂದಿಗೂ ಹಣ ಕಳೆದುಕೊಳ್ಳಬೇಡಿ, ಎರಡನೆಯ ನಿಯಮ: ಒಂದನೇ ನಿಯಮವನ್ನು ಎಂದಿಗೂ ಮರೆಯಬೇಡಿ!'

ಚಿನ್ನ ಆಮದು 8 ಪಟ್ಟು ಹೆಚ್ಚಳ

ಮುಂಬೈ (ರಾಯಿಟರ್ಸ್): ದೇಶದ ಚಿನ್ನ ಆಮದು ಕಳೆದ ವರ್ಷದ ಸೆಪ್ಟೆಂಬರ್‌ಗೆ ಹೋಲಿಸಿದರೆ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇಕಡ 658ರಷ್ಟು ಏರಿಕೆ ಕಂಡಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಹಬ್ಬದ ಋತುವಿಗಾಗಿ ಚಿನ್ನಾಭರಣ ವ್ಯಾಪಾರಿಗಳು ಹೆಚ್ಚಿನ ಖರೀದಿ ನಡೆಸಿರುವುದೇ ಆಮದು ಏರಿಕೆಗೆ ಕಾರಣ ಎಂದು ಮೂಲಗಳು ಹೇಳಿವೆ.

2020ರ ಸೆಪ್ಟೆಂಬರ್‌ನಲ್ಲಿ 12 ಟನ್ ಚಿನ್ನ ಆಮದು ಮಾಡಿಕೊಳ್ಳಲಾಗಿತ್ತು. 2021ರ ಸೆಪ್ಟೆಂಬರ್‌ನಲ್ಲಿ 91 ಟನ್ ಚಿನ್ನ ಆಮದು ಮಾಡಿಕೊಳ್ಳಲಾಗಿದೆ.

ಆಮದು ಹೆಚ್ಚಾಗಿರುವುದರಿಂದ ದೇಶದ ವ್ಯಾಪಾರ ಕೊರತೆ ಹೆಚ್ಚಾಗುವ ಮತ್ತು ರೂಪಾಯಿ ಮೇಲೆ ಒತ್ತಡ ಉಂಟಾಗುವ ಸಾಧ್ಯತೆ ಇದೆ ಎಂದೂ ಹೇಳಿವೆ.

ನಾಲ್ಕು ದಿನಗಳ ಬಳಿಕ ಸಕಾರಾತ್ಮಕ ವಹಿವಾಟು

ಸೆನ್ಸೆಕ್ಸ್ 534 ಅಂಶ ಜಿಗಿತ

ಮುಂಬೈ (ಪಿಟಿಐ): ಇಂಧನ, ಹಣಕಾಸು ಮತ್ತು ಐ.ಟಿ. ವಲಯಗಳ ಷೇರುಮೌಲ್ಯ ಹೆಚ್ಚಳದಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 534 ಅಂಶ ಏರಿಕೆಯಾಗಿ 59,299 ಅಂಶಗಳಿಗೆ ತಲುಪಿತು. ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇಕಡ 1.71 ರಷ್ಟು ಏರಿಕೆ ಕಂಡವು. ರಾಷ್ಟ್ರೀಯ ಷೇರು ಪೇಟೆ ಸೂಚ್ಯಂಕ ನಿಫ್ಟಿ 159 ಅಂಶ ಹೆಚ್ಚಾಗಿ 17,691 ಅಂಶಗಳಿಗೆ ಏರಿಕೆ ಆಯಿತು.

ಆರ್ಥಿಕ ಚಟುವಟಿಕೆಯಲ್ಲಿ ಚೇತರಿಕೆ, ಕೋವಿಡ್‌ನ ಎರಡನೇ ಅಲೆಯು ತೀವ್ರವಾಗಿ ಇಲ್ಲದೇ ಇರುವುದು ಹಾಗೂ ಹಬ್ಬಗಳ ಋತುವಿನ ಬೇಡಿಕೆಯಿಂದಾಗಿ ಕಂಪನಿಗಳ ಎರಡನೇ ತ್ರೈಮಾಸಿಕದ ಗಳಿಕೆಯು ಉತ್ತಮವಾಗಿರುವ ನಿರೀಕ್ಷೆ ಮಾಡಲಾಗಿದೆ. ಹೀಗಾಗಿ, ಜಾಗತಿಕ ಷೇರುಪೇಟೆಗಳ ಪ್ರತಿಕೂಲ ಪರಿಸ್ಥಿತಿಯ ನಡುವೆಯೂ ದೇಶಿ ಷೇರುಪೇಟೆಗಳು ಗಳಿಕೆ ಕಂಡವು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹಣದುಬ್ಬರದ ಆತಂಕ ಮತ್ತು ಚೀನಾದ ಎವರ್‌ಗ್ರಾಂಡೆ ಸಮೂಹದ ಸಾಲದ ಬಿಕ್ಕಟ್ಟಿನಿಂದಾಗಿ ಜಾಗತಿಕ ಷೇರು ಪೇಟೆಗಳು ಒತ್ತಡದಲ್ಲಿದ್ದವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.13ರಷ್ಟು ಇಳಿಕೆ ಆಗಿದ್ದು ಬ್ಯಾರಲ್‌ಗೆ 79.38 ಡಾಲರ್‌ಗಳಿಗೆ ತಲುಪಿದೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 19 ಪೈಸೆ ಇಳಿಕೆ ಆಗಿದ್ದು ₹ 74.31ರಂತೆ ವಿನಿಮಯಗೊಂಡಿತು.

ಮುಂಬೈ ಧಾರಣೆ

ಶೇಂಗಾ

4-10-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10550-10600
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1465)
ಒಂದು ವಾರದ ಡೆಲಿವರಿ	1455 (1460)
ಸೋಯಾ ಕಚ್ಚಾ	1287 (1287)
ಪಾಮ್ ವಾರದ ಡೆಲಿವರಿ	1222 (1220)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,150 (46,400)
ಬೆಳ್ಳಿ ಕೆ.ಜಿ 60,050 (60,000)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	400
ಅಡಿಕೆ	
ಬಂಟ್ವಾಳ	
ಹೊಸತು	25000-50000
ಹಳತು	46000-51500
ಚಿತ್ರದುರ್ಗ	
ಆಪಿ	43939-44389
ಬೆಟ್ಟೆ	38619-39099
ಕೆಂಪುಗೋಟು	32100-32500
ರಾಶಿ	43429-43869
ಕುಮಟ	
ಚಿಪ್ಪು	33509-39019
ಕೋಕ	22509-35019
ಫ್ಯಾಕ್ಟರಿ	12099-21299
ಹೊಸಚಾಲಿ	44109-47019
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	32108-40512
ಕೋಕ	27699-37299
ಚಾಲಿ	44099-48009
ಕೆಂಪುಗೋಟು	26699-34019
ರಾಶಿ	44859-47099
ತಟ್ಟಿಬೆಟ್ಟೆ	36699-44289
ಶಿರಸಿ	
ಬೆಟ್ಟೆ	12099-45299
ಬಿಳಿಗೋಟು	26599-42426
ಚಾಲಿ	45029-48208
ರಾಶಿ	37601-47919
ಯಲ್ಲಾಪುರ	
ಬಿಳಿಗೋಟು	34019-42700
ಕೋಕ	24899-32899
ಚಾಲಿ	43441-48180
ಕೆಂಪುಗೋಟು	30100-35689
ರಾಶಿ	43890-48899
ತಟ್ಟಿಬೆಟ್ಟೆ	35680-42690
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	46009-50529
ಗೊರಬಲು	16000-32450
ರಾಶಿ	43099-49100
ಸರಕು	50509-74996
ಸಾಗರ	
ಬಿಳಿಗೋಟು	25288-40099
ಕೋಕ	26099-39169
ಚಾಲಿ	34609-45099
ಕೆಂಪುಗೋಟು	33569-38009
ರಾಶಿ	36219-47699
ಸಿಪ್ಪೆಗೋಟು	18100-25892
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	257-495
ದ್ವಿತಳಿ (ಬಿ.ವಿ)	312-551

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13950	13000	13475	193.4 ಸೆಂಟ್ಸ್
ಎಸಿ	6325	4800	5375	
ಆರ್‌ಪಿ	6200	6100	6325	ಲಂಡನ್
ಆರ್‌ಸಿ	3590	3500	3675	2116 ಡಾಲರ್ಸ್

ಜಪಾನ್ ನೂತನ ಪ್ರಧಾನಿ ಕಿಶಿದಾ ಅಧಿಕಾರಕ್ಕೆ

ಟೋಕಿಯೊ (ಎಪಿ): ಜಪಾನ್‌ನ ನೂತನ ಪ್ರಧಾನಿಯಾಗಿ ಮಾಜಿ ವಿದೇಶಾಂಗ ಸಚಿವ ಫುಮಿಯೊ ಕಿಶಿದಾ ಸಂಸತ್‌ನಿಂದ ಸೋಮವಾರ ಆಯ್ಕೆಯಾದರು.

ಜಪಾನ್‌ನ ಸಂಸತ್ ಬೆಳಿಗ್ಗೆ ಕಿಶಿದಾ ಅವರನ್ನು ಆಡಳಿತಾರೂಢ ಲಿಬರಲ್ ಡೆಮಾಕ್ರಟಿಕ್ ಪಾರ್ಟಿಯ ನೂತನ ನಾಯಕನಾಗಿ ಆಯ್ಕೆ ಮಾಡುವುದಕ್ಕೆ ಮೊದಲಾಗಿಯೇ ನಿರ್ಗಮಿತ ಪ್ರಧಾನಿ ಯೋಶಿದೆ ಸುಗಾ ಅವರು ರಾಜೀನಾಮೆ ಸಲ್ಲಿಸಿದರು. ಸುಗಾ ಅವರು ಕೇವಲ ವರ್ಷದೊಳಗೆಯೇ ಪದತ್ಯಾಗ ಮಾಡಿದ್ದು, ಕೋವಿಡ್ ಪಿಡುಗನ್ನು ನಿಭಾಯಿಸಿದ ರೀತಿಗೆ ಹಾಗೂ ಜನರ ವಿರೋಧದ ನಡುವೆಯೂ ಒಲಿಂಪಿಕ್ಸ್ ಆಯೋಜಿಸಿದ್ದಕ್ಕೆ ತೀವ್ರ ಟೀಕೆಗೆ ಗುರಿಯಾಗಿದ್ದರು.

ಸುಗಾ ಸಂಪುಟದಲ್ಲಿ 20 ಮಂದಿ ಸಚಿವರಿದ್ದರು. ಈ ಪೈಕಿ ಇಬ್ಬರನ್ನು ಮಾತ್ರ ಉಳಿಸಿಕೊಂಡು, ಉಳಿದಂತೆ ಹೊಸಬರನ್ನೇ ಆಯ್ಕೆ ಮಾಡುವ ಸಾಧ್ಯತೆ ಇದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

Hospital & Medical Jobs

WANTED PHARMACISTS to work all over Karnataka (with Diploma in Pharmacy Certificate) plz send the CV to email: raghu_sgr2@yahoo.co.in / poojyaya2005@gmail.com/ Or only WhatsApp : 9845996744 / 9341366744

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು -56 ಸಂಪರ್ಕಿಸಿ : 9606523337, 9606385001

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟ ವಸತಿಯೊಂದಿಗೆ 11000 ರಿಂದ 16000ವರೆಗೆ ಸಂಬಳ. ಫೋ: 8139962883

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:7837015557

ಭವಿಷ್ಯ

Astrology

ಕೊಳ್ಳೇಗಾಲದ ಪ್ರಸಿದ್ಧ ತಾಂತ್ರಿಕರು ನುಡಿದಂತೆ ನಡೆಯುವುದು, ಅಸಾಧ್ಯವಾದದ್ದು ಇಲ್ಲಿ ಸಾಧ್ಯ, ದಾಂಪತ್ಯ ಕಲಹ, ಶತ್ರುಗಳ ಕಾಟ, ಮಾಟಮಂತ್ರ, ವಾಮಾಚಾರ, ಸ್ತ್ರೀಪುರುಷ ವಶೀಕರಣ, ಚೌಡಿಮಂತ್ರ ಶಕ್ತಿಯಿಂದ ಸಶ್ಮಾನ ಕಾಳಿಯ ಬಲಿಷ್ಠ ಪ್ರಯೋಗಗಳಿಂದ 3ದಿನದಲ್ಲಿ ಶಾಶ್ವತ ಪರಿಹಾರ ಗ್ಯಾರಂಟಿ ಪ್ರಧಾನ ತಾಂತ್ರಿಕ ವೆಂಕಟೇಶ ಮೂರ್ತಿ: ಉತ್ತರಹಳ್ಳಿ ಬೆಂಗಳೂರು: 9686748656

★॥ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127.

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

"ವಶೀಕರಣಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೇಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಪ್ರವಾಸ

Travel

10.11.2021, 4 ದಿನಗಳ ಗೋವಾ, ದೂದ್- ಸಾಗರ್. 24.11.2021, 12 ದಿನಗಳ ಗುಜರಾತ್, ಮಧ್ಯಪ್ರದೇಶ. 18.11.2021, 12 ದಿನಗಳ ಕಾಶಿ, ನೇಪಾಳ, ಮುಕ್ತಿನಾಥ. 11.11.2021, 12 ದಿನಗಳ ಸಂಪೂರ್ಣ ರಾಜಸ್ಥಾನ್. 11.11.2021 11 ದಿನಗಳ ಪುರಿ, ಕೊಲ್ಕತಾ, ಡಾರ್ಜಿಲಿಂಗ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು. 9880847001, 9342848791

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್.15-10-2021, ಆಂಧ್ರಪ್ರದೇಶ, ತೆಲಂಗಾಣ 8 ದಿನಗಳ ಪ್ರವಾಸ , 15-11-2021, ಒರಿಸ್ಸಾ, ಕಾಶಿ 8 ದಿನಗಳ ಪ್ರವಾಸ. 9880621353

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಗೆಲ್ಲುವ ತಂಡಕ್ಕೆ ಉತ್ತಮ ರನ್ ರೇಟ್ ಕಾಯ್ದುಕೊಳ್ಳುವ ಸವಾಲು: ಸೋಲುವ ತಂಡಕ್ಕಿಲ್ಲ ಅವಕಾಶ

ರಾಜಸ್ಥಾನ್, ಮುಂಬೈಗೆ ಪ್ಲೇ ಆಫ್ ಕನಸು

ಶಾರ್ಜಾ (ಪಿಟಿಐ): ದಿಢೀರ್ ಕುಸಿತ ಕಂಡಿರುವ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮಂಗಳವಾರದ ಪಂದ್ಯದಲ್ಲಿ ಲಯಕ್ಕೆ ಮರಳುವ ಛಲದೊಂದಿಗೆ ಕಣಕ್ಕೆ ಇಳಿಯಲಿದೆ.

ಶಾರ್ಜಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ್ ರಾಯಲ್ಸ್ ವಿರುದ್ಧ ಸೆಣಸಲಿದೆ. ಪ್ಲೇ ಆಫ್ ಹಂತದ ಕನಸು ಜೀವಂತವಾಗಿರಿಸಲು ಉಭಯ ತಂಡಗಳಿಗೂ ಈ ಪಂದ್ಯದಲ್ಲಿ ಜಯ ಅನಿವಾರ್ಯವಾಗಿದೆ. ಆದ್ದರಿಂದ ಜಿದ್ದಾಜಿದ್ದಿಯ ಪೈಪೋಟಿ ನಿರೀಕ್ಷಿಸಲಾಗಿದೆ.

ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಪ್ರಶಸ್ತಿ ಗಳಿಕೆಯಲ್ಲಿ ಹ್ಯಾಟ್ರಿಕ್ ಸಾಧಿಸಿ ದಾಖಲೆ ಬರೆಯುವ ಗುರಿಯೊಂದಿಗೆ ಈ ಬಾರಿ ಟೂರ್ನಿಗೆ ಬಂದಿತ್ತು. ಮೊದಲ ಭಾಗದಲ್ಲಿ ಉತ್ತಮ ಸಾಮರ್ಥ್ಯ ತೋರಿತ್ತು. ಆದರೆ ಯುಎಇಯಲ್ಲಿ ನಡೆಯುತ್ತಿರುವ ಎರಡನೇ ಹಂತದ ಪಂದ್ಯಗಳಲ್ಲಿ ನೀರಸ ಪ್ರದರ್ಶನ ನೀಡುತ್ತಿದೆ.

‘ಹ್ಯಾಟ್ರಿಕ್’ ಸೋಲಿನ ನಂತರ ಪಂಜಾಬ್ ಕಿಂಗ್ಸ್ ವಿರುದ್ಧ ಗೆದ್ದು ಸಮಾಧಾನಪಟ್ಟುಕೊಂಡಿದ್ದ ತಂಡಕ್ಕೆ ಕಳೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಆಘಾತ ನೀಡಿತ್ತು. ರಾಜಸ್ಥಾನ್ ರಾಯಲ್ಸ್ ಹಿಂದಿನ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿ ಚೆನ್ನೈ ವಿರುದ್ಧ ಗೆಲುವು ದಾಖಲಿಸಿತ್ತು. 190 ರನ್‌ಗಳು ಗುರಿ ಬೆನ್ನತ್ತಿದ್ದ ತಂಡಕ್ಕೆ ಮುಂಬೈಕರ್‌ಗಳಾದ ಯಶಸ್ವಿ ಜೈಸ್ವಾಲ್ ಮತ್ತು ಶಿವಂ ದುಬೆ ಏಳು ವಿಕೆಟ್‌ಗಳ ಜಯ ತಂದುಕೊಟ್ಟಿದ್ದರು.

ಭಾರಿ ಅಂತರದ ಜಯ ಅಗತ್ಯ

ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಲು ಎರಡೂ ತಂಡಗಳಿಗೆ ಉಳಿದಿರುವ ಎರಡೂ ಪಂದ್ಯಗಳಲ್ಲಿ ಜಯ ಅಗತ್ಯ. ಆದರೆ ರನ್ ರೇಟ್ ಕಡಿಮೆ ಇರುವುದರಿಂದ ಭಾರಿ ಅಂತರದಿಂದ ಜಯ ಗಳಿಸಲು ಉಭಯ ತಂಡಗಳು ಪ್ರಯತ್ನಿಸಲಿವೆ. ರಾಜಸ್ಥಾನ್ ಸದ್ಯ -0.337 ರನ್ ರೇಟ್ ಹೊಂದಿದ್ದು ಕಳೆದ ಪಂದ್ಯದಲ್ಲಿ ನೀರಸ ಬ್ಯಾಟಿಂಗ್ ಮಾಡಿದ್ದರಿಂದ ಮುಂಬೈನ ರನ್ ರೇಟ್ -0.453ಕ್ಕೆ ಕುಸಿದಿದೆ.

ಮಂಗಳವಾರದ ಪಂದ್ಯದಲ್ಲಿ ಸೋಲುವ ತಂಡ ಟೂರ್ನಿಯಿಂದ ಹೊರಬೀಳಲಿದೆ. ಗೆಲ್ಲುವ ತಂಡ ಕೋಲ್ಕತ್ತ ನೈಟ್ ರೈಡರ್ಸ್‌ಗಿಂತ ಅಧಿಕ ರನ್ ರೇಟ್ ಹೊಂದಬೇಕಾಗಿದೆ.

ಸಂಜು ಸ್ಯಾಮ್ಸನ್ –ಪಿಟಿಐ ಚಿತ್ರ

ಮುಖಾಮುಖಿ

- ಪಂದ್ಯಗಳು 24
- ಮುಂಬೈ ಗೆಲುವು 12
- ರಾಜಸ್ಥಾನ್ ಜಯ 11
- ಫಲಿತಾಂಶವಿಲ್ಲ 1

ಮುಖಾಮುಖಿಯಲ್ಲಿ ಗರಿಷ್ಠ ಮೊತ್ತ

- ಮುಂಬೈ 212
- ರಾಜಸ್ಥಾನ್ 208

ಮುಖಾಮುಖಿಯಲ್ಲಿ ಕನಿಷ್ಠ ಮೊತ್ತ

- ರಾಜಸ್ಥಾನ್ 103
- ಮುಂಬೈ 92

ಪಂದ್ಯ ಆರಂಭ: ಸಂಜೆ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

14 ಪಾಯಿಂಟ್ ಗಳಿಸಿರುವ ಕೋಲ್ಕತ್ತ +0.294 ರನ್ ರೇಟ್ ಹೊಂದಿದೆ.

ಮಂಗಳವಾರದ ಪಂದ್ಯದಲ್ಲಿ ಮುಂಬೈ ಜಯ ಗಳಿಸಿ ಕೊನೆಯ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮಣಿಸಿದರೂ ಹಾದಿ ಸುಗಮವಲ್ಲ. ಸನ್‌ರೈಸರ್ಸ್ ಎದುರಿನ ಕಳೆದ ಪಂದ್ಯದಲ್ಲಿ ಜಯ ಗಳಿಸಿದ್ದರಿಂದ ಕೋಲ್ಕತ್ತ ಈಗ ಸುಭದ್ರ ಸ್ಥಿತಿಯಲ್ಲಿದೆ. ರಾಜಸ್ಥಾನ್ ಎದುರಿನ ಕೊನೆಯ ಪಂದ್ಯದಲ್ಲಿ ಸೋತರೂ ತಂಡದ ಪ್ಲೇಆಫ್ ಆಸೆ ಜೀವಂತವಾಗಿಯೇ ಇರುತ್ತದೆ.

ಮುಂದಿನ ಎರಡೂ ಪಂದ್ಯಗಳಲ್ಲಿ ಭರ್ಜರಿ ರನ್ ರೇಟ್ ಕಾಯ್ದುಕೊಂಡು ಜಯ ಗಳಿಸುವ ಹೊಣೆ ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಕ್ವಿಂಟನ್ ಡಿ ಕಾಕ್ ಮತ್ತು ಕೀರನ್ ಪೊಲಾರ್ಡ್ ಅವರ ಮೇಲಿದೆ.

ಮುಸ್ತಫಿಜುರ್ ರಹಮಾನ್, ಚೇತನ್ ಸಕಾರಿಯ ಮುಂತಾದವರನ್ನು ಒಳಗೊಂಡ ವೇಗದ ದಾಳಿಯನ್ನು ಮುಂಬೈ ಬ್ಯಾಟರ್‌ಗಳು ಮೀರಿ ನಿಲ್ಲುವರೇ ಎಂಬುದು ಕುತೂಹಲದ ವಿಷಯ.

ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್, ರಾಹುಲ್ ಚಾಹರ್ ಅವರ ದಾಳಿಯನ್ನು ಸಮರ್ಥವಾಗಿ ಎದುರಿಸುವ ಸವಾಲು ರಾಜಸ್ಥಾನ್ ರಾಯಲ್ಸ್‌ನ ಯಶಸ್ವಿ ಜೈಸ್ವಾಲ್, ಎವಿನ್ ಲೂಯಿಸ್ ಮತ್ತಿತರರಿಗೆ ಇದೆ.

ಆರ್‌ಸಿಬಿಯಲ್ಲಿ ಲಯ ಕಂಡೆ: ಮ್ಯಾಕ್ಸ್‌ವೆಲ್

ದುಬೈ (ಎಎಫ್‌ಪಿ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಸೇರಿದ ನಂತರ ಟಿ20 ಕ್ರಿಕೆಟ್‌ನಲ್ಲಿ ಲಯ ಕಂಡುಕೊಂಡಿರುವುದಾಗಿ ಸ್ಫೋಟಕ ಶೈಲಿಯ ಬ್ಯಾಟರ್ ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್ ಅಭಿಪ್ರಾಯಪಟ್ಟಿದ್ದಾರೆ.

ಸತತ ಮೂರು ಪಂದ್ಯಗಳಲ್ಲಿ ಅರ್ಧಶತಕಗಳನ್ನು ಗಳಿಸಿದ್ದ ಮ್ಯಾಕ್ಸ್‌ವೆಲ್ ಅವರು ಬೆಂಗಳೂರು ತಂಡದ ಪ್ಲೇ ಆಫ್ ಹಾದಿಯನ್ನು ಸುಗಮಗೊಳಿಸಿದ್ದರು. ಇನ್ನೂ ಒಂದು ಪಂದ್ಯ ಉಳಿದಿರುವಂತೆಯೇ ತಂಡ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದೆ. ಭಾನುವಾರ ನಡೆದ ಪಂದ್ಯದಲ್ಲಿ ಮ್ಯಾಕ್ಸ್‌ವೆಲ್ 33 ಎಸೆತಗಳಲ್ಲಿ 57 ರನ್ ಗಳಿಸಿದ್ದರು.

‘ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವುದು ಅಷ್ಟು ಸುಲಭವಲ್ಲ. ಆದರೆ ಬೆಂಗಳೂರು ತಂಡದಲ್ಲಿ ಆರಂಭಿಕ ಬ್ಯಾಟರ್‌ಗಳು ಉತ್ತಮ ಅಡಿಪಾಯ ಹಾಕಿಕೊಡುತ್ತಿರುವುದರಿಂದ ನನ್ನ ಮೇಲೆ ಒತ್ತಡ ಇರುವುದಿಲ್ಲ’ ಎಂದು ಪಂಜಾಬ್ ಕಿಂಗ್ಸ್ ತಂಡದಿಂದ ಬಂದಿರುವ ಮ್ಯಾಕ್ಸ್‌ವೆಲ್ ಹೇಳಿದ್ದಾರೆ.

ಗ್ಲೆನ್ ಮ್ಯಾಕ್ಸ್‌ವೆಲ್ –ಪಿಟಿಐ ಚಿತ್ರ

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	528
ಋತುರಾಜ್	ಚೆನ್ನೈ	521
ಶಿಖರ್ ಧವನ್	ಡೆಲ್ಲಿ	501

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	26
ಆವೇಶ್ ಖಾನ್	ಡೆಲ್ಲಿ	22
ಶಮಿ	ಪಂಜಾಬ್	18

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	13	10	3	00	00	20
ಚೆನ್ನೈ ಸೂಪರ್ ಕಿಂಗ್ಸ್	13	9	4	00	00	18
ಬೆಂಗಳೂರು	12	8	4	00	00	16
ಕೋಲ್ಕತ್ತ ನೈಟ್‌ರೈಡರ್ಸ್	13	6	7	00	00	12
ಪಂಜಾಬ್	13	5	8	00	00	10
ರಾಜಸ್ಥಾನ	12	5	7	00	00	10
ಮುಂಬೈ ಇಂಡಿಯನ್ಸ್	12	5	7	00	00	10
ಹೈದರಾಬಾದ್	12	2	10	00	00	4

* ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಅಗ್ರ ಸ್ಥಾನಕ್ಕೆ ಡೆಲ್ಲಿ ಕ್ಯಾಪಿಟಲ್ಸ್

ದುಬೈ (ಪಿಟಿಐ): ವಿಕೆಟ್‌ಗಳು ಉರುಳುತ್ತಿದ್ದರೂ ದಿಟ್ಟ ಆಟವಾಡಿದ ಶಿಮ್ರಾನ್ ಹೆಟ್ಮೆಯರ್ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಗೆಲುವಿನ ಉಡುಗೊರೆ ನೀಡಿದರು. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಡೆಲ್ಲಿ ಮೂರು ವಿಕೆಟ್‌ಗಳಿಂದ ಗೆದ್ದಿತು. ಈ ಮೂಲಕ ಪಾಯಿಂಟ್ ಪಟ್ಟಿಯ ಅಗ್ರ ಸ್ಥಾನಕ್ಕೇರಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 137 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ 19.4 ಓವರ್‌ಗಳಲ್ಲಿ ಏಳು ವಿಕೆಟ್‌ಗಳಿಗೆ 139 ರನ್ ಗಳಿಸಿತು. 39 ರನ್ ಗಳಿಸಿದ ಶಿಖರ್ ಧವನ್ ಹೊರತುಪಡಿಸಿದರೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ. ಹೀಗಾಗಿ 15ನೇ ಓವರ್‌ನ ಮುಕ್ತಾಯಕ್ಕೆ ತಂಡ ಆರು ವಿಕೆಟ್‌ಗಳಿಗೆ 99 ರನ್ ಗಳಿಸಿ ಸಂಕಷ್ಟಕ್ಕೆ ಸಿಲುಕಿತ್ತು.

ಈ ಸಂದರ್ಭದಲ್ಲಿ ಹೆಟ್ಮೆಯರ್ ಏಕಾಂಗಿ ಹೋರಾಟ ನಡೆಸಿದರು. 18 ಎಸೆತಗಳಲ್ಲಿ ಒಂದು ಸಿಕ್ಸರ್ ಮತ್ತು ಎರಡು ಬೌಂಡರಿಗಳೊಂದಿಗೆ 28 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಅವರೊಂದಿಗೆ ಕಗಿಸೊ ರಬಾಡ ಔಟಾಗದೇ ಉಳಿದರು.

ಚೆನ್ನೈಗೆ ಅಂಬಟಿ ರಾಯುಡು ಆಸರೆ: ಟಾಸ್ ಗೆದ್ದ ಡೆಲ್ಲಿ ನಾಯಕ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆರಂಭಿಕ ಬ್ಯಾಟರ್‌ಗಳ ವೈಫಲ್ಯದ ಬೆನ್ನಲ್ಲೇ ಚೆನ್ನೈನ ಮಧ್ಯಮ ಕ್ರಮಾಂಕವೂ ಪತನಗೊಂಡಿತು. ಅಂಬಟಿ ರಾಯುಡು ಏಕಾಂಗಿ ಹೋರಾಟ ನಡೆಸಿ ತಂಡದ ಇನಿಂಗ್ಸ್‌ಗೆ ಬಲ ತುಂಬಿದರು. ಮಹೇಂದ್ರ ಸಿಂಗ್ ಧೋನಿ ಬಳಗ ಐದು ವಿಕೆಟ್‌ಗಳಿಗೆ 136 ರನ್ ಗಳಿಸಿತು. ಅಂಬಟಿ ರಾಯುಡು (ಔಟಾಗದೆ 55; 43 ಎಸೆತ, 5 ಬೌಂಡರಿ, 2 ಸಿಕ್ಸರ್) ಅರ್ಧಶತಕ ಗಳಿಸಿ ಅಜೇಯರಾಗಿ ಉಳಿದರು.

ಆರಂಭಿಕ ಜೋಡಿ ಋತುರಾಜ್ ಗಾಯಕವಾಡ್ ಮತ್ತು ಫಫ್ ಡು ಪ್ಲೆಸಿ 28 ರನ್ ಸೇರಿಸಿದರು. ಈ ಹಂತದಲ್ಲಿ ದಾಳಿ ಆರಂಭಿಸಿದ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಆಘಾತ ನೀಡಿದರು. ಪ್ಲೆಸಿ ಮೊದಲು ಕ್ರೀಸ್ ತೊರೆದರು. ಋತುರಾಜ್ ಜೊತೆಗೂಡಿದ ರಾಬಿನ್ ಉತ್ತಪ್ಪ ಇನಿಂಗ್ಸ್ ಕಟ್ಟಲು ಪ್ರಯತ್ನಿಸಿದರು. ಆ್ಯನ್ರಿಚ್ ನಾರ್ಕಿಯಾ ಅವರು ಋತುರಾಜ್ ವಿಕೆಟ್ ಕಬಳಿಸಿದರು. ಮೋಯಿನ್ ಅಲಿ ವಿಕೆಟ್ ಉರುಳಿಸಿದ ಅಕ್ಷರ್ ಪಟೇಲ್ ಮತ್ತೊಮ್ಮೆ ಆಘಾತ ನೀಡಿದರು.

ರಾಬಿನ್ ಉತ್ತಪ್ಪ ಅವರಿಗೂ ಸಹಜ ಸಾಮರ್ಥ್ಯ ಪ್ರದರ್ಶಿಸಲು ಆಗಲಿಲ್ಲ. ಕೇವಲ 19 ರನ್ ಗಳಿಸಿದ ಅವರು ರವಿಚಂದ್ರನ್ ಅಶ್ವಿನ್‌ಗೆ ವಿಕೆಟ್ ಒಪ್ಪಿಸಿದರು. ಈ ಸಂದರ್ಭದಲ್ಲಿ ಕ್ರೀಸ್‌ನಲ್ಲಿ ನೆಲೆಯೂರಿದ ಅಂಬಟಿ ರಾಯುಡು ಸೊಗಸಾದ ಬ್ಯಾಟಿಂಗ್ ಮೂಲಕ ರನ್ ಕಲೆ ಹಾಕಿದರು.

ತಾಳ್ಮೆಯ ಬ್ಯಾಟಿಂಗ್ ಮೂಲಕ ಮಹೇಂದ್ರ ಸಿಂಗ್ ಧೋನಿ ಅವರು ರಾಯುಡು ಅವರಿಗೆ ಉತ್ತಮ ಸಹಕಾರ ನೀಡಿದರು.

ಶಿಮ್ರಾನ್ ಹೆಟ್ಮೆಯರ್ ಗೆಲುವಿನ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 5ಕ್ಕೆ 136 (20 ಓವರ್)

ಋತುರಾಜ್ ಸಿ ಅಶ್ವಿನ್ ಬಿ ನಾರ್ಕಿಯಾ 13 (13ಎ, 4X2), ಡುಪ್ಲೆಸಿ ಸಿ ಶ್ರೇಯಸ್ ಬಿ ಅಕ್ಷರ್ 10 (8ಎ, 4X2), ಉತ್ತಪ್ಪ ಸಿ ಮತ್ತು ಅಶ್ವಿನ್ 19 (19ಎ, 4X1), ಮೋಯಿನ್ ಸಿ ಶ್ರೇಯಸ್ ಬಿ ಅಕ್ಷರ್ 5 (8ಎ), ರಾಯುಡು ಔಟಾಗದೆ 55 (43ಎ, 4X5, 6X2), ಧೋನಿ ಸಿ ಪಂತ್ ಬಿ ಆವೇಶ್ 18 (27ಎ), ಜಡೇಜ ಔಟಾಗದೆ 1 (2ಎ).

ಇತರೆ (ಲೆಗ್‌ಬೈ 5, ವೈಡ್ 10) 15

ವಿಕೆಟ್ ಪತನ: 1–28 (ಫಫ್ ಡುಪ್ಲೆಸಿ, 2.4), 2–39 (ಋತುರಾಜ್ ಗಾಯಕವಾಡ್, 4.4), 3–59 (ಮೋಯಿನ್ ಅಲಿ, 7.4), 4–62 (ರಾಬಿನ್ ಉತ್ತಪ್ಪ, 8.3), 5–132 (ಮಹೇಂದ್ರ ಸಿಂಗ್ ಧೋನಿ, 19.1)

ಬೌಲಿಂಗ್: ಆ್ಯನ್ರಿಚ್ ನಾರ್ಕಿಯಾ 4–0–37–1, ಆವೇಶ್ ಖಾನ್ 4–0–35–1, ಅಕ್ಷರ್ ಪಟೇಲ್ 4–0–18–2, ಕಗಿಸೊ ರಬಾಡ 4–0–21–0, ಆರ್. ಅಶ್ವಿನ್ 4–0–20–1 (ವಿವರ ಅಪೂರ್ಣ)

ಡೆಲ್ಲಿ ಕ್ಯಾಪಿಟಲ್ಸ್ 7ಕ್ಕೆ 139 (19.4 ಓವರ್)

ಪೃಥ್ವಿ ಸಿ ಡುಪ್ಲೆಸಿ ಬಿ ಚಾಹರ್ 18 (12ಎ, 4X3), ಧವನ್ ಸಿ ಮೋಯಿನ್ ಬಿ ಠಾಕೂರ್ 39 (35ಎ, 4X3, 6X2), ಶ್ರೇಯಸ್ ಸಿ ಋತುರಾಜ್ ಬಿ ಹ್ಯಾಜಲ್‌ವುಡ್ 2 (7ಎ), ರಿಷಭ್ ಸಿ ಅಲಿ ಬಿ ಜಡೇಜ 15 (12ಎ, 4X1, 6X1), ರಿಪಾಲ್ ಸಿ ಚಾಹರ್ ಬಿ ಜಡೇಜ 18 (20ಎ, 4X2), ಆರ್. ಅಶ್ವಿನ್ ಬಿ ಠಾಕೂರ್ 2 (3ಎ), ಹೆಟ್ಮೆಯರ್ ಔಟಾಗದೆ 28 (18ಎ, 4X2, 6X1), ಅಕ್ಷರ್ ಸಿ ಮೋಯಿನ್ ಬಿ ಬ್ರಾವೊ 5 (10ಎ), ರಬಾಡ ಔಟಾಗದೆ 4 (1ಎ, 4X1)

ಇತರೆ (ಲೆಗ್‌ಬೈ 1, ವೈಡ್ 7) 8

ವಿಕೆಟ್ ಪತನ: 1–24 (ಪೃಥ್ವಿ ಶಾ, 2.3), 2–51 (ಶ್ರೇಯಸ್ ಅಯ್ಯರ್, 5.5), 3–71 (ರಿಷಭ್ ಪಂತ್, 8.5), 4–93 (ರಿಪಾಲ್ ಪಟೇಲ್, 12.5), 5–98 (ಆರ್. ಅಶ್ವಿನ್, 14.1), 6–99 (ಶಿಖರ್ ಧವನ್, 14.6), 7–135 (ಅಕ್ಷರ್ ಪಟೇಲ್, 19.3).

ಬೌಲಿಂಗ್: ದೀಪಕ್ ಚಾಹರ್ 3–0–34–1, ಜೋಶ್ ಹ್ಯಾಜಲ್‌ವುಡ್ 4–0–27–1, ರವೀಂದ್ರ ಜಡೇಜ 4–0–28–2, ಮೋಯಿನ್ ಅಲಿ 3–0–16–0, ಶಾರ್ದೂಲ್ ಠಾಕೂರ್ 4–0–13–2, ಡ್ವೇನ್ ಬ್ರಾವೊ 1.4–0–20–1.

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ ಮೂರು ವಿಕೆಟ್ ಜಯ.

ಐಡಬ್ಲ್ಯುಎಫ್‌ಗೆ ಸಹದೇವ್ ಯಾದವ್ ಅಧ್ಯಕ್ಷ

ನೊಯ್ಡಾ (ಪಿಟಿಐ): ಭಾರತ ವೇಟ್‌ಲಿಫ್ಟಿಂಗ್ ಫೆಡರೇಷನ್‌ಗೆ (ಐಡಬ್ಲ್ಯುಎಫ್) ಅಧ್ಯಕ್ಷರಾಗಿ ಸಹದೇವ್ ಯಾದವ್ ಅವರು ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಾಲ್ಕು ವರ್ಷಗಳ ಅವಧಿಗೆ ಅವರ ಅಧಿಕಾರಾವಧಿ ಇರಲಿದೆ.

ಫೆಡರೇಷನ್‌ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಆನಂದ್ ಗೌಡೆ ಮತ್ತು ಖಜಾಂಚಿಯಾಗಿ ನರೇಶ್ ಶರ್ಮಾ ಆಯ್ಕೆಯಾದರು. ಒಟ್ಟು 10 ಮಂದಿ ಉಪಾಧ್ಯಕ್ಷರು, ನಾಲ್ಕು ಜಂಟಿ ಕಾರ್ಯದರ್ಶಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಏಳು ಮಂದಿ ಆಯ್ಕೆಯಾದರು.

ಕುಸ್ತಿ: ಕಂಚಿನ ಪದಕದ ಸುತ್ತಿಗೆ ರೋಹಿತ್

ಒಸ್ಲೊ, ನಾರ್ವೆ (ಪಿಟಿಐ): ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಟರ್ಕಿ ಪೈಲ್ವಾನನನ್ನು ಚಿತ್ ಮಾಡಿದ ಭಾರತದ ರೋಹಿತ್, ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕದ ಸುತ್ತಿಗೆ ಲಗ್ಗೆ ಹಾಕಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಪಿಂಕಿ ಸೆಮಿಫೈನಲ್ ತಲುಪಿದರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪುರುಷರ 65 ಕೆಜಿ ವಿಭಾಗದ ರಿಪೆಜ್ ಸುತ್ತಿನಲ್ಲಿ ರೋಹಿತ್ ಅವರು 12–2ರಿಂದ ಟರ್ಕಿಯ ಸೆಲೆಹತ್ತೀನ್ ಕಿಲಿಸಾಲಯನ್ ಅವರನ್ನು ಮಣಿಸಿದರು.

ಕಂಚಿನ ಪದಕದ ಸೆಣಸಾಟದಲ್ಲಿ ಅವರು ಮಂಗೋಲಿಯಾದ ತಲ್ಗಾ ತುಮೂರ್ ಒಚಿರ್ ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ವಿಭಾಗದ ಅರ್ಹತಾ ಬೌಟ್‌ನಲ್ಲಿ ಪಿಂಕಿ 5–0ಯಿಂದ ಕೊರಿಯಾದ ಕಿಮ್ ಸೋಯೆನ್ ಅವರ ಸವಾಲು ಮೀರಿದರು. ಅದೇ ಆತ್ಮವಿಶ್ವಾಸದೊಂದಿಗೆ ಕಜಕಸ್ತಾನದ ಅಲಿಶಾ ಉವಾಲಿಶನ್ ಎದುರು 4–1ರಿಂದ ಗೆದ್ದು ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು.

ವಿಜಯಪುರದಲ್ಲಿ ರಾಜ್ಯ ರೋಡ್ ಸೈಕ್ಲಿಂಗ್ 20ರಿಂದ

ವಿಜಯಪುರ: ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಆಯೋಜಿಸಿರುವ ರಾಜ್ಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಅಕ್ಟೋಬರ್ 20 ಮತ್ತು 21ರಂದು ವಿಜಯಪುರದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ರಾಜು ಎಸ್.ಬಿರಾದಾರ ತಿಳಿಸಿದರು.

ರಾಜು ಎಸ್. ಬಿರಾದಾರ

14, 16 ಮತ್ತು 18 ವರ್ಷದೊಳಗಿನ ಬಾಲಕ–ಬಾಲಕಿಯರ ವಿಭಾಗ, ಪುರುಷ–ಮಹಿಳೆಯರಿಗೆ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. 250 ಸೈಕ್ಲಿಸ್ಟ್‌ಗಳು ಭಾಗವಹಿಸಲಿದ್ದಾರೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ನಗರದ ಸೋಲಾಪುರ ರಸ್ತೆಯ ಬೈಪಾಸ್‌ನಿಂದ ಬರಟಗಿ ರಸ್ತೆಯಲ್ಲಿ ಸ್ಪರ್ಧೆ ನಡೆಯಲಿದೆ. ನವೆಂಬರ್ 25ರಿಂದ ಹರಿಯಾಣದ ಕುರುಕ್ಷೇತ್ರದಲ್ಲಿ ನಡೆಯುವ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗೆ ಆಯ್ಕೆಯೂ ಈ ಸಂದರ್ಭದಲ್ಲಿ ನಡೆಯಲಿದೆ ಎಂದರು.

ಚಾಂಪಿಯನ್‌ಷಿಪ್ ಸಂಘಟನೆಗೆ ₹ 7 ಲಕ್ಷ ಖರ್ಚಾಗುತ್ತದೆ. ಸರ್ಕಾರದಿಂದ ಕೇವಲ ₹ 40 ಸಾವಿರ ಅನುದಾನ ಲಭಿಸಲಿದೆ. ಉಳಿದ ಹಣಕ್ಕೆ ದಾನಿಗಳನ್ನು ಆಶ್ರಯಿಸಬೇಕಾಗಿದೆ ಎಂದರು.

ಝೀರೊ ಟ್ರಾಫಿಕ್‌ಗೆ ಬೇಡಿಕೆ: ಜಿಲ್ಲೆಯಲ್ಲಿ ರೋಡ್ ಸೈಕ್ಲಿಂಗ್ ತರಬೇತಿಗೆ ಅನುಕೂಲವಾಗುವಂತೆ ಯಾವುದಾದರು ಒಂದು ರಸ್ತೆಯಲ್ಲಿ ಪ್ರತಿ ದಿನ ಬೆಳಿಗ್ಗೆ 6ರಿಂದ 9ರವರೆಗೆ ಝೀರೊ ಟ್ರಾಫಿಕ್ ವ್ಯವಸ್ಥೆ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ವಿಜಯಪುರ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಗೌರವ ಅಧ್ಯಕ್ಷ ಪ್ರದೀಪ್ ರಾಠೋಡ ಇದ್ದರು.

ಪ್ರಶಸ್ತಿಗಳೊಂದಿಗೆ ಅರ್ನವ್ ನವೀನ್ ಮತ್ತು ರೋಹಿತ್ ಶಂಕರ್

ವಿಶ್ವ ಯೂತ್ ಕಂಟೆಂಡರ್ ಟಿಟಿ: ರೋಹಿತ್, ಅರ್ನವ್‌ಗೆ ಕಂಚು

ಬೆಂಗಳೂರು: ಕರ್ನಾಟಕದ ರೋಹಿತ್ ಶಂಕರ್ ಹಾಗೂ ಅರ್ನವ್ ನವೀನ್ ಅವರು ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ನಡೆದ ವಿಶ್ವ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ಹಾಗೂ 11 ವರ್ಷದೊಳಗಿನವರ ವಿಭಾಗಗಳಲ್ಲಿ ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

15 ವರ್ಷದೊಳಗಿನ ಬಾಲಕರ ವಿಭಾಗದ ಸೆಮಿಫೈನಲ್‌ನಲ್ಲಿ ರೋಹಿತ್ 3-11,11-8,4-11,9-11ರಿಂದ ರಷ್ಯಾದ ಒರ್ಲೊವ್ ಸೆರಾಫಿಮ್ ಎದುರು ಎಡವಿದರು.

ಇದಕ್ಕೂ ಮೊದಲು ಅವರು ಕ್ವಾರ್ಟರ್‌ಫೈನಲ್‌ನಲ್ಲಿ ರೋಹಿತ್ 11-5,8-11,11-9,9-11,11-8ರಿಂದ ಟರ್ಕಿಯ ಡುರ್ಡಿನ್ ಯುಗುರ್ಕನ್ ಸವಾಲು ಮೀರಿದ್ದರು.

11 ವರ್ಷದೊಳಗಿನವರ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಅರ್ನವ್ 7-11,7-11,11-7,11-5,11-13ರಿಂದ ಗ್ರೀಸ್‌ನ ಲೊವಾನ್ನಿಸ್ ಪನಾಗಿಯೊಟಿಸ್ ಎದುರು ಸೋತರು. ಕ್ವಾರ್ಟರ್‌ಫೈನಲ್‌ನಲ್ಲಿ ಅರ್ನವ್ ಬೈ ಪಡೆದಿದ್ದರು.

ಏಷ್ಯನ್ ಟೇಬಲ್ ಟೆನಿಸ್ ಟೂರ್ನಿ ಭಾರತಕ್ಕೆ ಎರಡು ಕಂಚು

ನವದೆಹಲಿ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ಭಾರತ ಹರ್ಮೀತ್ ದೇಸಾಯಿ–ಮಾನವ್ ಥಕ್ಕರ್ ಮತ್ತು ಶರತ್ ಕಮಲ್–ಜಿ.ಸತ್ಯನ್ ಇಲ್ಲಿ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಡಬಲ್ಸ್ ವಿಭಾಗಗಳಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಟೂರ್ನಿಯ ಮೊದಲ ಸೆಮಿಫೈನಲ್ ಹಣಾಹಣಿಯಲ್ಲಿ ಎಂಟನೇ ಶ್ರೇಯಾಂಕದ ಹರ್ಮೀತ್– ಮಾನವ್ 11–4, 11–6, 10–12, 9–11, 8–11ರಿಂದ ಐದನೇ ಶ್ರೇಯಾಂಕ ಪಡೆದಿದ್ದ ದಕ್ಷಿಣ ಕೊರಿಯಾ ಆಟಗಾರರಾದ ವೂಜಿನ್ ಜಾಂಗ್ ಮತ್ತು ಜಾಂಗೂನ್ ಲಿಮ್ ಎದುರು ಎಡವಿದರು. ಕೇವಲ 44 ನಿಮಿಷಗಳಲ್ಲಿ ಈ ಸೆಣಸಾಟ ಅಂತ್ಯವಾಯಿತು.

ಆರನೇ ಶ್ರೇಯಾಂಕ ಪಡೆದಿದ್ದ ಶರತ್ ಹಾಗೂ ಸತ್ಯನ್ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಜಪಾನ್ ಆಟಗಾರರ ಎದುರು ಮಣಿದರು.

ಜಿ ಸತ್ಯನ್– ರಾಯಿಟರ್ಸ್ ಚಿತ್ರ

ಜಪಾನ್‌ನ ಯೂಕಿಯಾ ಯುಡಾ–ಶುನ್ಸುಕೆ ತೊಗೊಮಿ ಜೋಡಿಯು 33 ನಿಮಿಷಗಳ ಅವಧಿಯಲ್ಲಿ 11–5, 11–9, 13–11ರಿಂದ ಭಾರತದ ಜೋಡಿಯನ್ನು ಪರಾಭವಗೊಳಿಸಿತು.

ಕಳೆದ ವಾರ ತಂಡ ವಿಭಾಗದಲ್ಲೂ ಭಾರತದ ಪುರುಷರು ಕಂಚಿನ ಪದಕವನ್ನು ಗೆದ್ದುಕೊಂಡಿದ್ದರು.

ಫುಟ್‌ಬಾಲ್: ರಾಜಸ್ಥಾನ್ ಎಫ್‌ಸಿ ಶುಭಾರಂಭ

ಬೆಂಗಳೂರು: ರೋಚಕ ಹಣಾಹಣಿಯಲ್ಲಿ ರಾಜಸ್ಥಾನ್ ಯುನೈಟೆಡ್ ಎಫ್‌ಸಿ ತಂಡ ಮೇಘಾಲಯದ ರಿಂಥಿ ಎಸ್‌ಸಿಯನ್ನು ಮಣಿಸಿ ಐ–ಲೀಗ್ ಅರ್ಹತಾ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ಸಂಜೆ ನಡೆದ ಪಂದ್ಯದಲ್ಲಿ ರಾಜಸ್ಥಾನ್ 3–2ರಲ್ಲಿ ಗೆಲುವು ಸಾಧಿಸಿತು. ಡಿಲ್ಲಿ ರಾಮ್ ಸನ್ಯಾಸಿ (11ನೇ ನಿಮಿಷ), ಸುಖ್‌ಜೀತ್ ಸಿಂಗ್ (45 + 1ನೇ ನಿ) ಮತ್ತು ಅಮನ್ ಥಾಪಾ (68ನೇ ನಿ) ಅವರು ರಾಜಸ್ಥಾನ್ ತಂಡಕ್ಕಾಗಿ ಗೋಲು ಗಳಿಸಿದರು. 79ನೇ ನಿಮಿಷದಲ್ಲಿ ಬಂಪಿಂಕ್‌ರಾವ್ನಮ್ ಮತ್ತು 82ನೇ ನಿಮಿಷದಲ್ಲಿ ಶಿನ್ ಸ್ಟೀವನ್‌ಸನ್ ಅವರು ರಿಂಥಿ ತಂಡಕ್ಕಾಗಿ ಚೆಂಡನ್ನು ಗುರಿ ಮುಟ್ಟಿಸಿದರು.

ಮಂಗಳವಾರ ಕೆಂಕ್ರೆ ಎಫ್‌ಸಿ ಮತ್ತು ಕೇರಳ ಯುನೈಟೆಡ್ ಎಫ್‌ಸಿ, ಕಾರ್ಬೆಟ್ ಎಫ್‌ಸಿ ಮತ್ತು ಎಆರ್‌ಎ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಪ್ರೇರಣಾ ಶತಕ: ಕರ್ನಾಟಕ ಮಹಿಳಾ ತಂಡಕ್ಕೆ ಜಯ

ಬೆಂಗಳೂರು: ಪ್ರೇರಣಾ ಜಿ.ಆರ್. (ಔಟಾಗದೆ 114) ಅವರ ಭರ್ಜರಿ ಶತಕದ ನೆರವಿನಿಂದ ಕರ್ನಾಟಕ ಮಹಿಳಾ ತಂಡದವರು ಬಿಸಿಸಿಐ 19 ವರ್ಷದೊಳಗಿನವರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮಿಜೋರಾಂ ತಂಡವನ್ನು ಮಣಿಸಿ ನಾಕೌಟ್ ಹಂತಕ್ಕೆ ಕಾಲಿಟ್ಟಿದ್ದಾರೆ.

ಜೈಪುರದ ಆರ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ರಾಜ್ಯದ ಆಟಗಾರ್ತಿಯರು 227 ರನ್‌ಗಳಿಂದ ಮಿಜೋರಾಂ ತಂಡವನ್ನು ಸೋಲಿಸಿದರು.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕರ್ನಾಟಕ ನಿಗದಿತ ಓವರ್‌ಗಳಲ್ಲಿ 4 ವಿಕೆಟ್‌ಗೆ 266 ರನ್ ಗಳಿಸಿತು. 101 ಎಸೆತಗಳನ್ನು ಎದುರಿಸಿದ ಪ್ರೇರಣಾ 16 ಬೌಂಡರಿ ಮತ್ತು ಸೊಗಸಾದ ಸಿಕ್ಸರ್ ಸಿಡಿಸಿದರು. ಪೂಜಾ ಡಿ (60), ರೋಶನಿ ಕಿರಣ್ (23) ಮತ್ತು ನಿಕಿ ಪ್ರಸಾದ್ (ಔಟಾಗದೆ 28) ಬ್ಯಾಟಿಂಗ್‌ನಲ್ಲಿ ಮಿಂಚಿದರು.

ಸವಾಲಿನ ಗುರಿ ಬೆನ್ನತ್ತಿದ ಮಿಜೋರಾಂ ತಂಡವು 25.2 ಓವರ್‌ಗಳಲ್ಲಿ 39 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಕರ್ನಾಟಕದ ಪರ ಮಿಥಿಲಾ ವಿನೋದ್ (18ಕ್ಕೆ 3), ಪೂಜಾ ಕುಮಾರಿ (8ಕ್ಕೆ 2) ಮತ್ತು ಚಾಂದಸಿ ಕೃಷ್ಣಮೂರ್ತಿ (6ಕ್ಕೆ 3) ಪರಿಣಾಮಕಾರಿ ಬೌಲಿಂಗ್ ಮಾಡಿದರು.

ಅಪರ್ಣಾ ಪಾಠಕ್ (ಎಡ) ಮತ್ತು ಲಲಿತಾ ಗೌಡ

ಹಂಪಿ ರೇಸ್: ಮಿಂಚಿದ ಬೆಂಗಳೂರಿನ ಅಪರ್ಣ, ಲಲಿತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಸಂತೋಷ್ ಕುಮಾರ್ ಹಾಗೂ ಸಹಚಾಲಕ ನಾಗರಾಜನ್, ವಿನಯ ಕುಮಾರ್ ಮತ್ತು ರವಿ ಕುಮಾರ್ ಜೋಡಿ ಜೆ.ಕೆ ಟಯರ್ ಪ್ರಾಯೋಜಿತ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ರೆಗ್ಯುಲಾರಿಟಿ ರನ್ ಚಾಂಪಿಯನ್‌ಷಿಪ್‌ನ ದಕ್ಷಿಣ ವಲಯದ ಎರಡನೇ ಸುತ್ತಿನಲ್ಲಿ ಗೌರವ ಹಂಚಿಕೊಂಡರು.

ಹಂಪಿಯಲ್ಲಿ ಸೋಮವಾರ ಮುಕ್ತಾಯಗೊಂಡ ರೇಸ್‌ನಲ್ಲಿ ಮೂರು ಬಾರಿಯ ರಾಷ್ಟ್ರೀಯ ಚಾಂಪಿಯನ್ ಈರೋಡ್‌ನ ಕಾರ್ತಿಕ್ ಮಾರುತಿ ಹಾಗೂ ಶಂಕರ್ ಆನಂದ್ ಎರಡನೇ ಸ್ಥಾನ ಗಳಿಸಿದರು. ಕೀರ್ತಿ ಪ್ರಸಾದ್ ಹಾಗೂ ಸಹಚಾಲಕ ಶಕ್ತಿವೇಲು ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

ಬೆಂಗಳೂರಿನ ಮಹಿಳಾ ಟೆಕ್ಕಿಗಳಾದ ಅಪರ್ಣ ಪಾಠಕ್ ಹಾಗೂ ಲಲಿತಾ ಗೌಡ ಮಹಿಳಾ ವಿಭಾಗದ ಎರಡೂ ಸುತ್ತುಗಳಲ್ಲಿ ಗೆಲುವು ಸಾಧಿಸಿ ಪ್ರಬಲ ಎದುರಾಳಿಗಳನ್ನು ಹಿಂದಿಕ್ಕಿ ಕಾರ್ಪೊರೇಟ್ ವಿಭಾಗದ ಮೊದಲ ಸುತ್ತನ್ನು ಗೆದ್ದುಕೊಂಡರು. ಮಂಗಳೂರಿನ ಅಶ್ವಿನ್ ಪಿಂಟೊ ಹಾಗೂ ಸಂದೀಪ್ ಡಿ‘ಸಿಲ್ವಾ ಕರ್ನಾಟಕದ ಭರವಸೆ ಎನಿಸಿಕೊಂಡರು. ತಂದೆ ಮಗ ಜೋಡಿ ಅನಿಲ್ ಮತ್ತು ಅಮಲ್ ಅಬ್ಬಾಸ್ ಅವರು ಕಾರ್ಪೊರೇಟ್ ವಿಭಾಗದ ಎರಡನೇ ಸುತ್ತಿನಲ್ಲಿ ಜಯ ಸಾಧಿಸಿದರು.

ರ‍್ಯಾಂಕಿಂಗ್: ಅಗ್ರ 10ರಿಂದ ಹೊರಬಿದ್ದ ಒಸಾಕ

ಪ್ಯಾರಿಸ್ (ಎಎಫ್‌ಪಿ): ಜಪಾನ್‌ನ ನವೊಮಿ ಒಸಾಕ ಅವರು ವಿಶ್ವ ಟೆನಿಸ್ ರ‍್ಯಾಂಕಿಂಗ್‌ನಲ್ಲಿ ಅಗ್ರ 10ರಿಂದ ಹೊರಬಿದ್ದಿದ್ದಾರೆ. ಮೂರು ವರ್ಷಗಳ ಹಿಂದೆ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದ ನಂತರ ಇದೇ ಮೊದಲ ಬಾರಿ ಈ ಕುಸಿತ ಕಂಡಿದ್ದಾರೆ.

ಒಸಾಕ ಒಸಾಕ– ರಾಯಿಟರ್ಸ್

ನಾಲ್ಕು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ಒಸಾಕ ಸೋಮವಾರ ಬಿಡುಗಡೆಗೊಂಡಿರುವ ರ‍್ಯಾಂಕಿಂಗ್ ಪಟ್ಟಿಯಲ್ಲಿ 12ನೇ ಸ್ಥಾನದಲ್ಲಿದ್ದಾರೆ.

ಈ ಹಿಂದೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ಒಂದನೇ ಸ್ಥಾನಕ್ಕೇರಿದ್ದ ಅವರು ಕಳೆದ ತಿಂಗಳಲ್ಲಿ ನಡೆದ ಅಮೆರಿಕ ಓಪನ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಸೋತು ಹೊರಬಿದ್ದಿದ್ದರು. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿ ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಟೂರ್ನಿಯಲ್ಲಿ ಅವರು ಆಡಿರಲಿಲ್ಲ. ಸದ್ಯದಲ್ಲೇ ಅಂಗಣಕ್ಕೆ ಮರಳುವುದಾಗಿ 23 ವರ್ಷದ ಒಸಾಕ ಕಳೆದ ವಾರ ಹೇಳಿದ್ದಾರೆ.

ಎರಡು ಬಾರಿಯ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ವಿಜೇತೆ ಗಾರ್ಬೈನ್ ಮುಗುರುಜಾ ಅವರು ರ‍್ಯಾಂಕಿಂಗ್ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿದ್ದಾರೆ. ಚಿಕಾಗೊದಲ್ಲಿ ಕಳೆದ ವಾರ ನಡೆದಿದ್ದ ಟೂರ್ನಿಯಲ್ಲಿ ಅವರು ಪ್ರಶಸ್ತಿ ಗೆದ್ದುಕೊಂಡಿದ್ದರು.

ಫೈನಲ್‌ನಲ್ಲಿ ಮುಗುರುಜಾ ಎದುರು ಸೋತಿದ್ದ ಟುನೀಷಿಯಾದ ಓನ್ಸ್ ಜಬೇವುರ್ ಜೀವನಶ್ರೇಷ್ಠ 14ನೇ ಸ್ಥಾನಕ್ಕೆ ಬಡ್ತಿ ಪಡೆದುಕೊಂಡಿದ್ದಾರೆ.

ರ‍್ಯಾಂಕಿಂಗ್: ಅಗ್ರ 10 ಆಟಗಾರ್ತಿಯರು

ರ‍್ಯಾಂಕ್	ಆಟಗಾರ್ತಿ	ದೇಶ	ಪಾಯಿಂಟ್ಸ್
1	ಆ್ಯಶ್ಲಿ ಬಾರ್ಟಿ	ಆಸ್ಟ್ರೇಲಿಯಾ	9,077
2	ಅರಿನಾ ಸಬಲೆಂಕಾ	ಬೆಲಾರಸ್	7,115
3	ಕರೊಲಿನಾ ಪ್ಲಿಸ್ಕೋವ	ಜೆಕ್ ಗಣರಾಜ್ಯ	5,285
4	ಇಗಾ ಸ್ವಾಟೆಕ್	ಪೋಲೆಂಡ್	4,756
5	ಬಾರ್ಬೊರಾ ಕ್ರೆಸಿಕೋವ	ಜೆಕ್ ಗಣರಾಜ್ಯ	4,668
6	ಗಾರ್ಬೈನ್ ಮುಗುರುಜಾ	ಸ್ಪೇನ್	4,595
7	ಎಲಿನಾ ಸ್ವಿಟೋಲಿನಾ	ಉಕ್ರೇನ್	4,376
8	ಸೋಫಿಯಾ ಕೆನಿನ್	ಅಮೆರಿಕ	4,190
9	ಮರಿಯಾ ಸಕ್ಕರಿ	ಬ್ರಿಟನ್	4,055
10	ಬೆಲಿಂಡಾ ಬೆನ್ಸಿಕ್	ಸ್ವಿಟ್ಜರ್ಲೆಂಡ್	3,835

ಚೇತನ್ ರೆಡ್ಡಿ

ಈಕ್ವೆಸ್ಟ್ರಿಯನ್: ಚೇತನ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೇತನ್ ರೆಡ್ಡಿ ಅವರು ಈ ವಾರಾಂತ್ಯದಲ್ಲಿ ನಡೆದ ಈಕ್ವೆಸ್ಟ್ರಿಯನ್ ಪ್ರೀಮಿಯರ್ ಲೀಗ್‌ನ ಮತ್ತೊಂದು ಚಿನ್ನ ಗೆದ್ದುಕೊಂಡಿದ್ದಾರೆ. ಸ್ಯಾಂಡ್ರಾ ಬ್ಲ್ಯೂ ಕುದುರೆಯೊಂದಿಗೆ ಅವರು ಎಸ್‌ಜೆ ಶೋ ಜಂಪಿಂಗ್ 130–135 ಸೆ.ಮೀ. ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.

ಈ ವಿಭಾಗದಲ್ಲಿ ಬಾಲಾಜಿ ವಿ. (ಫ್ರೀಜಿಂಗ್ ರೇನ್ ಕುದುರೆ) ಮತ್ತು ಕೇವಾನ್ ಸೆತಲ್ವಾಡ್ (ಚೆರೋಕಿ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಸ್ಯಾಫ್ ಕಪ್: 76ನೇ ಗೋಲು ಗಳಿಸಿದ ನಾಯಕ ಚೆಟ್ರಿ

ಡ್ರಾ ಪಂದ್ಯದಲ್ಲಿ ಭಾರತ

ಮಾಲಿ (ಪಿಟಿಐ): ಪಂದ್ಯದ ಮೊದಲಾರ್ಧದಲ್ಲೇ ನಾಯಕ ಸುನಿಲ್ ಚೆಟ್ರಿ ಗೋಲು ಗಳಿಸಿ ಭರವಸೆ ಮೂಡಿಸಿದರು. ಆದರೆ ದ್ವಿತೀಯಾರ್ಧದಲ್ಲಿ ತಿರುಗೇಟು ನೀಡಿದ ಬಾಂಗ್ಲಾದೇಶ ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು. ಸೋಮವಾರ ನಡೆದ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ತನ್ನ ಮೊದಲ ಪಂದ್ಯದಲ್ಲಿ ಭಾರತ 1–1ರ ಡ್ರಾಗೆ ಸಮಾಧಾನಪಟ್ಟುಕೊಂಡಿತು.

ಚೆಂಡಿನೊಂದಿಗೆ ಮುನ್ನುಗ್ಗಿದ ಸುನಿಲ್ ಚೆಟ್ರಿ –ಎಐಎಫ್‌ಎಫ್ ಚಿತ್ರ

37 ವರ್ಷದ ಸುನಿಲ್ ಚೆಟ್ರಿ 27ನೇ ನಿಮಿಷದಲ್ಲಿ ಚೆಂಡನ್ನು ಗುರಿ ತಲುಪಿಸಿದರು. ಈ ಮೂಲಕ ತಮ್ಮ 121ನೇ ಪಂದ್ಯದಲ್ಲಿ 76ನೇ ಗೋಲು ಗಳಿಸಿದರು. ಫುಟ್‌ಬಾಲ್ ದಂತಕತೆ, ಬ್ರೆಜಿಲ್‌ನ ಪೆಲೆ ಅವರ ಸಾಧನೆಯೊಂದಿಗೆ ಸಮಬಲ ಸಾಧಿಸಲು ಚೆಟ್ರಿ ಅವರಿಗೆ ಇನ್ನು ಒಂದು ಗೋಲು ಬೇಕಾಗಿದೆ. ಈಗ ಸಕ್ರಿಯರಾಗಿರುವವರ ಪೈಕಿ ಅತಿ ಹೆಚ್ಚು ಗೋಲು ಗಳಿಸಿದವರ ಸಾಲಿನಲ್ಲಿ ಚೆಟ್ರಿ ಈಗ ನಾಲ್ಕನೇ ಸ್ಥಾನದಲ್ಲಿದ್ದಾರೆ. ಕ್ರಿಸ್ಟಿಯಾನೊ ರೊನಾಲ್ಡೊ (111), ಲಯೊನೆಲ್ ಮೆಸ್ಸಿ (79) ಮತ್ತು ಅಲಿ ಮಬ್‌ಕೌತ್ (77) ಮೊದಲ ಮೂರು ಸ್ಥಾನದಲ್ಲಿದ್ದಾರೆ.

ಭಾರತ ತಂಡದ ಆರಂಭ ಉತ್ತಮವಾಗಿತ್ತು. ಕೆಲವೊಮ್ಮೆ ಚೆಂಡಿನ ಮೇಲೆ ಹಿಡಿತ ಸಾಧಿಸುವಲ್ಲಿ ಎದುರಾಳಿಗಳು ಯಶಸ್ವಿಯಾಗಿದ್ದರೂ ಒಟ್ಟಾರೆಯಾಗಿ ಚೆಟ್ರಿ ಬಳಗ ಆಧಿಪತ್ಯ ಸ್ಥಾಪಿಸಿತ್ತು. 54ನೇ ನಿಮಿಷದಲ್ಲಿ ಲಿಸ್ಟನ್ ಕೊಲ್ಯಾಕೊ ಅವರನ್ನು ನೆಲಕ್ಕೆ ಉರುಳಿಸಿ ಬಾಂಗ್ಲಾದೇಶದ ವಿಶ್ವನಾಥ್ ಘೋಷ್ ರೆಡ್ ಕಾರ್ಡ್ ಪಡೆದು ಹೊರ ನಡೆದರು. ಆ ನಂತರವಂತೂ ಭಾರತಕ್ಕೆ ಅತ್ಯುತ್ತಮ ಅವಕಾಶ ಇತ್ತು. ಆದರೆ ಬಾಂಗ್ಲಾದ ಪ್ರತಿದಾಳಿಯನ್ನು ಮೀರಿ ನಿಲ್ಲಲು ಭಾರತಕ್ಕೆ ಸಾಧ್ಯವಾಗಲಿಲ್ಲ. 74ನೇ ನಿಮಿಷದಲ್ಲಿ ಗೋಲು ಗಳಿಸಿದ ಬಾಂಗ್ಲಾ ಸಮಬಲ ಸಾಧಿಸಿತು.

ಆರಂಭದಲ್ಲಿ ಆಕ್ರಮಣಕಾರಿ ಆಟಕ್ಕೆ ಮುಂದಾದ ಭಾರತಕ್ಕೆ ಚಿಂಗ್ಲೆನ್ಸಾನಾ ಸಿಂಗ್ ಮೂಲಕ ಗೋಲು ಗಳಿಸುವ ಅವಕಾಶ ಒದಗಿತ್ತು. ಆದರೆ ಇಬ್ರಾಹಿಂ ಅವರು ಇದಕ್ಕೆ ಅಡ್ಡಿಯಾದರು. ಬಾಂಗ್ಲಾದೇಶಕ್ಕೆ ಕೆಲವು ಕಾರ್ನರ್ ಅವಕಾಶಗಳು ಲಭಿಸಿದವು. ಆದರೆ ಉದಾಂತ ಸಿಂಗ್ ಅವರು ಅಮೋಘ ಆಟವಾಡಿ ಭಾರತದ ಆತಂಕ ದೂರ ಮಾಡಿದರು. 24ನೇ ನಿಮಿಷದಲ್ಲಿ ಮನ್ವೀರ್ ಸಿಂಗ್ ಹೆಡ್ ಮಾಡಿದ ಚೆಂಡು ಗುರಿ ಮುಟ್ಟಲಿಲ್ಲ. ಆದರೆ ನಂತರದ ಅವಕಾಶದಲ್ಲಿ ಸುನಿಲ್ ಚೆಟ್ರಿ ಯಶಸ್ಸು ಕಂಡರು.

ಬಲಭಾಗದಿಂದ ಪ್ರೀತಂ ಕೊತಾಲ್ ನೀಡಿದ ಚೆಂಡನ್ನು ನಿಯಂತ್ರಿಸಿದ ಉದಾಂತ ಸಿಂಗ್ ನಂತರ ಚೆಟ್ರಿಯತ್ತ ತಳ್ಳಿದರು.

ಚೆಟ್ರಿ ನಿಖರವಾಗಿ ಒದ್ದು ಗುರಿ ಮುಟ್ಟಿಸಿದರು. 39ನೇ ನಿಮಿಷದಲ್ಲಿ ಚೆಟ್ರಿ ಮತ್ತೊಂದು ಗೋಲು ಗಳಿಸುವ ಪ್ರಯತ್ನ ಮಾಡಿದರು. ಆದರೆ ಗೋಲ್‌ಕೀಪರ್ ಅನಿಸುರ್ ರಹಮಾನ್ ಅದನ್ನು ತಡೆದರು. ಗುರುವಾರ ಭಾರತ ತಂಡ ಶ್ರೀಲಂಕಾವನ್ನು ಎದುರಿಸಲಿದೆ.

ಅರ್ಜುನ್ ರನ್ನರ್‌ಅಪ್

ಪ್ಲೊವ್ಡಿವ್, ಬಲ್ಗೇರಿಯಾ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟ‌ರ್ ಅರ್ಜುನ್ ಎರಿಗೈಸಿ ಅವರು ಇಲ್ಲಿ ನಡೆದ 21 ವರ್ಷದೊಳಗಿನವರ ರೌಂಡ್ ಟೇಬಲ್ ಓಪನ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸ್ಥಾನ ಗಳಿಸಿದರು.

18 ವರ್ಷದ ಅರ್ಜುನ್ ಹಾಗೂ ರಷ್ಯಾದ ಅಲೆಕ್ಸಿ ಸರನಾ ತಲಾ ಏಳು ಪಾಯಿಂಟ್ಸ್ ಕಲೆಹಾಕಿದ್ದರು. ಆದರೆ ಟೈಬ್ರೇಕರ್‌ನಲ್ಲಿ ಭಾರತದ ಆಟಗಾರ ಹಿನ್ನಡೆ ಕಂಡರು. ಸರನಾ ಪ್ರಶಸ್ತಿ ಗೆದ್ದರು.

ಶೂಟಿಂಗ್: ಚಿನ್ನ ಗೆದ್ದ ನಾಮ್ಯಾ

ಲಿಮಾ, ಪೆರು (ಪಿಟಿಐ): ಯುವ ತಾರೆ ಮನು ಭಾಕರ್ ಅವರನ್ನು ಮೀರಿಸಿದ ಭಾರತದ 14 ವರ್ಷ ವಯಸ್ಸಿನ ಶೂಟರ್ ನಾಮ್ಯಾ ಕಪೂರ್ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 25 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ.

ಸೋಮವಾರ ನಡೆದ ಫೈನಲ್‌ನಲ್ಲಿ ನಾಮ್ಯಾ ಅವರು 36 ಸ್ಕೋರ್ ದಾಖಲಿಸಿದರು. ಫ್ರಾನ್ಸ್‌ನ ಕ್ಯಾಮಿಲೆ ಜೆಡ್ರೆಜಿವಿಸ್ಕಿ (33) ಹಾಗೂ ಭಾರತದ ಮನು (31) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಸ್ಪರ್ಧೆಯಲ್ಲಿದ್ದ ಭಾರತದ ಇನ್ನೊಬ್ಬ ಶೂಟರ್ ರಿಧಮ್ ಸಂಗ್ವಾನ್ ನಾಲ್ಕನೇ ಸ್ಥಾನ ಗಳಿಸಿದರು. ಭಾರತ ಸದ್ಯ ಪದಕಪಟ್ಟಿಯಲ್ಲಿ ಏಳು ಚಿನ್ನ, ಆರು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳೊಂದಿಗೆ (ಒಟ್ಟು 16) ಮೊದಲ ಸ್ಥಾನದಲ್ಲಿದೆ.

ಕೋಲ್ಕತ್ತ ರೇಸ್

ಸಿತಾರ ಗೆಲ್ಲುವ ನಿರೀಕ್ಷೆ

ಆರ್ಕೇಡ್ ಹ್ಯಾಂಡಿಕ್ಯಾಪ್ ಮಂಗಳವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಿತಾರ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ರೈಟರಿಯಾ 3, ದಿ ಇಂಡಿಕೇಟರ್ 2, ರೋಮನ್ 1
2ನೇ ರೇಸ್: ಜಸ್ಟಿಫೈಡ್ 3, ರೆಸೊಲ್ಯೂಟ್ 1, ಹೆಡ್‌ಬಾಯ್ 4
3ನೇ ರೇಸ್: ಕೇಮ್‌ಲಿಯೋನ್ಸ್ ಇಮೇಜ್ 4, ರೇರ್ ಬರ್ಡ್ 6, ಗೋಲ್ಡ್ ಬಾಂಡ್ 2
4ನೇ ರೇಸ್: ಸಿತಾರ 3, ಪಾಂಟಿಯಸ್ ಪಿಲೇಟ್ 2, ಮೌಂಟೇನ್ ಲಯನ್ 5
5ನೇ ರೇಸ್: ಟೈಮೂರ್ಸ್ ಚಾಯ್ಸ್ 3, ಸೀ ಆಫ್ ಕಾರ್ಟೆಜ್ 5, ಆಟಮ್ 2
6ನೇ ರೇಸ್: ಡಿ ನೈಟ್ ಮೈಸೂರು 2, ದಂಡಿ ಸತ್ಯಾಗ್ರಹ 1, ಲ್ಯಾಕ್ರೋಸ್ 3

ಉತ್ತಮ ಬೆಟ್: ಡಿ ನೈಟ್ ಮೈಸೂರು

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5,6	1,2,3	4,5,6

ಟೆನಿಸ್: ಪ್ರಶಸ್ತಿ ಗೆದ್ದ ರೂಡ್

ಲಾಸ್ ಏಂಜಲೀಸ್ (ಎಪಿ): ಬ್ರಿಟನ್‌ನ ಕ್ಯಾಮರಾನ್ ನೋರಿ ವಿರುದ್ಧ ಅಬ್ಬರಿಸಿದ ನಾರ್ವೆಯ ಕ್ಯಾಸ್ಪರ್ ರೂಡ್ ಅವರು ಸ್ಯಾನ್ ಡಿಯೆಗೊ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಅವರು 6-0, 6-2ರಲ್ಲಿ ಜಯ ಗಳಿಸಿದರು.

Product shown in the picture may vary from the actual product available in the market. Accessories shown in the product are not part of the standard equipment. *Finance Scheme offers are available through select preferred finance partners on select models for select profile of customers at their sole discretion and is subject to the Finance Company Policy. No two offers can be clubbed together. Cashback offer mentioned is 5% Cashback up to ₹5000 per card on Minimum Transaction of ₹50000, applicable only on EMI transaction via select SBI Credit Cards, once per month during the offer period. Scheme is valid from 1st September to 30th November 2021. Schemes & offers are available at select Dealerships only and can be withdrawn at any time without prior notice. ##₹5 Lakh Personal Accident Cover applicable on the purchase of Honda Joy Club Loyalty membership. All claims will settle as per the policy & guidelines of the insurance company. For more details, please call the HJC helpdesk on 18005322555.
Honda Motorcycle and Scooter India Pvt. Ltd., Registered Office: Commercial Complex II, Sector - 49-50, Golf Course Extension Road, Gurugram - 122018 (Haryana), India; **Website:** www.honda2wheelersindia.com; **Customer Care:** customercare@honda2wheelersindia.com